ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಮಮತಾ ರಕ್ಷತಿ ರಕ್ಷಿತಃ ಎಂದ ಕೊಲ್ಕತ್ತಾ ಪೊಲೀಸ್ ಕಮಿಶನರ್ ರಾಜೀವ್ ಕುಮಾರ್



ಸಂಪುಟ 13 | ಸಂಚಿಕೆ 7 | ಫೆಬ್ರವರಿ 11-17, 2019 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com

ಬಿಜೆಪಿ ತೃಣಮೂಲ ಓಡಿಸಿ ಭಾರತ ಬಂಗಾಳ ಉಳಿಸಿ






ಕೃಷಿ ಸಂಕಟ ನಿವಾರಿಸದ ಬಜೆಟ್




ಮತ್ತೆ ಆಪರೇಷನ್ ಕಮಲ



ಮೋದಿ-ದೀದಿ ಪ್ರಹಸನ



‘ಉದ್ಯೋಗ-ಹೀನ’ದಿಂದ ‘ಉದ್ಯೋಗ-ನಷ್ಟ’ದತ್ತ



‘ಸಾರ್ವತ್ರಿಕ ಮೂಲ ಆದಾಯ’ದ ಹೂರಣವೇನು?

ಬಂಗಾಲದ ಅನಿಷ್ಟಕಾರಿ ಬೆಳವಣಿಗೆಗಳಲ್ಲಿ ರಾಜಕೀಯ ದುರುದ್ದೇಶದ ವಾಸನೆ–ಸಿಪಿಐ(ಎಂ) ಪೊಲಿಟ್‌ಬ್ಯುರೊ

"ಸಾರ್ವಜನಿಕ ಲೂಟಿಯ ಎಲ್ಲ ಅಪರಾಧಿಗಳನ್ನು, ಈಗ ಬಿಜೆಪಿಯಲ್ಲಿರಲಿ ಅಥವ ಟಿಎಂಸಿಯಲ್ಲಿರಲಿ, ಶಿಕ್ಷಿಸಬೇಕು"

ಪಶ್ಚಿಮ ಬಂಗಾಲದಲ್ಲಿ ಫೆಬ್ರುವರಿ 3ರ ರಾತ್ರಿಯಿಂದ ಆಗುತ್ತಿರುವ ಬೆಳವಣಿಗೆಗಳ ಬಗ್ಗೆ ಟಿಪ್ಪಣಿ ಮಾಡುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಇದರಲ್ಲಿ ರಾಜಕೀಯ ದುರುದ್ದೇಶಗಳ ವಾಸನೆ ಹೊಡೆಯುತ್ತಿದೆ ಎಂದು ಹೇಳಿದೆ. ಜನಗಳ ಕೋಟ್ಯಂತರ ರೂಪಾಯಿಗಳ ಲೂಟಿ ಹೊಡೆದ ಚಿಟ್ ಫಂಡ್ ಹಗರಣಗಳ ಸಿಬಿಐ ತನಿಖೆ ಪೂರ್ಣ ಐದು ವರ್ಷಗಳ ಕಾಲ ನಿಧಾನಗತಿಯಲ್ಲಿ ಸಾಗಿದ್ದು, ಈಗ ಇದ್ದಕಿದ್ದಂತೆ, ಕೊಲ್ಕತಾದ ಬ್ರಿಗೇಡ್ ಪರೇಡ್ ಮೈದಾನದಲ್ಲಿ ಎಡರಂಗದ ಚಾರಿತ್ರಿಕ ಮತ್ತು ಹಿಂದೆಂದೂ ಕಾಣದ ರೀತಿಯ ಬೃಹತ್ ರ್‍ಯಾಲಿ ನಡೆದ ಕೆಲವೇ ಗಂಟೆಗಳೊಳಗಾಗಿ ಈ ಬೆಳವಣಿಗೆಗಳು ನಡೆದಿರುವುದು ಪಶ್ಚಿಮ ಬಂಗಾಲದಲ್ಲಿ ಬಿಜೆಪಿ ಮತ್ತು ಟಿಎಂಸಿ ಎರಡರ ವಿರುದ್ಧವೂ ಹೆಚ್ಚುತ್ತಿರುವ ಜನಗಳ ಪ್ರತಿಭಟನೆಗಳಿಂದ ಸಾರ್ವಜನಿಕ ಗಮನವನ್ನು ಬೇರೆಡೆಗೆ ತಿರುಗಿಸುವ ಗುರಿಯನ್ನೂ ಹೊಂದಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಸಾರ್ವಜನಿಕ ಲೂಟಿಯ ಎಲ್ಲ ಅಪರಾಧಿಗಳನ್ನು, ಈಗ ಬಿಜೆಪಿಯಲ್ಲಿರಲಿ ಅಥವ ಟಿಎಂಸಿ ಯಲ್ಲಿರಲಿ, ಅವರನ್ನು ಶಿಕ್ಷಿಸಬೇಕು, ಅವರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡು, ಜನಗಳಿಂದ ಲೂಟಿ ಹೊಡೆದ ಹಣಗಳನ್ನು ಬಡ್ಡಿ ಸಹಿತ ಅವರಿಗೆ ಹಿಂದಿರುಗಿಸಬೇಕು ಎಂಬ ಆಗ್ರಹವನ್ನು ಪುನರುಚ್ಚರಿಸಿದೆ.

ಸಿಪಿಐ(ಎಂ) ಪೊಲಿಟ್‌ಬ್ಯುರೊ ಫೆಬ್ರುವರಿ 4 ರಂದು ನೀಡಿರುವ ಹೇಳಿಕೆಯ ಪೂರ್ಣ ಪಾಟವನ್ನು ಈ ಮುಂದೆ ಕೊಡಲಾಗಿದೆ:

ಬಹಳ ಹಿಂದೆ 2014ರಲ್ಲಿ ಸುಪ್ರಿಂ ಕೋರ್ಟ್ ಸಿಬಿಐ ಗೆ ಸಾರಧಾ, ರೋಸ್ ವ್ಯಾಲಿ ಮುಂತಾದ ಚಿಟ್ ಫಂಡ್ ಕಂಪನಿಗಳು ಜನಗಳ ಕೋಟ್ಯಂತರ ರೂಪಾಯಿಗಳನ್ನು ಲೂಟಿ ಹೊಡೆಯುವುದರಲ್ಲಿ ಇರುವ ಒಂದು ದೊಡ್ಡ ಪಿತೂರಿಯ ತನಿಖೆ ನಡೆಸಲು ಹೇಳಿತ್ತು. ಪೂರ್ಣ ಐದು ವರ್ಷಗಳ ಕಾಲ ಮೋದಿ ಸರಕಾರ ತನ್ನ ಘೋಷಣೆಗಳಿಗೆ ವ್ಯತಿರಿಕ್ತವಾಗಿ, ಈ ವಿಷಯದಲ್ಲಿ ಗಂಭೀರವಾಗಿ ಮುಂದುವರೆಯಲಿಲ್ಲ. ಈ ಅವಧಿಯಲ್ಲಿ ಈ ಹಗರಣಗಳಲ್ಲಿ ಪ್ರಮುಖ ಆರೋಪಿಗಳಾಗಿದ್ದ ಸಂಸದರಾರ ಮುಕುಲ್ ರಾಯ್, ಹೇಮಂತ ಶರ್ಮರಂತವರು ಬಿಜೆಪಿಗೆ ಹೋದರು. ಬಿಜೆಪಿ ಮತ್ತು ಟಿಎಂಸಿ ಈ ಎರಡೂ ಪಕ್ಷಗಳವರು ಈ ಲೂಟಿಯಲ್ಲಿ ಪಾಲುದಾರರು ಮತ್ತು ಇದು ಸುಪ್ರಿಂ ಕೋರ್ಟ್ ಆದೇಶದ ತನಿಖೆಗಳು ನಿಧಾನಗೊಳ್ಳಲು ಕಾರಣ ಎಂಬುದು ಸ್ಪಷ್ಟ.

ಈ ಹಿನ್ನೆಲೆಯಲ್ಲಿ, ಮೋದಿ ಸರಕಾರ ಬಿಜೆಪಿಯೇತರ ರಾಜ್ಯ ಸರಕಾರಗಳು ಮತ್ತು ಸಿಬಿಐ ಸೇರಿದಂತೆ ಸಂವಿಧಾನಿಕ ಸಂಸ್ಥೆಗಳ ಮೇಲೆ ಸರ್ವಾಧಿಕಾರಶಾಹಿ ದಾಳಿಗಳನ್ನು ನಡೆಸುತ್ತಿರುವುದನ್ನು ಕಾಣುತ್ತಿರುವಾಗ, ಅದರ ಈಗಿನ ನಡೆಯಲ್ಲಿ ರಾಜಕೀಯ ದುರುದ್ದೇಶದ ವಾಸನೆ ಹೊಡೆಯುತ್ತಿದೆ. ಬಂಗಾಲದಲ್ಲಿ ಪ್ರಜಾಪ್ರಭುತ್ವದ ಕೊಲೆಯ ದಾಖಲೆ ಹೊಂದಿರುವ ಟಿಎಂಸಿ ಸರಕಾರ ಮತ್ತು ಅದರ ಮುಖ್ಯಮಂತ್ರಿಗಳು ಅದಕ್ಕೆ ಸ್ಪಂದಿಸಿರುವ ರೀತಿಯಲ್ಲಿಯೂ ರಾಜಕೀಯ ದುರುದ್ದೇಶ ಕಾಣಿಸುತ್ತಿದೆ.

ಈ ದೈತ್ಯ ಪ್ರಮಾಣದ ಹಗರಣದ ಅಪರಾಧಿಗಳನ್ನು ಹಿಡಿದು ಹಾಕಬೇಕು, ಅವರ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಮತ್ತು ಅದನ್ನು ಜನಗಳಿಂದ ಲೂಟಿ ಹೊಡೆದ ಹಣವನ್ನು ಹಿಂದಿರುಗಿಸಲು ಬಳಸಬೇಕು ಎಂದು ಸಿಪಿಐ(ಎಂ) ನಿರಂತರವಾಗಿ ಆಗ್ರಹಿಸುತ್ತ ಬಂದಿದೆ.

ಬ್ರಿಗೇಡ್ ಪರೇಡ್ ಮೈದಾನದಲ್ಲಿ ಎಡರಂಗದ ಚಾರಿತ್ರಿಕ ಮತ್ತು ಹಿಂದೆಂದೂ ಕಾಣದ ರೀತಿಯ ಬೃಹತ್ ನಡೆದ ಕೆಲವೇ ಗಂಟೆಗಳೊಳಗಾಗಿ ಈ ಬೆಳವಣಿಗೆಗಳು ನಡೆದಿರುವುದು ಪಶ್ಚಿಮ ಬಂಗಾಲದಲ್ಲಿ ಬಿಜೆಪಿ ಮತ್ತು ಟಿಎಂಸಿ ಎರಡರ ವಿರುದ್ಧವೂ ಹೆಚ್ಚುತ್ತಿರುವ ಜನಗಳ ಪ್ರತಿಭಟನೆಗಳಿಂದ ಸಾರ್ವಜನಿಕ ಗಮನವನ್ನು ಬೇರೆಡೆಗೆ ತಿರುಗಿಸುವ ಗುರಿಯನ್ನೂ ಹೊಂದಿದೆ.

ಈ ಸಾರ್ವಜನಿಕ ಲೂಟಿಯ ಎಲ್ಲ ಅಪರಾಧಿಗಳನ್ನು, ಅವರು ಈಗ ಬಿಜೆಪಿಯಲ್ಲಿರಲಿ ಅಥವ ಟಿಎಂಸಿ ಯಲ್ಲಿರಲಿ, ಶಿಕ್ಷಿಸಬೇಕು, ಅವರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡು, ಜನಗಳಿಂದ ಲೂಟಿ ಹೊಡೆದ ಹಣಗಳನ್ನು ಬಡ್ಡಿ ಸಹಿತ ಜನಗಳಿಗೆ ಹಿಂದಿರುಗಿಸಬೇಕು ಎಂಬ ಆಗ್ರಹವನ್ನು ಪುನರುಚ್ಚರಿಸುತ್ತದೆ.

ಸುಪ್ರಿಂ ಕೋರ್ಟ್ ಬಿಜೆಪಿ ಮತ್ತು ಟಿಎಂಸಿ ಎರಡಕ್ಕೂ ಅವರವರ ಜಾಗವನ್ನು ತೋರಿಸಿದೆ–ಯೆಚುರಿ

ಚಿಟ್ ಫಂಡ್ ಹಗರಣಗಳ ಬಗ್ಗೆ ಸಿಬಿಐ ತನಿಖೆಯಲ್ಲಿ ಕೊಲ್ಕತಾದ ಪೊಲಿಸ್ ಕಮಿಶನರ್ ಮೇಘಾಲಯದ ರಾಜಧಾನಿ ಶಿಲ್ಲೊಂಗ್ ನಲ್ಲಿ ಸಿಬಿಐ ಮುಂದೆ ಹಾಜರಾಗಬೇಕು, ಸಿಬಿಐ ನೊಂದಿಗೆ ಈ ವಿಷಯದಲ್ಲಿ ವಿಧೇಯತೆಯಿಂದ ಸಹಕರಿಸಬೇಕು ಹಾಗೂ ಸಿಬಿಐ ಈ ತನಿಖೆಯ ವೇಳೆಯಲ್ಲಿ ಬಂಧನವೂ ಸೇರಿದಂತೆ ಯಾವುದೇ ದಬಾವಣೆಯ ಕ್ರಮಗಳನ್ನು ಕೈಗೊಳ್ಳಬಾರದು ಎಂದು ಫೆಬ್ರುವರಿ 5ರಂದು ಸುಪ್ರಿಂ ಕೋರ್ಟ್ ನಿರ್ದೇಶನವಿತ್ತಿದೆ.

ಈ ಮೂಲಕ ಸುಪ್ರಿಂ ಕೋರ್ಟ್ ಬಿಜೆಪಿ ಮತ್ತು ಟಿಎಂಸಿ ಈ ಎರಡೂ ಪಕ್ಷಗಳಿಗೆ ಅವರವರ ಜಾಗವನ್ನು ತೋರಿಸಿಕೊಟ್ಟಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಹೇಳಿದ್ದಾರೆ. ಈ ಎರಡೂ ಪಕ್ಷಗಳು ಈ ಹಗರಣದ ಲೂಟಿಯಲ್ಲಿ ಭಾಗೀದಾರರು ಎಂದು ಅವರು ಈ ಬಗ್ಗೆ ಪ್ರಶ್ನಿಸಿದ ಪತ್ರಕರ್ತರಿಗೆ ನೆನಪಿಸಿದರು.

ಇದನ್ನು ರಾಜ್ಯಗಳ ಅಧಿಕಾರಗಳ ಮೇಲಿನ ಹಲ್ಲೆ ಎಂದು ಹೇಳಲಾಗುತ್ತಿದೆ. ಸಿಬಿಐ ತಾನಾಗಿಯೇ ಈ ತನಿಖೆ ನಡೆಸುತ್ತಿದ್ದರೆ, ಅದರ ಈಗಿನ ನಡೆಯ ಬಗ್ಗೆ ಆಕ್ಷೇಪ ಎತ್ತಬಹುದಾಗಿತ್ತು. ಆದರೆ ಇದು ಸುಪ್ರಿಂ ಕೋರ್ಟ್ ಆದೇಶದ ಮೇರೆಗೆ ನಡೆಯುತ್ತಿರುವ ತನಿಖೆಯಾದ್ದರಿಂದ , ಸಿಬಿಐ ತನಿಖೆಯನ್ನು ಯಾವುದೇ ರಾಜ್ಯದಲ್ಲಿ ನಡೆಸಿದರೆ ಅದನ್ನು ಕೇಂದ್ರ–ರಾಜ್ಯದ ಪ್ರಶ್ನೆಯಾಗಿ ಕಾಣಲಾಗದು ಎಂದು ಅಭಿಪ್ರಾಯ ಪಟ್ಟಿರುವ ಯೆಚುರಿಯವರು "ಎರಡೂ ಭ್ರಷ್ಟ ಪಕ್ಷಗಳನ್ನು ಸುಪ್ರಿಂ ಕೋರ್ಟ್ ಅವರವರ ಜಾಗದಲ್ಲಿ ಇಟ್ಟಿದೆ, ಟಿಎಂಸಿಯ ಉನ್ನತ ಮುಖಂಡರ ತನಿಖೆಯನ್ನೂ ನಡೆಸಲೇ ಬೇಕು, ಹಲವು ಟಿಎಂಸಿ ಎಂಪಿಗಳು ಈಗಾಗಲೇ ಬಂಧನಗಳನ್ನು, ಚಾರ್ಜ್ ಶೀಟ್ ಗಳನ್ನು ಎದುರಿಸಿದ್ದಾರೆ. ಬಿಜೆಪಿ ಈ ತನಿಖೆ ನಡೆಸಲು ಐದು ವರ್ಷ ಕಾದಿರುವುದೇಕೆ, ಭ್ರಷ್ಟ ಸದಸ್ಯರನ್ನು ತಮ್ಮೆಡೆಗೆ ಸೆಳೆದುಕೊಳ್ಳಲಿಕ್ಕೇನು?" ಎಂದು ಪ್ರಶ್ನಿಸಿದ್ದಾರೆ.

ಟಿಎಂಸಿಯ ಸಂಸ್ಥಾಪಕ ಮುಖಂಡರುಗಳಲ್ಲಿ ಒಬ್ಬರಾದ ಮುಕುಲ್ ರಾಯ್ ಮತ್ತು ಇನ್ನೊಬ್ಬ ಪ್ರಮುಖ ಮುಖಂಡರಾದ ಹೇಮಂತ ಬಿಸ್ವ ಶರ್ಮ ಹಗರಣದ ಪ್ರಮುಖ ಆರೋಪಿಗಳ ಪಟ್ಟಿಯಲ್ಲಿದ್ದು ನಂತರ ಬಿಜೆಪಿ ಸೇರಿದರು, ಹೇಮಂತ ಬಿಸ್ವ ಶರ್ಮ ಈಗ ಅಸ್ಸಾಂನ ಬಿಜೆಪಿ ಸಂಪುಟದಲ್ಲಿ ಉಪಮುಖ್ಯಮಂತ್ರಿಗಳಾಗಿದ್ದಾರೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಮಹಿಳೆಯರು, ಜನಸಾಮಾನ್ಯರಿಗೆ ಸ್ಪಂದಿಸದ ಕೇಂದ ಬಜೆಟ್–ಜನವಾದಿ ಮಹಿಳಾ ಸಂಘಟನೆ

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು ಕೇಂದ್ರ ಸರ್ಕಾರದ ಚುನಾವಣಾ ಪೂರ್ವ ಮಧ್ಯಂತರ ಬಜೆಟ್‌ನ್ನು ಕಾರ್ಪೊರೇಟ್ ಮತ್ತು ಕೋಮುವಾದದ ಪರವಾದ, ಮತದಾರರ ಓಲೈಕೆಯ ಬಜೆಟ್ ಎಂದು ವರ್ಣಿಸಿದೆ.. ಕೇಂದ್ರ ಸರಕಾರಕ್ಕೆ ಬೆಲೆ ಏರಿಕೆ, ನಿರುದ್ಯೋಗ, ಬಡತನ, ಔದ್ಯೋಗಿಕ, ಕೃಷಿ ಬಿಕ್ಕಟ್ಟುಗಳಿಂದ ತತ್ತರಿಸುತ್ತಿರುವ ಅಪಾರ ಜನ ಸಮೂಹದ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲವೆಂಬುದು ಸ್ಪಷ್ಟವಾಗಿದೆ ಎಂದು ಅದು ಅಭಿಪ್ರಾಯ ಪಟ್ಟಿದೆ..

ಮಹಿಳೆಯರ ಅಭಿವೃದ್ದಿಗೆ ಪೂರಕವಾಗಿ ಈ ವರೆಗೆ ಬರುತ್ತಿದ್ದ ಮಹಿಳಾ ಬಜೆಟ್ ಆಶಯದಿಂದ ಮಹಿಳೆಯರು ನೇತೃತ್ವ ವಹಿಸುವ ಅಭಿವೃದ್ಧಿ ಎಂದು ಪರಿಭಾಷೆಯೇ ಬದಲಾಯಿಸಲ್ಪಟ್ಟಿದೆ. ಉಜ್ವಲಾ ಯೋಜನೆಯನ್ನು ಮಹಿಳೆಯರ ಉದ್ದಾರದ ಯೋಜನೆಯೆಂದು ಬಣ್ಣಿಸಲಾಗುತ್ತಿದೆ. ಆದರೆ ನವೆಂಬರ್ 2018ರ ಹೊತ್ತಿಗೆ ಸಬ್ಸಿಡಿ ಪಡೆಯುವ ಅಡುಗೆ ಅನಿಲದ ಸಿಲಿಂಡರ್ ಒಂದರ ಬೆಲೆ(14.2 ಕೆ.ಜಿ) 21% ಹೆಚ್ಚಳವಾಗಿದೆ.ಅದೇರೀತಿ ಸಬ್ಸಿಡಿ ರಹಿತ ಸಿಲಿಂಡರ್ ಒಂದರ ಬೆಲೆ 80% ಹೆಚ್ಚಳವಾಗಿದೆ. ಇದು ಲಕ್ಷಾಂತರ ಕುಟುಂಬಗಳ ಮಾಸಿಕ ಬಜೆಟ್‌ನ್ನು ಏರುಪೇರು ಮಾಡಿದೆ.

ಮಹಿಳಾ ಅಭಿವೃದ್ದಿಯ ಪರವಾಗಿ ಬಜೆಟ್ ರೂಪಿಸಬೇಕೆನ್ನುವ ನಿಟ್ಟಿನಲ್ಲಿ 'ಜಂಡರ್ ಬಜೆಟ್' ಎಂಬ ಪರಿಕಲ್ಪನೆಯನ್ನು ಜಾರಿಗೆ ತರಲಾಗಿತ್ತು. ಆದರೆ ಈ ಬಜೆಟ್‌ನ್ನು ಮಹಿಳೆಯರ ಅಭಿವೃದ್ದಿಯ ಬಜೆಟ್‌ನಿಂದ ಮಹಿಳೆಯರ ನೇತೃತ್ವದ ಅಭಿವೃದ್ಧಿ ಎಂದು ಬದಲಾಯಿಸಲಾಗಿದೆ. ಈ ಮಾತನ್ನು ಬಜೆಟ್ ಕರಡಿನಲ್ಲಿಯೇ ಪ್ರಸ್ತಾಪಿಸಲಾಗಿದೆ. ಅಲ್ಲದೇ 2019–20 ರ ಬಜೆಟ್ ಮೊತ್ತದ 1% ಮಾತ್ರ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿಗಾಗಿ ಮೀಸಲಿಡಲಾಗಿದೆ. ಹಾಗಾಗಿ ಕೇಳಿರುವ ಮಹಿಳಾ ಪರ ಘೋಷಣೆಗಳೆಲ್ಲವೂ ಮೋದಿ ಸರ್ಕಾರ ಬಿತ್ತಿದ ಭ್ರಮೆಯಾಗಿದೆ.

ಕಳೆದ ಎರಡು ವರ್ಷದಲ್ಲಿ ಲಕ್ಷಾಂತರ ರೈತರು ಕೃಷಿ ಬಿಕ್ಕಟ್ಟಿನ ವಿರುದ್ಧ ದೊಡ್ಡ ದೊಡ್ಡ ಹೋರಾಟಗಳನ್ನು ನಡೆಸಿದ್ದಾರೆ. ಈ ಹೋರಾಟಗಳಲ್ಲಿ ರೈತ ಮಹಿಳೆಯರು, ಕೃಷಿಕೂಲಿಕಾರ ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿ 'ಎಲ್ಲ ರೈತರ ಸಾಲ ಮನ್ನಾ ಮತ್ತು ರೈತರ ಬೆಳೆಗೆ ಕನಿಷ್ಟ ಬೆಂಬಲ ಬೆಲೆಯನ್ನು' ಕೊಡಬೇಕೆನ್ನುವ ಬೇಡಿಕೆ ಇಟ್ಟು ಭಾಗವಹಿಸಿದ್ದರು. ಇದನ್ನು ಗಂಭೀರವಾಗಿ ಪರಿಗಣಿಸುವ ಬದಲು ಮತ್ತೊಂದು ಸುಳ್ಳಿನ ಕಂತೆಯಾಗಿ 'ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ' ಎಂದು ಹೆಸರಿಸಿ ಐದು ಎಕರೆಗಿಂತ ಕಡಿಮೆ ಜಮೀನು ಇರುವ ರೈತರಿಗೆ ವಾರ್ಷಿಕ 6000/ರೂಪಾಯಿಗಳನ್ನು ನೇರ ಖಾತೆಗೆ ವರ್ಗಾಯಿಸುವ ಪ್ರಸ್ತಾಪವಿದೆ ಇದು ರೈತರಿಗೆ ಸಮ್ಮಾನವಲ್ಲ ಅಪಮಾನವೆಂದು ಭಾವಿಸಬೇಕಾಗುತ್ತದೆ. ಇದರ ಜೊತೆಯೇ ಗಂಭೀರವಾಗಿ ಪರಿಗಣೀಸಬೇಕಾಗಿರುವುದು ಅತಿದೊಡ್ಡ ಸಂಖ್ಯೆಯಲ್ಲಿ ಮಹಿಳೆಯರಿರುವ ಕೃಷಿಕೂಲಿಕಾರ ಬಗ್ಗೆ ಬಜೆಟ್ ಚಕಾರ ಎತ್ತಿಲ್ಲ. ದೇಶದಲ್ಲಿ ಆತ್ಮಹತ್ಯೆ ಮಾಡಿಕೊಂಡ ಲಕ್ಷಾಂತರ ರೈತರ ಕುಟುಂಬದ ಮಹಿಳೆಯರ ದುಃಸ್ಥಿತಿ ಬಗ್ಗೆ ಬಜೆಟ್ ಮೌನವಾಗಿದೆ.

ಆಹಾರ ಪದಾರ್ಥಗಳ ಸ್ವಾಯತ್ತತೆಯ ಬಗ್ಗೆ ಮಾತನಾಡಿದ ಬಜೆಟ್ ಆಹಾರ ಸುರಕ್ಷೆಯ ಬಗ್ಗೆ ಚಕಾರವೆತ್ತಿಲ್ಲ. ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಬಗ್ಗೆ ಕೂಡ ಪ್ರಸ್ತಾಪ ಮಾಡದ ಬಜೆಟ್, ಇನ್ನೊಂದು ಅತಿ ಮುಖ್ಯ ಕ್ಷೇತ್ರವಾದ ಅಂಗನವಾಡಿ ಶಿಶು ಅಭಿವೃದ್ಧಿ ಯೋಜನೆಗೆ ಕೇವಲ 10% ಕೊಟ್ಟಿದ್ದು ಹೆಚ್ಚುತ್ತಿರುವ ವೆಚ್ಚಕ್ಕೆ ಹೋಲಿಸಿದರೆ ಇದು ಏನೇನೂ ಸಾಲದು.

95% ಗೂ ಹೆಚ್ಚು ಮಹಿಳೆಯರೇ ಇರುವ ಇನ್‌ಫಾರ್ಮಲ್ ವಿಭಾಗದಿಂದ ಸಾಮಾಜಿಕ ಸುರಕ್ಷೆಯ ಕ್ರಮಗಳಿಗಾಗಿ ಒತ್ತಾಯಿಸುತ್ತಲೇ ಇದ್ದಾರೆ. ಇವುಗಳ ಬಗ್ಗೆ ತುರ್ತಾಗಿ ಗಮನ ಹರಿಸದೇ ಮತ್ತೆ ಕಿಂದರಿ ಜೋಗಿಯ ಪೀಪಿ ಊದಿದಂತೆ ಬಜೆಟ್ ಇದೆ.

ಬೇಟಿ ಬಚಾವ್ ಬೇಟೀ ಪಢಾವ್ ಎಂಬ ಆಕರ್ಷಕ ಘೋಷಣೆಗಳು ಯಾವುದೇ ಹೆಚ್ಚಳವನ್ನು ಪಡೆದಿಲ್ಲ. ಈ ಯೋಜನೆಗಳಿಗಾಗಿ ಮೀಸಲಿಟ್ಟ ಹಣದಲ್ಲಿ 60% ಕೂಡ ವೆಚ್ಚವಾಗಿಲ್ಲ, ಮತ್ತು ಆದ ವೆಚ್ಚದಲ್ಲಿಯೂ ಸುಮಾರು 56% ಜಾಹಿರಾತಿಗಾಗಿ ವೆಚ್ಚ ಮಾಡಲಾಗಿದೆ. ಇದು ಬಹಳ ಯೋಜನೆಗಳಲ್ಲಿ ಅವುಗಳ ಜಾರಿಯ ಬದಲು ಜಾಹಿರಾತಿಗಾಗಿಯೇ ಖರ್ಚುಮಾಡಲಾಗುತ್ತಿದೆ.

ನಿರ್ಭಯಾ ನಿಧಿ, ಏಕ ಗವಾಕ್ಷಿ ಸಂಕಷ್ಟ ದೂರ ಕೇಂದ್ರಗಳ ಸಶಕ್ತತೆ ಮುಂತಾದ ಮಹಿಳಾ ಸ್ನೇಹೀ ಯೋಜನೆಗಳೂ ಬಜೆಟ್‌ನಲ್ಲಿ ಸ್ಥಳ ಪಡೆದಿಲ್ಲ. ಹಾಗೆಯೇ ಶಿಕ್ಷಣದ ವಿಷಯದಲ್ಲಿಯೂ ಮಹಿಳೆಯರ ಪ್ರೌಢಶಿಕ್ಷಣಕ್ಕೆ ಹಣವನ್ನು ಕಡಿತ ಮಾಡಿದೆ. ಆರೋಗ್ಯ ಕ್ಷೇತ್ರದಲ್ಲಿಯೂ ಆಯುಷ್ಮಾನ್ ಭಾರತ ಯೋಜನೆಗೂ ಏರಿಸಿದ ಬಜೆಟ್ ಮೊತ್ತವು ವಿಮಾ ಕಂಪನಿಗಳ ಪ್ರೀಮಿಯಂಗೆ ಹೋಗುತ್ತದೆ.ಒಟ್ಟಿನಲ್ಲಿ ಈ ಬಜೆಟ್ 2019ರ ಚುನಾವಣೆಯ ಮೇಲೆ ಕಣ್ಣಿಟ್ಟ ಬಜೆಟ್ ಆಗಿದ್ದು ಮಹಿಳೆಯರು ಮತ್ತು ರೈತರ ಪರವಾದ ಬಜೆಟ್ ಅಲ್ಲವೆಂದು ಸ್ಪಷ್ಟವಾಗಿದೆ ಎಂದಿರುವ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಎಲ್ಲ ಪ್ರಜಾಸತ್ತಾತ್ಮಕ ವಿಭಾಗದ ಜನರು ಸರ್ಕಾರ ಮಂಡಿಸಿದ ಚುನಾವಣೆಯ ಮತ ಗಳಿಕೆಯ ಭಾಗವಾದ ಮತ್ತು ಕೋಮುವಾದಿ, ಕಾರ್ಪೊರೇಟ್ ಪರವಾದ ಅಜೆಂಡಾವನ್ನು ಹೊಂದಿದ ಬಜೆಟ್ ಮತ್ತು ಉದ್ದೇಶವನ್ನು ಜನರಿಗೆ ತಿಳಿಸಬೇಕು ಮತ್ತು 2019ರ ಚುನಾವಣೆಯಲ್ಲಿ ಈ ಸರಕಾರವನ್ನು ಸೋಲಿಸಬೇಕು ಎಂದು ಕರೆ ನೀಡಿದೆ.

ಬಿಜೆಪಿಯ ಸರ್ವಾಧಿಕಾರಶಾಹಿ ಪ್ರಹಾರ

ಆನಂದ ತೇಲ್ತುಂಬ್ಡೆಯವರನ್ನು ಪುಣೆ ಪೋಲೀಸರು ಬಂಧಿಸಿದುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡಿಸಿದೆ. ಭಾರತದ ಸರ್ವೋಚ್ಚ ನ್ಯಾಯಾಲಯ ಈ ಪ್ರತಿಷ್ಠಿತ ವಿದ್ವಾಂಸರಿಗೆ ಜಾಮೀನು ಪಡೆಯಲು ಅನುಕೂಲವಾಗುವಂತೆ ಫೆಬ್ರುವರಿ 11ರ ವರೆಗೆ ಬಂಧನ ಮಾಡದಂತೆ ರಕ್ಷಣೆ ನೀಡಿತ್ತು. ಈ ರಕ್ಷಣೆ ಫೆಬ್ರುವರಿ 11ರ ವೇಳೆಗಷ್ಟೇ ಕೊನೆಗೊಳ್ಳುತ್ತದೆ ಎಂಬ ಸಂಗತಿಯತ್ತ ಸಿಪಿಐ(ಎಂ) ಗಮನ ಸೆಳೆದಿದೆ.

ಇದು ಮೋದಿ ನೇತೃತ್ವದ ಸರಕಾರ ಅದರ ವಿಚ್ಛಿದ್ರಕಾರಿ ಕೋಮುವಾದಿ ಅಜೆಂಡಾವನ್ನು ಟೀಕಿಸುವ ಪ್ರತಿಯೊಬ್ಬರ ವಿರುದ್ಧವೂ ಹಗೆ ಸಾಧಿಸುವ ಧೋರಣೆಯನ್ನು ತಳೆದಿದೆ ಎಂಬುದನ್ನು ಇದು ತೋರಿಸುತ್ತದೆ. 'ನಗರ ನಕ್ಸಲ' ರನ್ನು ಎದುರಿಸುವ ಹೆಸರಲ್ಲಿ ಸಂಘ ಪರಿವಾರ ಮಾನವ ಹಕ್ಕುಗಳ ಕಾರ್ಯಕರ್ತರು, ಮತ್ತು ಜಾತ್ಯತೀತ ಹಾಗೂ ಪ್ರಗತಿಪರ ವಿದ್ವಾಂಸರ ಹೆಸರುಗೆಡಿಸಿ ಬೇಟೆಯಾಡುವುದನ್ನು ಸಹಿಸಲು ಸಾಧ್ಯವಿಲ್ಲ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಸಂಘಟನೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಈ ಜನತಂತ್ರ–ವಿರೋಧಿ ಸರ್ವಾಧಿಕಾರಶಾಹಿ ದಾಳಿಯ ವಿರುದ್ಧ ಬಲವಾಗಿ ಪ್ರತಿಭಟಿಸಬೇಕು ಎಂದು ಎಲ್ಲ ಜನತಂತ್ರವಾದೀ ಮತ್ತು ಜಾತ್ಯತೀತ ಶಕ್ತಿಗಳಿಗೆ ಕರೆ ನೀಡಿದೆ.

ಸಿಪಿಐ(ಎಂ) ಬಜೆಟ್ ಪ್ರತಿಕ್ರಿಯೆ

ಕೃಷಿ ಹಾಗೂ ಕೈಗಾರಿಕಾ ಬಿಕ್ಕಟ್ಟಿನ ನಿವಾರಣೆಗೆ ಆದ್ಯತೆ ನೀಡಿಲ್ಲ ! ಜನತೆಯ ಮೇಲೆ ಸಾಲದ ಹೊರೆ ಹೇರಿದೆ! ದುಡಿಯುವ ಜನತೆಗೆ ಪರ್ಯಾಯ ಹಾದಿ ತೋರಿಲ್ಲ! ನವ–ಉದಾರೀಕರಣದ ಜಾಡು ಬಿಟ್ಟಿಲ್ಲ!

ರಾಜ್ಯದ ಜನತೆಯ ಮೇಲೆ 48,601 ಕೋಟಿ ರೂ. ಮೊತ್ತದ ಸಾಲದ ಹೊರೆಯನ್ನು ಹೇರುವ ಸಾರ್ವಜನಿಕ ಸಾಲವನ್ನೊಳಗೊಂಡ 2,34,153 ಕೋಟಿ ರೂಪಾಯಿಗಳ 2019–20 ರ ಸಾಲಿನ ರಾಜ್ಯ ಬಜೆಟನ್ನು ಮುಖ್ಯಮಂತ್ರಿಗಳು ಮಂಡಿಸಿದ್ದಾರೆ.

ರೈತರ ಸಾಲ ಮನ್ನಾಕ್ಕಾಗಿ ಸುಮಾರು 12,500 ಕೋಟಿ ರೂ. ಹಣ ನೀಡುವುದಾಗಿ ಹೇಳಿರುವುದು ಸ್ವಾಗತಾರ್ಹವಾಗಿದೆ.


ಆದರೇ ರೈತರು ಸಾಲಗಾರರಾಗದಂತೆ ತಡೆಯಲು ಅಗತ್ಯವಾದ ಗಂಭೀರ ಕ್ರಮಗಳಾದ ಡಾ.ಎಂ.ಎಸ್ ಸ್ವಾಮಿನಾಥನ್ ಕೃಷಿ ಆಯೋಗದ ಸಲಹೆಯಂತೆ ಕೃಷಿ ಉತ್ಪನ್ನಗಳ ಉತ್ಪಾದನಾ ವೆಚ್ಚದ ಒಂದೂವರೆಯಷ್ಟು ಬೆಲೆ ನೀಡುವ ಮತ್ತು ಅದನ್ನು ಖಾತರಿಯಾಗಿ ದೊರೆಯುವಂತೆ ಮಾಡಲು ಶಾಸನವನ್ನಾಗಿಸುವ ಕ್ರಮ ಮತ್ತು ಅದಕ್ಕೆ ತಕ್ಕನಾದ ಪರಿಣಾಮಕಾರಿ ನೆರವುಗಳು ಬಜೆಟ್ ನಲ್ಲಿ ಕಂಡು ಬರುತ್ತಿಲ್ಲ.

ಕಳೆದ ವರ್ಷವು ಮುಂಗಾರು ಮತ್ತು ಹಿಂಗಾರು ವಿಫಲವಾಗಿದ್ದು, ಅದರ ಪರಿಹಾರವು ಗ್ರಾಮೀಣ ಜನತೆಗೆ ಪರಿಣಾಮಕಾರಿಯಾಗಿ ದೊರೆಯುವಂತಹ ಕ್ರಮಗಳಿಲ್ಲ.

ಹೀಗಾಗಿ ಕೃಷಿ ರಂಗದ ಮತ್ತು ರೈತ ಹಾಗೂ ಕೂಲಿಕಾರರ ಕುಟುಂಬಗಳ ಸಂಕಷ್ಟ ಮುಂದುವರೆಯುವುದನ್ನು ತಡೆಯುವ ಪರಿಣಾಮಕಾರಿ ಕ್ರಮಗಳ ಸೂಚನೆಗಳು ಇಲ್ಲಾ !

ಕೃಷಿ ಕೂಲಿಕಾರರ ಸಂರಕ್ಷಣೆಯ ಸಮಗ್ರ ಕಾಯ್ದೆ ಹಾಗೂ ಅವರ ಉದ್ಯೋಗ ಭದ್ರತೆಯ ಕುರಿತಾಗಲೀ ಮಾತನಾಡುತ್ತಿಲ್ಲ

ಈಚೆಗೆ ರಾಜ್ಯದ ಕಾರ್ಮಿಕ ವರ್ಗ ಎರಡು ದಿನಗಳ ಮುಷ್ಕರ ಮಾಡಿ ಪ್ರತಿಭಟನೆ ನಡೆಸಿದರೂ ಅವರ ಕನಿಷ್ಠ ವೇತನದಲ್ಲಿ ಹೆಚ್ಚಳದ ಕ್ರಮಗಳಾಗಲೀ ಮತ್ತು ಗುತ್ತಿಗೆ ಪದ್ಧತಿಯನ್ನು ತೆಗೆದು ಹಾಕಿ ಖಾಯಂ ಉದ್ಯೋಗ ಒದಗಿಸುವ ವಿಚಾರದ ಕುರಿತು ಬಜೆಟ್ ಮಾತನಾಡಿಲ್ಲ.



ಕೃಪೆ: ಪಿ. ಮಹಮ್ಮದ್

ಎಸ್.ಸಿ., ಎಸ್.ಟಿ ಗಳಿಗೆ 36,000 ಕೋಟಿ ರೂ. ನಿಗದಿಸಿದ್ದರೂ ಅದನ್ನು ಪರಿಣಾಮಕಾರಿಯಾಗಿಬಳಸಿದಲಿತ ಕುಟುಂಬಗಳನ್ನು ಪುನರ್ವಸತಿಗೆ ಒಳಪಡಿಸುವ ಯೋಜನೆಗಳು ಇಲ್ಲ. ಎಸ್.ಸಿ, ಎಸ್.ಟಿ, ಬಿ.ಸಿ.ಎಂ ವಿದ್ಯಾರ್ಥಿಗಳಿಗಾಗಿ ವಸತಿ ಶಾಲೆಗಳ ನಿರ್ಮಾಣಕ್ಕೆ 100 ಕೋಟಿ ರೂಗೂ ಹೆಚ್ಚು ಅನುದಾನ ಒದಗಿಸಿರುವುದು ಸ್ವಾಗತಾರ್ಹವಾದರೂ, ಅಲ್ಲಿ ದುಡಿಯುವ ಜನತೆಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವ ಪ್ರಸ್ತಾಪಗಳಿಲ್ಲ.

ನಿರುದ್ಯೋಗಿ ಯುವಜನರಿಗೆ ಅಗತ್ಯದಷ್ಟು ಉದ್ಯೋಗ ನೀಡಲಾಗದಾದಾಗ ನಿರುದ್ಯೋಗ ಭತ್ಯೆಯನ್ನು ನೀಡುವ ಮಾತನ್ನೂ ಆಡಿಲ್ಲ.

ಕರ್ನಾಟಕದ ಕೃಷಿ ರಂಗ ಹಾಗೂ ಕೈಗಾರಿಕಾ ರಂಗದ ಬಿಕ್ಕಟ್ಟನ್ನು ಮತ್ತು ಅದರಿಂದ ತೀವ್ರ ಸಂಕಷ್ಟವನ್ನೆದುರಿಸುವ ಅಲ್ಲಿನ ರೈತರು, ಕೂಲಿಕಾರರು, ಕಸುಬುದಾರರು,ಮತ್ತು ಕಾರ್ಮಿಕರ ಸಂಕಷ್ಟವನ್ನು ನಿವಾರಿಸುವ ಅವರ ಕೇಳಿಕೆಯ ಪರ್ಯಾಯಕ್ಕೆ ವೇದಿಕೆಯಾಗಿಸುವ ಬದಲು, ಕೃಷಿ ಮತ್ತು ಕೈಗಾರಿಕಾ ವಲಯವನ್ನು ಬಹುರಾಷ್ಟ್ರೀಯ ಸಂಸ್ಥೆಗಳ ಲೂಟಿಗೆ ತೆರೆಯುವ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ನೀತಿಗಳ ಜಾಡನ್ನೇ ಈ ಬಜೆಟ್ ಹಿಡಿದಿದೆ.

2020 ರಲ್ಲಿ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ ಏರ್ಪಡಿಸಲು ಬಂಡವಾಳದಾರರಿಗೆ ಪ್ರೋತ್ಸಾಹ ನೀಡುವ ಮಾತುಗಳನ್ನಾಡಿದೆ. ●

ಸಿಪಿಐ(ಎಂ) ಪತ್ರಿಕಾ ಹೇಳಿಕೆಗಳು

ಸರಕಾರ ಇಂಗ್ಲೀಷ್ ಮಾಧ್ಯಮ ಶಾಲೆಗಳನ್ನು ತೆರೆಯುವುದರ ವಿರುದ್ಧ ರಾಜ್ಯದಾದ್ಯಂತ ಪ್ರತಿಭಟನೆಗೆ ಸಿಪಿಐ(ಎಂ) ಕರೆ

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಕನ್ನಡ ಸಾಹಿತ್ಯ ಪರಿಷತ್, ಹಲವಾರು ಗಣ್ಯ ಸಾಹಿತಿಗಳು, ರಾಜಕೀಯ ಪಕ್ಷಗಳು ಮತ್ತು ಸಂಘ ಸಂಸ್ಥೆಗಳು ತೀವ್ರವಾಗಿ ವಿರೋಧಿಸಿದ ನಂತರವೂ, ಕರ್ನಾಟಕ ಸರಕಾರ ನಿನ್ನೆ ದಿನ ರಾಜ್ಯಪಾಲರ ಭಾಷಣದ ಮೂಲಕ ಮುಂಬರುವ ದಿನಗಳಲ್ಲಿ ಪ್ರಾಥಮಿಕ ಹಂತದಲ್ಲಿ 1000 ಇಂಗ್ಲೀಷ್ ಮಾಧ್ಯಮದ ಶಾಲೆಗಳನ್ನು ತೆರೆಯುವ ಕುರಿತು ತನ್ನ ಬದ್ಧತೆಯನ್ನು ವ್ಯಕ್ತಪಡಿಸಿರುವುದನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ದ ರಾಜ್ಯ ಸಮಿತಿ ಬಲವಾಗಿ ಖಂಡಿಸುತ್ತದೆ. ಕೂಡಲೇ ಈ ಜನವಿರೋಧಿ ನಿಲುಮೆಯನ್ನು ಕೈ ಬಿಡಬೇಕೆಂದು ಮುಖ್ಯ ಮಂತ್ರಿಗಳನ್ನು ಒತ್ತಾಯಿಸುತ್ತದೆ.

ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ನೀತಿಗಳು ಎಲ್ಲೆಲ್ಲೂ ಇಂಗ್ಲೀಷ್ ಭಾಷೆ ಅನಿವಾರ್ಯವೆಂಬ ಹುಸಿ ಭಾವನೆಯನ್ನು ಹುಟ್ಟು ಹಾಕಿರುವುದರಿಂದ ಬಹುತೇಕ ಮಧ್ಯಮ ವರ್ಗದ ಜನತೆ, ತಮ್ಮ ಮಕ್ಕಳು ಇಂಗ್ಲೀಷ್ ಭಾಷೆಯಲ್ಲಿ ವ್ಯವಹರಿಸುವುದನ್ನು ಕಲಿಯಬೇಕೆಂಬ ಭಾವನೆಯನ್ನು ಹೊಂದಿರುವುದು ನಿಜವೇ ಆಗಿದ್ದು, ಅಂತಹ ಭಾವನೆಯನ್ನು ಪುರಸ್ಕರಿಸಲು ಒಂದು ಭಾಷೆಯಾಗಿ ಇಂಗ್ಲೀಷ್ ಭಾಷೆಯನ್ನು ಒಂದನೇ ತರಗತಿಯಿಂದಲೇ ಪರಿಣಾಮಕಾರಿಯಾಗಿ ಕನ್ನಡ ಮಾಧ್ಯಮದ ಶಾಲೆಗಳಲ್ಲಿಯೇ ಕಲಿಸಲು ಅಗತ್ಯ ಕ್ರಮಗಳನ್ನು ಸರಕಾರವು ವಹಿಸಿದಲ್ಲಿ ಕನ್ನಡ ಮಾಧ್ಯಮದ ಶಾಲೆಗಳಿಗೆ ಮಕ್ಕಳನ್ನು ವ್ಯಾಪಕವಾಗಿ ಆಕರ್ಷಿಸಲು ಸಾಧ್ಯವಿದ್ದು ಈ ಕ್ರಮವನ್ನು ಅನುಸರಿಸ ಬೇಕೆಂದು ರಾಜ್ಯ ಸರಕಾರವನ್ನು ಸಿಪಿಐ(ಎಂ) ಒತ್ತಾಯಿಸುತ್ತದೆ.

ಬಡವರ ಮಕ್ಕಳಿಗೆ ಇಂಗೀಷ್ ಮಾಧ್ಯಮದ ಶಿಕ್ಷಣವನ್ನು ಒದಗಿಸುವ ಮೂಲಕ ಅವರಿಗೆ ನೆರವಾಗುವ ಸದುದ್ದೇಶದಿಂದ ಇದನ್ನು ಜಾರಿಗೊಳಿಸಲಾಗುತ್ತದೆಂಬ ನೆಪವನ್ನು ಮುಂದೆ ಮಾಡುವ ಮೂಲಕ, ಕರ್ನಾಟಕ ಸರಕಾರ ಬಹುಸಂಖ್ಯಾತ ದುಡಿಯುವ ಜನತೆಯನ್ನು ಅದಾಗಲೇ, ತೀವ್ರ ತೆರನಾದ ದುಸ್ಥಿತಿಗೆ ತಳ್ಳಿರುವ ಬಹುರಾಷ್ಟ್ರೀಯ ಸಂಸ್ಥೆಗಳ ಲೂಟಿಯ ಪರವಾದ ಜಾಗತೀಕರಣದ ನೀತಿಗಳ ಜಾರಿಯ ಭಾಗವಾಗಿ ಇದನ್ನು ಹೇರಲು ಮುಂದಾಗುತ್ತಿದೆ. ಇದು ಕರ್ನಾಟಕದ ಜನತೆಯ ಮಾತೃ ಭಾಷೆಯಲ್ಲಿ ಶಿಕ್ಷಣ ಪಡೆಯುವ ಹಕ್ಕುಗಳ ಮೇಲೆ ಮತ್ತು ರಾಷ್ಟ್ರ ಭಾಷೆಗಳಲ್ಲೊಂದಾದ ಕನ್ನಡದ ಮೇಲೆ ಬಹುರಾಷ್ಟ್ರೀಯ ಸಂಸ್ಥೆಗಳು ನಡೆಸುತ್ತಿರುವ ದಾಳಿಯ ಮುಂದುವರೆದ ಭಾಗವಾಗಿದೆ. ಆದ್ದರಿಂದ ಇದನ್ನು ಪ್ರತಿರೋಧಿಸಿ ರಾಜ್ಯದಾದ್ಯಂತ ನಾಳೆ ದಿನ (ಫೆ.8) ಪ್ರತಿಭಟನೆ ನಡೆಸಲು ಸಿಪಿಐ(ಎಂ) ರಾಜ್ಯ ಸಮಿತಿ ತನ್ನ ಘಟಕಗಳಿಗೆ ಮತ್ತು ಜನತೆಗೆ ಕರೆ ನೀಡಿದೆ.

ಯಾವುದೇ ಮೂಲ ಸೌಕರ್ಯಗಳಿಲ್ಲದೇ, ಅಗತ್ಯ ಪರಿಣಿತರಿಲ್ಲದೇ, ಮತ್ತು ಕನ್ನಡ ಮಾಧ್ಯಮದ ಶಾಲೆಗಳೆಂದು ಪರವಾನಿಗಿ ಪಡೆದು, ಸರಕಾರಕ್ಕೆ ಮತ್ತು ಸರಕಾರದ ನಿಯಮಾವಳಿಗಳಿಗೆ ನಾಮ ಹಾಕಿ, ಇಂಗ್ಲೀಷ್ ಮಾಧ್ಯಮ ಶಾಲೆಗಳಾಗಿ ಪರಿವರ್ತಿಸಿ, ಜನತೆಯನ್ನು ಲೂಟಿಗೊಳಪಡಿಸುತ್ತಿರುವ ನಾಯಿ ಕೊಡೆಗಳಂತೆ ಮೇಲೇಳುತ್ತಿರುವ ಇವುಗಳನ್ನು ತಡೆಯುವಲ್ಲಿ ಕಣ್ಣಿದ್ದು ಕುರುಡನಂತೆ ವರ್ತಿಸುವ ರಾಜ್ಯ ಸರಕಾರ ಘೋರವಾಗಿ ವಿಫಲವಾಗಿರುವುದಲ್ಲದೇ, ಕನ್ನಡ ಶಾಲೆಗಳಿಗೆ ಮಕ್ಕಳನ್ನು ಆಕರ್ಷಿಸುವಂತೆ ಕ್ರಮವಹಿಸುವಲ್ಲಿಯೂ ಸರಕಾರ ಎಡವಿದೆ. ಈ ಕಾರಣದಿಂದ ಕನ್ನಡ ಶಾಲೆಗಳನ್ನು ಸಾವಿರಾರು ಸಂಖ್ಯೆಯಲ್ಲಿ ಮುಚ್ಚಬೇಕಾದ ದುಸ್ಥಿತಿ ನಿರ್ಮಾಣವಾಗಿದೆ.

ಮಾತೃ ಭಾಷೆಯಲ್ಲಿ ಆಗ ತಾನೆ ಬೆರಗಿನಿಂದ ಹೊರ ಜಗತ್ತನ್ನು ನೋಡುವ, ಯೋಚಿಸುವ ಎಳೆಯ ಮಗುವಿನ ಮೇಲೆ ತನ್ನದಲ್ಲದ ತನ್ನ ಪರಿಸರದಲ್ಲಿಲ್ಲದ ಅನ್ಯ ಭಾಷೆಯಲ್ಲಿ ವಿಷಯವನ್ನು ಗ್ರಹಿಸುವಂತೆ ಒತ್ತಡ ಹೇರುವುದು, ಆ ಮಗುವಿನ ಮಾನಸಿಕ ಪರಿಸರದ ವಿಕಾಸದ ಮೇಲೆ ಅಹಿತಕರ ಪರಿಣಾಮ ಬೀರುತ್ತದೆಂಬುದು ಜಗತ್ತಿನ ಹಲವು ಅಧ್ಯಯನಗಳು ಹೇಳುತ್ತಿರುವಾಗ ಸರಕಾರದ ಈ ನಡೆ ಸಾಧುವಾಗಿಲ್ಲ.

ಅಪಾರವಾದ ತ್ಯಾಗ ಬಲಿದಾನದ ಹೋರಾಟಗಳ ಮೂಲಕ ರೂಪುಗೊಂಡ ಭಾಷಾವಾರು ಪ್ರಾಂತಗಳ ರಚನೆಯ ಉದ್ದೇಶಕ್ಕೆ ಕೂಡಾ ಸರಕಾರದ ಈ ನಡೆ ತದ್ವಿರುದ್ದವಾಗಿದೆ. ಕನ್ನಡದ ರಾಷ್ಟ್ರೀಯತೆಯನ್ನು ಉಳಿಸಿ ಬೆಳೆಸಬೇಕಾದ ರಾಜ್ಯ ಸರಕಾರವೇ ಇಂತಹ ಕ್ರಮಗಳ ಮೂಲಕ ಅದರ ಮೇಲಿನ ದಾಳಿಗೆ ಕಾರಣವಾಗುತ್ತಿರುವುದನ್ನು ತೀವ್ರವಾಗಿ ಪ್ರತಿರೋಧಿಸಬೇಕಾಗಿದೆ.

– ಫೆಬ್ರುವರಿ 7, 2019

ರಾಜ್ಯ ಸರಕಾರವನ್ನು ಅಸ್ಥಿರಗೊಳಿಸುವ ಬಿಜೆಪಿಯ ಮುಂದುವರೆದ ನಡೆಗೆ ಸಿಪಿಐ(ಎಂ) ಖಂಡನೆ

ಬಿಜೆಪಿ ಕಳೆದ ವಿಧನ ಸಭಾ ಚುನಾವಣೆಯಿಂದಲೂ ತನಗೆ ಬಹುಮತವಿಲ್ಲದಿದ್ದರೂ ನಿರಂತರವಾಗಿ, ಕೇಂದ್ರ ಸರಕಾರ ಹಾಗೂ ರಾಜಭವನದ ಕಛೇರಿಯ ದುರುಪಯೋಗದ ಮೂಲಕ ಮತ್ತು ಆಪರೇಷನ್ ಕಮಲದ ಮೂಲಕ ಅಧಿಕಾರ ಹಿಡಿಯುವ ಕೆಲಸದಲ್ಲಿಯೇ ತನ್ನನ್ನು ತೊಡಗಿಸಿಕೊಂಡು ರಾಜ್ಯದ ಸಮ್ಮಿಶ್ರಸರಕಾರವನ್ನುನಿರಂತರವಾಗಿಅಸ್ಥಿರಗೊಳಿಸುವ ಅನೈತಿಕ ಮತ್ತು ಭ್ರಷ್ಟ ರಾಜಕಾರಣದಲ್ಲಿ ತೊಡಗಿದೆ. ಅದು ಮಾತ್ರವೇ ಅಲ್ಲಾ, ಮತ್ತೊಂದು ರಾಜಕೀಯ ಪಕ್ಷದಲ್ಲಿನ ಆಂತರಿಕ ವಿಚಾರದಲ್ಲಿ ಮೂಗು ತೂರಿಸಿ ಅಸಂತೃಪ್ತ ಶಾಸಕರಿಗೆ ಸಲ್ಲದ ಆಮಿಶ ಒಡ್ಡಿ ತನ್ನ ಕಡೆ ಸೆಳೆಯುವ ಪ್ರಯತ್ನವನ್ನು ಸತತವಾಗಿ ಮಾಡುತ್ತಿದೆ.

ರಾಜ್ಯದಲ್ಲಿ ಮುಂಗಾರು ಹಾಗೂ ಹಿಂಗಾರುಗಳು ವಿಫಲವಾಗಿ ರಾಜ್ಯ ಗಂಭಿರವಾದ ಬರಗಾಲಕ್ಕೆ ಸಿಲುಕಿದೆ. ಸರಕಾರದ ಸಾಲ ಮನ್ನಾ ಘೋಷಣೆಯ ನಡುವೆಯು ರೈತರ– ಕೂಲಿಕಾರರ ಆತ್ಮಹತ್ಯೆಗಳು ಮುಂದುವರೆದಿವೆ. ಕಾರ್ಮಿಕರು ದಿನೇ ದಿನೇ ಏರುತ್ತಿರುವ ಅಗತ್ಯ ವಸ್ತುಗಳ ಬೆಲೆಗಳಿಂದಾಗಿ ಮತ್ತು ದೊರಕದ ಕನಿಷ್ಟ ವೇತನದಿಂದಾಗಿ ಕಂಗಾಲಾಗಿದ್ದಾರೆ. ಯುವಜನರ ನಿರುದ್ಯೋಗ ಬೆಳೆಯುತ್ತಿದೆ. ಇಂತಹ ಗಂಭೀರ ಪ್ರಶ್ನೆಗಳ ಕುರಿತು ಒಂದು ವಿರೋಧ ಪಕ್ಷವಾಗಿ ರಾಜ್ಯದ ಗಮನ ಸೆಳೆದು ಸರಕಾರದ ವಿರುದ್ಧ ಚಾಟಿ ಬೀಸುವ ಮೂಲಕ ಒಂದು ಜನಪರ ರಾಜ್ಯ ಬಜೆಟ್ ಬರುವಂತೆ ಕ್ರಮವಹಿಸುವ ಬದಲು ಜನತೆಯ ನಡುವೆ ಹೇಸಿಗೆ ಹುಟ್ಟಿಸುವ ರಾಜಕಾರಣದಲ್ಲಿ ತೊಡಗಿದೆ.

ಜನತೆ ತನಗೆ ಬಹುಮತ ನೀಡದೇ, ವಿರೋಧ ಪಕ್ಷವಾಗಿ ಕೆಲಸ ಮಾಡಲು ನೀಡಿದ ಜನತೆಯ ಆದೇಶವನ್ನು ಪಾಲಿಸಲು ರಚನಾತ್ಮಕವಾಗಿ ತೊಡಗುವ ಬದಲು ಸರಕಾರವನ್ನು ಅಸ್ಥಿಗೊಳಿಸಲು ಮುಂದುವರೆಸಿರುವ ಅದರ ಪ್ರಯತ್ನವನ್ನು ಸಿಪಿಐ(ಎಂ) ರಾಜ್ಯ ಸಮಿತಿ ಬಲವಾಗಿ ಖಂಡಿಸುತ್ತದೆ. ಜನತೆಯ ಆದೇಶಕ್ಕೆದುರಾಗಿ, ಮತ್ತು ಒಂದು ವಿರೋಧ ಪಕ್ಷವಾಗಿ ರಚನಾತ್ಮಕ ಕೆಲಸದಲ್ಲಿ ತೊಡಗದಿರುವ ಅದರ ಅಧಿಕಾರಶಾಹಿ ಪ್ರವೃತ್ತಿಯನ್ನು ಮತದಾರರು ಗಂಭೀರವಾಗಿ ಪರಿಗಣಿಸಿ ಮುಂಬರುವ ದಿನಗಳಲ್ಲಿ ಅದಕ್ಕೆ ತಕ್ಕ ಪಾಠ ಕಲಿಸಬೇಕೆಂದು ಸಿಪಿಐ(ಎಂ) ಕರೆ ನೀಡಿದೆ.

ಅದೇ ರೀತಿ, ಅಧಿಕಾರಶಾಹಿ ಹಾಗೂ ಭ್ರಷ್ಟ ಗಳಿಕೆಗಾಗಿ ಮತದಾರರ ತೀರ್ಪಿಗೆ ವಿರುದ್ಧವಾಗಿ ನಡೆದು ಕೊಳ್ಳುತ್ತಿರುವ, ಮತದಾರರ ಗೌರವಕ್ಕೆ ಕುಂದುಂಟು ಮಾಡುತ್ತಿರುವ ಅನೈತಿಕ ವ್ಯವಹಾರದಲ್ಲಿ ತೊಡಗಿರುವ ಶಾಸಕರಿಗೂ ಅಲ್ಲಿನ ಮತದಾರರು ತಕ್ಕ ಪಾಠ ಕಲಿಸಲು ಕೂಡಾ ಸಿಪಿಐ(ಎಂ) ಕರೆ ನೀಡಿದೆ.

– ಫೆಬ್ರುವರಿ 7, 2019

ಉಡುಪಿಯಲ್ಲಿ ದೇವಿಪ್ರಸಾದ ಶತಮಾನೋತ್ಸವ ಆಚರಣೆ

ಭಾರತೀಯ ಭೌತವಾದಿ ಪರಂಪರೆಯ ಅರಿವು ಮೂಡಿಸಿದವರು



ವಾಸುದೇವ ಉಚ್ಚಿಲ್

ತತ್ತ್ವಶಾಸ್ತ್ರದ ಅಧ್ಯಯನದಲ್ಲಿ ಭಾವನಾವಾದಿ ಮತ್ತು ಭೌತವಾದಿ ಎಂಬ ಎರಡು ವಿರುದ್ಧ ನೆಲೆಗಳಿರುತ್ತವೆ. ಭಾರತದ ಆಧುನಿಕ ತತ್ತ್ವಶಾಸ್ತ್ರಜ್ಞರು ಭಾವನಾವಾದಿ ನೆಲೆಯಲ್ಲಿ ಪ್ರಾಚೀನ ಭಾರತೀಯ ತತ್ತ್ವಶಾಸ್ತ್ರವನ್ನು ವಿವರಿಸುತ್ತಿರುವ ಸಂದರ್ಭದಲ್ಲಿ ಭಾರತದಲ್ಲಿಯೂ ಪ್ರಬಲವಾದ ಭೌತವಾದಿಯ ನೆಲೆಗಳಿದ್ದು, ಅವು ಜೀವಪರವಾಗಿವೆ ಎಂಬುದನ್ನು ಕಾಣಿಸಿಕೊಟ್ಟವರು ದಿವಂಗತ ದೇವಿಪ್ರಸಾದ ಚಟ್ಟೋಪಾಧ್ಯಾಯರು. ಭಾರತೀಯ ಪರಂಪರೆಯಲ್ಲಿ, ಪ್ರಾಚೀನ ಭಾರತದ ಜ್ಞಾನಶಾಖೆಯಲ್ಲಿ ಯಾವ ವಿಷಯಗಳ ಬಗ್ಗೆ ಹೆಮ್ಮೆಪಡಬೇಕು ಹಾಗೂ ಯಾವ ವಿಷಯಗಳ ಬಗ್ಗೆ ನಾಚಿಕೆಯಿಂದ ತಲೆತಗ್ಗಿಸಬೇಕೆಂದು ತಮ್ಮ ಆಳವಾದ ಅಧ್ಯಯನ ಮತ್ತು ಸಂಶೋಧನೆಯ ಮೂಲಕ ತಿಳಿಸಿಕೊಟ್ಟ ಹಿರಿಮೆ ಖ್ಯಾತ ತತ್ತ್ವಶಾಸ್ತ್ರಜ್ಞ ದೇವಿಪ್ರಸಾದ ಚಟ್ಟೋಪಾಧ್ಯಾಯರದು ಎಂದು ಬರಹಗಾರ್ತಿ ಡಾ.ಎನ್.ಗಾಯತ್ರಿ ವಿವರಿಸಿದರು.

ಕುಂದಾಪುರ ಸಮುದಾಯ, ಹಿರಿಯಡ್ಕ ಸಂಸ್ಕೃತಿ ಸಿರಿ ಟ್ರಸ್ಟ್ ಮತ್ತು ಉಡುಪಿ ಕೋಮುಸೌಹಾರ್ದ ವೇದಿಕೆಯ ಸಂಯುಕ್ತ ಆಶ್ರಯದಲ್ಲಿ ಫೆಬ್ರವರಿ 3 ರಂದು ಉಡುಪಿಯಲ್ಲಿ ಏರ್ಪಡಿಸಿದ ದೇವಿಪ್ರಸಾದ ಚಟ್ಟೋಪಾಧ್ಯಾಯರ ಜನ್ಮಶತಮಾನೋತ್ಸವ ಕಾರ್ಯಕ್ರಮದಲ್ಲಿ 'ದೇವಿಪ್ರಸಾದ ಚಟ್ಟೋಪಾಧ್ಯಾಯರ ವೈಚಾರಿಕ ನಿಲುವುಗಳು' ಕುರಿತು ಅವರು ಮಾತನಾಡಿದರು.

ಉಪನಿಷತ್ತಿನಂಥ ಪ್ರಾಚೀನ ತತ್ತ್ವಶಾಸ್ತ್ರೀಯ ಗ್ರಂಥಗಳು ಆಸ್ತಿಕ ಹಾಗೂ ಭಾವನಾವಾದಿ ಚಿಂತನೆಗಳನ್ನು ಎತ್ತಿಹಿಡಿಯುತ್ತವಾದರೂ, ಅವುಗಳ ಒಳಗೇ ಇರುವ ಭೌತವಾದಿ ನಿಲುವುಗಳನ್ನು ಮೊದಲ ಬಾರಿಗೆ ದೇವಿಪ್ರಸಾದರು ತೋರಿಸಿಕೊಟ್ಟರು. ಬೃಹದಾರಣ್ಯಕ ಉಪನಿಷತ್ತಿನಲ್ಲಿರುವ ಉದ್ದಾಲಕ ಆರುಣಿ ಪ್ರಸಂಗವನ್ನು ಈ ನೆಲೆಯಲ್ಲಿ ಅವರು ವಿವರಿಸಿದ್ದಾರೆ; ಅಲ್ಲದೆ ಆಯುರ್ವೇದ ವಿಜ್ಞಾನದ ಆಕರವಾದ ಚರಕಸಂಹಿತೆಯನ್ನು ಭಾರತದ ಪ್ರಥಮ ವೈಜ್ಞಾನಿಕ ದಾಖಲೆ ಎಂದು ತಿಳಿಸಿಕೊಟ್ಟರು-ಎಂದು ಡಾ.ಗಾಯತ್ರಿ ಹೇಳಿದರು.

ವಿಜ್ಞಾನ ನಮ್ಮ ಕಾಲದಲ್ಲಿ ಇಷ್ಟೊಂದು ಬೆಳೆದಿದ್ದರೂ, ಉಡುಪಿಯ ವಿದ್ಯಾವಂತ ಮಹಿಳೆಯರೂ ಹರಕೆ ಹೊತ್ತು ಉಡುಪಿ ದೇವಸ್ಥಾನದಲ್ಲಿ ನೆಲದಲ್ಲಿ ಇಕ್ಕಿದ ಅನ್ನವನ್ನು ಉಣ್ಣುತ್ತಿರುವುದು ಸೋಜಿಗ. ಅಲ್ಲದೆ ದೇಶದ ಪ್ರಧಾನಿಯವರು ರಾಷ್ಟ್ರೀಯ ವಿಜ್ಞಾನ ಸಮ್ಮೇಳನದಲ್ಲಿ ಪುರಾಣದ ಗಣಪತಿಯನ್ನು ಪ್ಲಾಸ್ಟಿಕ್ ಸರ್ಜರಿಗೆ ಮತ್ತು ಪುಷ್ಪಕ ವಿಮಾನವನ್ನು ಆಧುನಿಕ ವಿಮಾನಕ್ಕೆ ಉದಾಹರಣೆಯಾಗಿ ಹೇಳುವ ಮೂಲಕ ಭಾರತದ ನಿಜವಾದ ವೈಚಾರಿಕ ಪರಂಪರೆಗೆ ಅನ್ಯಾಯ ಮಾಡಿದ್ದಾರೆ ಎಂದು ಡಾ.ಎನ್.ಗಾಯತ್ರಿ ಬೇಸರ ವ್ಯಕ್ತಪಡಿಸಿದರು.

ಡಾ.ಜಿ.ಭಾಸ್ಕರ ಮಯ್ಯ ಅವರು 'ತತ್ತ್ವಶಾಸ್ತ್ರಕ್ಕೆ ದೇವಿಪ್ರಸಾದ ಚಟ್ಟೋಪಾಧ್ಯಾಯರ ಕೊಡುಗೆ' ಎಂಬ ವಿಷಯದ ಕುರಿತು ಮಾತನಾಡಿದರು. ಭಾರತದ ಪ್ರಖ್ಯಾತ ಷಡ್ದರ್ಶನಗಳಲ್ಲಿ ವೇದಾಂತ ಎಂದು ಗುರುತಿಸಲ್ಪಟ್ಟಿರುವ ಉತ್ತರ ಮೀಮಾಂಸೆ ಮಾತ್ರ ಸಂಪೂರ್ಣ ಭಾವನಾವಾದಿ ತತ್ತ್ವಶಾಸ್ತ್ರವಾಗಿದ್ದು, ಉಳಿದವುಗಳಾದ ಪೂರ್ವಮೀಮಾಂಸಾ, ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕಗಳು ಭೌತವಾದೀಯ ತತ್ತ್ವಶಾಸ್ತ್ರಗಳಾಗಿದ್ದರೂ ಅವು ಭಾವನಾವಾದಿ ಲೇಪದಿಂದ ಕೂಡಿವೆ ಎಂದರು. 'ಲೋಕಾಯತ' ತತ್ತ್ವಜ್ಞಾನದ ಬಗ್ಗೆ ದೇವಿಪ್ರಸಾದರ ಆಳವಾದ ಅಧ್ಯಯನದಿಂದಾಗಿ ಭಾರತದಲ್ಲಿ ಚಾಲ್ತಿಯಲ್ಲಿದ್ದ ಬಹುಮುಖ್ಯ ಭೌತಿಕ ವಿಚಾರಧಾರೆಯನ್ನು ಆಧುನಿಕ ಜ್ಞಾನಶಾಖೆಗೆ ಪರಿಚಯಿಸಿತು. 'ಪ್ರಾಚೀನ ಭಾರತದಲ್ಲಿ ಯಾವುದು ಕಾಳು ಯಾವುದು ಜಳ್ಳು' 'ಪ್ರಾಚೀನ ಭಾರತದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ' ಮೊದಲಾದ ಪ್ರಖರ ಚಿಂತನೆಯ ಕೃತಿಗಳಲ್ಲದೆ, ಜನಸಾಮಾನ್ಯರಿಗೆ ಅರ್ಥವಾಗುವಂತೆಯೂ ಅವರು ಹಲವು ಕೃತಿಗಳನ್ನು ಬರೆದರು ಎಂದು ಅವರು ತಿಳಿಸಿದರು.

ಅತಿ ಪ್ರಾಚೀನ ಭಾರತದಲ್ಲಿ ಭೌತವಾದಿ ಹಾಗೂ ವೈಜ್ಞಾನಿಕ ಬೆಳವಣಿಗೆಗಳು ಭಾರತದಲ್ಲಿ ಆಗಿದ್ದುವು. ಆದರೆ ದೇಶದ ಸಾಮಾಜಿಕ-ಆರ್ಥಿಕ ವಿನ್ಯಾಸವು ಒಂದು ಸ್ಥಗಿತತೆಗೆ ಬಂದಿತು. ಆ ಕಾರಣದಿಂದಲಾಗಿ ಒಂದು ಸಹಸ್ರಮಾನಕ್ಕೂ ಹೆಚ್ಚುಕಾಲ ಭೌತವಾದೀ ಹಾಗೂ ವೈಜ್ಞಾನಿಕ ಬೆಳವಣಿಗೆಗಳೂ ಒಂದು ಸ್ಥಗಿತತೆಗೆ ಬಂತು. ಎರಡು ಶತಮಾನಗಳ ಹಿಂದೆ ಕೈಗಾರಿಕೀಕರಣ ವಸಾಹತುಶಾಹಿ ಕಾಲದಲ್ಲಿ ಬೆಳೆದು ಬಂದಾಗ, ಭಾರತದಲ್ಲಿ ವೈಜ್ಞಾನಿಕ ಚಿಂತನೆಗೆ ಚಾಲನೆ ಬಂತು. ಯೂರೋಪಿನಲ್ಲಿಯೂ ಒಂದು ಘಟ್ಟದಲ್ಲಿ ಇಂಥ ವೈಚಾರಿಕ ಸ್ಥಗಿತತೆ ಇತ್ತು ಎಂಬ ದೇವಿಪ್ರಸಾದರ ಚಿಂತನೆಯನ್ನು ಡಾ.ಮಯ್ಯ ವಿವರಿಸಿದರು.

ನಿವೃತ್ತ ಪ್ರಾಧ್ಯಾಪಕ ಪ್ರೊ.ಕೆ.ರಾಜೇಂದ್ರ ಉಡುಪ ಅವರು ಅಧ್ಯಕ್ಷತೆ ವಹಿಸಿದ್ದರು. ಇಪ್ಪತ್ತನೇ ಶತಮಾನದ ಅತ್ಯುತ್ತಮ ವೈಜ್ಞಾನಿಕ ಆವಿಷ್ಕಾರಗಳೂ ತಾತ್ತ್ವಿಕ ಚಿಂತನೆಯ ಹಿನ್ನೆಲೆಯಲ್ಲಿ ಬೆಳೆದು ಬಂದಿರುವುದನ್ನು ಅವರು ವಿವರಿಸಿದರು. ಸಾಹಿತಿಗಳಾದ ಪ್ರೊ.ಮುರಲೀಧರ ಉಪಾಧ್ಯ ಮತ್ತು ಜಿ.ರಾಜಶೇಖರ ವೇದಿಕೆ ಮೇಲಿದ್ದರು. ಕುಂದಾಪುರ ಸಮುದಾಯದ ಅಧ್ಯಕ್ಷ ಉದಯ ಗಾಂವ್‌ಕರ್ ಸ್ವಾಗತಿಸಿದರು. ಚಂದ್ರಿಕಾ ನಾಗರಾಜ್ ಕಾರ್ಯಕ್ರಮ ನಿರೂಪಿಸಿದರು.

ಬಿಎಸ್ಸೆನ್ನೆಲ್ ಗುತ್ತಿಗೆ ನೌಕರರಿಂದ ಉಡುಪಿಯಲ್ಲಿ ಅನಿರ್ದಿಷ್ಟಾವಧಿ ಧರಣಿ:

ಉಡುಪಿ ದೂರಸಂಪರ್ಕ ವಿಭಾಗದ ಮೂರು ತಾಲೂಕುಗಳ 200 ಮಂದಿ ಗುತ್ತಿಗೆ ನೌಕರರಿಗೆ ಕಳೆದ ಅಕ್ಟೋಬರ್ ತಿಂಗಳಿಂದ ಕೇಂದ್ರ ಸರಕಾರ ಅನುದಾನ ನಿಡುವುದನ್ನು ನಿಲ್ಲಿಸಿದೆ. ಕಳೆದ ಎಪ್ರಿಲ್‌ನಿಂದ ಮೊದಲಲ್ಲಿ ವೇತನವನ್ನು ನೀಡದ ನಿಗಮವು ಹೋರಾಟದ ಬಳಿಕ ಅಕ್ಟೋಬರ್‌ವರೆಗೆ ಕೇವಲ ರೂ.8000 ವೇತನ ನೀಡಲಾಗಿದೆ. ಈಗ ನಾಲ್ಕು ತಿಂಗಳಿಂದ ವೇತನ ಬಾಕಿ ಇರಿಸಿದೆ. ಆದುದರಿಂದ ದೂರವಾಣಿ ಕೇಂದ್ರ, ಮೊಬೈಲ್ ಟವರ್, ಕಚೇರಿಗಳಲ್ಲಿ ಕೆಲಸ ಮಾಡುವ ಗುತ್ತಿಗೆ ಕಾರ್ಮಿಕರು ಸಂಪೂರ್ಣ ವೇತನ ಪಾವತಿಯಾಗುವವರೆಗೆ ಕೆಲಸ ಸ್ಥಗಿತಗೊಳಿಸಲು ನಿರ್ಧರಿಸಿ, ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಆರಂಭಿಸಿದ್ದಾರೆ.

ಜನವರಿ 31 ರಂದು ಧರಣಿ ಸತ್ಯಾಗ್ರಹ ಪ್ರಾರಂಭವಾಗಿದ್ದು, ಆ ದಿನ ಧರಣಿ ನಿರತರನ್ನು ಉದ್ದೇಶಿಸಿ ಉಡುಪಿ ಜಿಲ್ಲಾ ಬಿಎಸ್ಸೆನ್ನೆಲ್ ನಾನ್ ಪರ್ಮನೆಂಟ್ ವರ್ಕರ್ಸ್ ಯೂನಿಯನ್ ಅಧ್ಯಕ್ಷ ಶಶಿಧರ ಗೊಲ್ಲ ಮಾತನಾಡಿದರು. ಕಾರ್ಯದರ್ಶಿ ಮೋಹನ, ರಾಷ್ಟ್ರೀಯ ಸಮಿತಿಯ ಅಧ್ಯಕ್ಷ ಉದಯ ಬ್ರಹ್ಮಾವರ ಉಪಸ್ಥಿತರಿದ್ದರು.

ಬಿಎಸ್ಸೆನ್ನೆಲ್ ಗುತ್ತಿಗೆ ನೌಕರರಿಂದ ಮಂಗಳೂರಿನಲ್ಲಿ ಧರಣಿ:

ಮಂಗಳೂರು ಮತ್ತು ಉಡುಪಿ ಒಂದೇ ಬಿಎಸ್ಸೆನ್ನೆಲ್ ವಿಭಾಗಕ್ಕೆ ಸೇರಿದ್ದು, ದ.ಕ.ಮತ್ತು ಉಡುಪಿ ಜಿಲ್ಲೆಗಳಲ್ಲಿ 600ಕ್ಕೂ ಮಿಕ್ಕಿ ನಾನ್-ಪರ್ಮನೆಂಟ್ ಗುತ್ತಿಗೆ ನೌಕರರು ಕೆಲಸ ಮಾಡುತ್ತಿದ್ದು, ಅವರೆಲ್ಲರಿಗೂ ಅಕ್ಟೋಬರ್ 2018 ರಿಂದ ಜನವರಿ 2019ರ ವರೆಗಿನ 4 ತಿಂಗಳುಗಳ ವೇತನ ಪಾವತಿಯನ್ನು ಕಾಂಟ್ರಾಕ್ಟ್ ಕಂಪೆನಿಗಳವರು ಅವರಿಗೆ ಮಾಡಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಎರಡೂ ಜಿಲ್ಲೆಗಳಲ್ಲಿ ಫೆಬ್ರವರಿ 1 ರಂದು ಕೆಲಸಕ್ಕೆ ಗೈರುಹಾಜರಾಗಿ ಪ್ರತಿಭಟಿಸಲು ನಾನ್ ಪರ್ಮನೆಂಟ್ ನೌಕರರು ನಿರ್ಧರಿಸಿದ್ದರು. ಮೆ/ವಿಶಾಲ್ ಸೆಕ್ಯೂರಿಟಿ ಕನ್ಸಲ್ಟೆಂಟ್ ಮಂಗಳೂರು, ಮೆ/ಅರ್ಮಾನ್ ಬೆಂಗಳೂರು ಇವರು ಬಾಕಿದಾರ ಗುತ್ತಿಗೆ ಕಂಪೆನಿಗಳಾಗಿದ್ದು, ಅವರಾಗಲೀ ಅವರನ್ನು ನಿಯೋಜಿಸಿದ ಬಿಎಸ್ಸೆನ್ನೆಲ್ ಸಂಸ್ಥೆಯಾಗಲೀ ಬಾಕಿ ವೇತನ ಪಾವತಿ ಮಾಡಲು ಕ್ರಮ ಕೈಗೊಂಡಿರುವುದಿಲ್ಲ. ಈ ಸಂಬಂಧ ಡಿಸೆಂಬರ್ 27ರಂದೇ ಬಿಎಸ್ಸೆನ್ನೆಲ್ ವಿಭಾಗಾಧಿಕಾರಿಗಳಿಗೂ, ಸೆಂಟ್ರಲ್ ಅಸಿಸ್ಟಾಂಟ್ ಲೇಬರ್ ಕಮಿಷನರಿಗೂ ಮನವಿ ಸಲ್ಲಿಸಲಾಗಿತ್ತು. ಆದಾಗ್ಯೂ ಈವರೆಗೂ ಬಾಕಿ ವೇತನ ಪಾವತಿ ಆಗಿರುವುದಿಲ್ಲ.

ಈ ಹಿನ್ನೆಲೆಯಲ್ಲಿ ಮಂಗಳೂರಿನಲ್ಲಿರುವ ಬಿಎಸ್ಸೆನ್ನೆಲ್ ಮಂಗಳೂರು-ಉಡುಪಿ ಡಿವಿಜನಿನ ಪ್ರಧಾನ ಕಚೇರಿ ಎದುರುಗಡೆ ಪ್ರತಿಭಟನಾ ಧರಣಿಯನ್ನು ಹಮ್ಮಿಕೊಳ್ಳಲಾಗಿತ್ತು. ಈ ಪ್ರತಿಭಟನೆಯನ್ನು ಸಿಐಟಿಯು ದ.ಕ.ಜಿಲ್ಲಾ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಉದ್ಘಾಟಿಸಿದರು. ಬಿಎಸ್ಸೆನ್ನೆಲ್ ನಾನ್ ಪರ್ಮನೆಂಟ್ ನೌಕರರ ಸಂಘದ ದ.ಕ.ಜಿಲ್ಲಾಧ್ಯಕ್ಷ ವಸಂತ ಆಚಾರಿ, ಉಡುಪಿ ಜಿಲ್ಲಾಧ್ಯಕ್ಷ ಶಶಿಧರ ಗೊಲ್ಲ, ಕಾರ್ಯದರ್ಶಿ ಮೋಹನ್ ಉಡುಪಿ, ಸಿಐಟಿಯು ಮುಖಂಡರಾದ ಯೋಗೀಶ್ ಜಪ್ಪಿನಮೊಗರು ಭಾಗವಹಿಸಿದ್ದರು. ಈ ಸಂಬಂಧ ತಾವು ಕ್ರಮಕೈಗೊಳ್ಳುವುದಾಗಿ ಬಿಎಸ್ಸೆನ್ನೆಲ್ ಅಧಿಕಾರಿಗಳು ಭರವಸೆ ಕೊಟ್ಟ ಮೇರೆಗೆ, ಪ್ರತಿಭಟನೆಯನ್ನು ಹಿಂತೆಗೆಯಲಾಯಿತು.

ಉಡುಪಿಯಲ್ಲೊಂದು ಎಕೆಜಿ ಭವನ



ಉಡುಪಿ ಜಿಲ್ಲೆಯ ಬೈಂದೂರು ತಾಲೂಕಿನ ಮದೂರು ಗ್ರಾಮದಲ್ಲಿ ಇಂದು ಎ.ಕೆ ಗೋಪಾಲನ್ ಸ್ಮಾರಕ ಭವನದ ಶಂಕು ಸ್ಥಾಪನೆ ಮಾಡಲಾಯಿತು. ಶಂಕು ಸ್ಥಾಪನೆಯನ್ನು ಸಿಪಿಐ(ಎಂ) ಉಡುಪಿ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣಶೆಟ್ಟಿ ನೆರವೇರಿಸಿದರು. ಸಿಪಿಐ(ಎಂ) ಉಡುಪಿ ಜಿಲ್ಲಾ ಮುಖಂಡರಾದ ಯು. ದಾಸಭಂಡಾರಿ, ಸ್ಥಳೀಯರಾದ ಚಂದ್ರ ಆಚಾರಿ, ಸಿಜು, ಕೃಷ್ಣ ಇದ್ದರು.

ಮಂಗಳೂರಿನಲ್ಲಿ ಬಿಸಿಯೂಟ ನೌಕರರ ಧರಣಿ:

ಕೇಂದ್ರ ಸರಕಾರದ ಬಜೆಟ್ಟಿನಲ್ಲಿ ವೇತನ ಏರಿಕೆ ಮಾಡದಿರುವುದನ್ನು ಖಂಡಿಸಿ, ದ.ಕ.ಜಿಲ್ಲಾ ಅಕ್ಷರದಾಸೋಹ ನೌಕರರ ಸಂಘದ ನೇತೃತ್ವದಲ್ಲಿ ಬಿಸಿಯೂಟ ನೌಕರರು ಫೆಬ್ರವರಿ 4 ರಂದು ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಬಿಸಿಯೂಟ ನೌಕರರು ರಾಜ್ಯದಲ್ಲಿ ಪ್ರಸ್ತುತ ರೂ.2700 ಮಾಸಿಕ ವೇತನ ಪಡೆಯುತ್ತಿದ್ದಾರೆ. ಕೇಂದ್ರ ಸರಕಾರವು ಪ್ರಸ್ತಾಪಿಸಿರುವ ಮಾಸಿಕ ಪಿಂಚಣಿಗಿಂತಲೂ ಇದು ಕಡಿಮೆ ಇದೆ. ಇದನ್ನು ಹೆಚ್ಚಿಸದಿರುವ ಕೇಂದ್ರ ಸರಕಾರದ ನಿಲುವನ್ನು ಪ್ರತಿಭಟನಾಕಾರರು ಖಂಡಿಸಿದರು.

ಪ್ರತಿಭಟನೆಯನ್ನುದ್ದೇಶಿಸಿ ಸಿಐಟಿಯು ದ.ಕ. ಜಿಲ್ಲಾ ಉಪಾಧ್ಯಕ್ಷ ವಸಂತ ಆಚಾರಿ, ಸಂಘದ ಅಧ್ಯಕ್ಷೆ ಪದ್ಮಾವತಿ ಶೆಟ್ಟಿ, ಕಾರ್ಯದರ್ಶಿ ಗಿರಿಜಾ ಮೂಡಬಿದರೆ ಮಾತನಾಡಿದರು. ಖಜಾಂಚಿ ಭವ್ಯಾ ವಂದಿಸಿದರು. ಸಂಘದ ಜಿಲ್ಲಾ ಸಮಿತಿ ಸದಸ್ಯರಾದ ರೇಖಲತ, ಬಬಿತಾ, ಪ್ರಮೀಳಾ, ಜಯಲಕ್ಷ್ಮಿ ಧರಣಿಯಲ್ಲಿ ಭಾಗವಹಿಸಿದ್ದರು.

'ಮೇಲ್ವಿಚಾರಕಿಯರ ನೇಮಕ ಪ್ರಕ್ರಿಯೆ ಪೂರ್ಣಗೊಳಿಸಿ'

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಮೇಲ್ವಿಚಾರಕಿಯರ ಹುದ್ದೆಯ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸುವಂತೆ ಆಗ್ರಹಿಸಿ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್.ಸಿ.) ಮುಂಭಾಗ ಉದ್ಯೋಗಾಕಾಂಕ್ಷಿಗಳು ಫೆ.6 ರಂದು ಪ್ರತಿಭಟನೆ ಮಾಡಿದರು.

ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ (ಸಿಐಟಿಯು) ನೇತೃತ್ವದಲ್ಲಿ ಆಕಾಂಕ್ಷಿಗಳು 643 ಮೇಲ್ವಿಚಾರಕಿಯರ ಹುದ್ದೆಯ ಪಟ್ಟಿಯನ್ನು ಪ್ರಕಟಿಸದೆ ಕೆಪಿಎಸ್.ಸಿ ದ್ರೋಹ ಎಸಗುತ್ತಿದೆ' ಎಂದು ದೂರಿದರು.

ಸಂಘದ ಅಧ್ಯಕ್ಷೆ ವರಲಕ್ಷ್ಮಿ, 'ಇಲಾಖೆಯಲ್ಲಿ ಮೇಲ್ವಿಚಾರಕಿಯರ ಹುದ್ದೆ ನೇಮಕಾತಿ ಅಧಿಸೂಚನೆಯನ್ನು 2016ರಲ್ಲಿ ಹೊರಡಿಸಿ, ಲಿಖಿತ ಪರೀಕ್ಷೆ ನಡೆಸಿತ್ತು. 2018ರಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ತಾತ್ಕಾಲಿಕ ಪಟ್ಟಿ ಪ್ರಕಟಿಸಿತ್ತು. ಆದರೆ, ಅಂತಿಮ ಪಟ್ಟಿ ಬಿಡುಗಡೆಗೊಳಿಸದೆ ಆಯೋಗ ಆಕಾಂಕ್ಷಿಗಳ ಭವಿಷ್ಯದೊಂದಿಗೆ ಆಟ ಆಡುತ್ತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಉದ್ಯೋಗಾಕಾಂಕ್ಷಿಗಳು ಅಧಿಕಾರಿಗಳನ್ನು ವಿಚಾರಿಸಿದರೆ ಕಾಯುವಂತೆ ಹೇಳುತ್ತಾರೆ. ಈ ರೀತಿ ಕಾದು ಮೂರು ವರ್ಷಗಳು ಮುಗಿದು ಹೋದವು. ಅಧಿಕಾರಿಗಳ ವಿಳಂಬ ಧೋರಣೆಯಿಂದ ತುಂಬಾ ತೊಂದರೆಯಾಗುತ್ತಿದೆ. ತಡವಾದರೆ ಆಯ್ಕೆಯಾದವರ ವಯೋಮಿತಿ ಹೆಚ್ಚಾಗಿ ಉದ್ಯೋಗದಿಂದ ವಂಚಿತರಾಗುತ್ತಾರೆ' ಎಂದು ಬೇಸರ ವ್ಯಕ್ತಪಡಿಸಿದರು.

'ಕೆಪಿಎಸ್ಸಿ ನಿಯಮದ ಪ್ರಕಾರ ಗ್ರೂಪ್ 'ಸಿ' ಹುದ್ದೆಗಳ ನೇಮಕಾತಿ ಅಧಿಸೂಚನೆ ಹೊರಡಿಸಿದ 7–9 ತಿಂಗಳೊಳಗೆ ನೇಮಕಾತಿ ಪ್ರಕ್ರಿಯೆ ಮುಕ್ತಾಯವಾಗಬೇಕು. ಆದರೆ, ವರ್ಷಗಳೇ ಕಳೆದರೂ ನೇಮಕಾತಿ ಇನ್ನೂ ಬಾಕಿಯಿದೆ. ಈ ಕೂಡಲೇ ಪ್ರಕ್ರಿಯೆ ಪೂರ್ಣಗೊಳಿಸಬೇಕು' ಎಂದು ಆಗ್ರಹಿಸಿದರು.



ತೇಲ್ತುಂಬ್ಡೆ ಅಕ್ರಮ ಬಂಧನವನ್ನು ವಿರೋಧಿಸಿ ಪ್ರತಿಭಟನೆ



ಸುಪ್ರೀಂ ಕೋರ್ಟ್ ನಿರ್ದೇಶನವನ್ನು ಪಾಲಿಸದೇ ಆನಂದ್ ತೇಲ್ತುಂಬ್ಡೆ ಅಕ್ರಮ ಬಂಧಿಸಿದ್ದ ಪುಣೆ ಪೊಲೀಸರ ಕ್ರಮವನ್ನು ಖಂಡಿಸಿ ಮತ್ತು ಅವರ ಮೇಲೆ ಹೊರಿಸಿರುವ ಸುಳ್ಳು ಆರೋಪಗಳನ್ನು ಹಿಂಪಡೆಯಲು ಆಗ್ರಹಿಸಿ ಫೆಬ್ರುವರಿ 2ರಂದು ಬೆಂಗಳೂರಿನ ಟೌನ್ ಹಾಲ್ ಎದುರು ಪ್ರತಿಭಟನೆ ನಡೆಸಲಾಯಿತು.

ಹಲವಾರು ಸಮಾನ ಮನಸ್ಕ ಸಂಘಟನೆಗಳು ಸೇರಿ ಆಯೋಜಿಸಿದ ಈ ಪ್ರತಿರೋಧವನ್ನುದ್ದೇಶಿಸಿ ಡಾ.ಕೆ.ಮರುಳಸಿದ್ದಪ್ಪ, ನಟ, ಹೋರಾಟಗಾರ ಪ್ರಕಾಶ್ ರೈ, ಡಾ.ಕೆ.ಷರೀಫಾ, ಸಿ.ಎಚ್. ಭಾಗ್ಯ, ಗೋಪಾಲಕೃಷ್ಣ ಹರಳಹಳ್ಳಿ, ವಿಮಲಾ ಕೆ.ಎಸ್, ಜ್ಯೋತಿ ಅನಂತ್ ಸುಬ್ಬರಾವ್, ಮಾವಳ್ಳಿ ಶಂಕರ್, ಪಾರ್ವತೀಶ ಬಿಳಿದಾಳೆ, ಗೌರಮ್ಮ, ವಿಜಯ ಭಾಸ್ಕರ್, ಕ್ಲಿಫ್ಟನ್, ವಿನಯ್ ಶ್ರೀನಿವಾಸ್, ಆರ್ ರಾಮಕೃಷ್ಣ ಮತ್ತಿತರರು ಮಾತನಾಡಿದರು.

ಪುರಭವನ ಎದುರು ಸೇರಿದ್ದ ಪ್ರತಿಭಟನಾಕಾರರು, 'ತೇಲ್ತುಂಬ್ಡೆ ಅವರ ವಿರುದ್ಧ ದಾಖಲಿಸಿರುವ ಸುಳ್ಳು ಮೊಕದ್ದಮೆಯನ್ನು ಕೂಡಲೇ ಹಿಂಪಡೆಯಬೇಕು' ಎಂದು ಒತ್ತಾಯಿಸಿದರು. ಭೀಮಾಕೋರೆಗಾಂವ್ ಗ್ರಾಮದಲ್ಲಿ 200 ವರ್ಷಗಳ ಹಿಂದೆ ನಡೆದಿದ್ದ ಚಾರಿತ್ರಿಕ ಘಟನೆಯನ್ನು ಸ್ಮರಿಸುವುದಕ್ಕಾಗಿ ದಲಿತ ಸಂಘಟನೆಗಳು 2018ರ ಜ.1 ರಂದು ಕಾರ್ಯಕ್ರಮ ಸಂಘಟಿಸಿದ್ದವು. ಕಾರ್ಯಕ್ರಮಕ್ಕೆ ಆಹ್ವಾನವಿದ್ದರೂ ತೇಲ್ತುಂಬ್ಡೆ ಅವರು ಭಾಗವಹಿಸಿರಲಿಲ್ಲ. ಅಷ್ಟಾದರೂ ಅವರ ವಿರುದ್ಧ ಸ್ಥಳೀಯ ಪೊಲೀಸರು, 'ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ (ಯುಎಪಿಎ)' ಅಡಿ ಪ್ರಕರಣ ದಾಖಲಿಸಿಕೊಂಡಿದ್ದು ಖಂಡನೀಯ' ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷ ಕೆ.ಮರುಳಸಿದ್ದಪ್ಪ, 'ದಲಿತರು ಹಾಗೂ ಶೋಷಿತರ ಧ್ವನಿಯಾಗಿರುವ ತೇಲ್ತುಂಬ್ಡೆ ಅವರ ಮೇಲಿನ ಆರೋಪ ಸುಳ್ಳು. ಬಂಧನದ ಸಾಧ್ಯತೆ ಅರಿತಿದ್ದ ಅವರು ಈ ಹಿಂದೆಯೇ ಸುಪ್ರೀಂಕೋರ್ಟ್ ಮೊರೆ ಹೋಗಿದ್ದರು. ಕೆಳಹಂತದ ನ್ಯಾಯಾಲಯದಲ್ಲಿ ಜಾಮೀನು ಪಡೆಯಲು ಅವಕಾಶ ನೀಡಿದ್ದ ಕೋರ್ಟ್, ಫೆ. 11ರವರೆಗೂ ಅವರನ್ನು ಬಂಧಿಸದಂತೆ ಪೊಲೀಸರಿಗೆ ನಿರ್ದೇಶನ ನೀಡಿತ್ತು' ಎಂದು ಹೇಳಿದರು. ಜನಸಾಮಾನ್ಯರು ನ್ಯಾಯಾಂಗ ನಿಂದನೆ ಮಾಡಿದರೆ ಶಿಕ್ಷಾರ್ಹವಾಗುತ್ತದೆ. ಇಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಬೇಕಾದ ಪುಣೆ ಪೊಲೀಸರು ನ್ಯಾಯಾಂಗ ನಿಂದನೆ ಮಾಡಿದ್ದು, ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು. ತೇಲ್ತುಂಬ್ಡೆ ಅವರದ್ದು ಅಕ್ರಮ ಬಂಧನವೆಂದು ಪುಣೆ ನ್ಯಾಯಾಲಯವೇ ಅಭಿಪ್ರಾಯಪಟ್ಟು, ಅವರನ್ನು ಬಿಡುಗಡೆ ಮಾಡಿದೆ. ನ್ಯಾಯಾಲಯದ ಆದೇಶವನ್ನು ನಾವು ಸ್ವಾಗತಿಸುತ್ತೇವೆ' ಎಂದರು.

ಬಿ.ಜೆ.ಪಿ ನೇತೃತ್ವದ ಕೇಂದ್ರ ಸರ್ಕಾರದ ಮನುವಾದೀ ನೀತಿಗಳನ್ನು ಕಟುವಾಗಿ ಖಂಡಿಸಲಾಯಿತು.



ಕಲಬುರ್ಗಿಯಲ್ಲಿ ರೇಗಾ ಕೂಲಿ ಬಾಕಿ ವಿರುದ್ಧ ಪ್ರತಿಭಟನೆ

ಬರಗಾಲದಲ್ಲಿ ರೇಗಾ ಕೆಲಸ ಮಾಡಿದ ಕೂಲಿಕಾರರ ಕೂಲಿಯನ್ನು ಕಲಬುರ್ಗಿಯಲ್ಲಿ ನಿಯಮಿತವಾಗಿ ಪಾವತಿ ಮಾಡುತ್ತಿಲ್ಲ. ಉದ್ಯೋಗ ಖಾತ್ರಿ ಕಾಯ್ದೆ ಪ್ರಕಾರ ವಾರಕೊಮ್ಮೆ ಕೂಲಿ ಪಾವತಿಸಬೇಕು. ಎರಡು ತಿಂಗಳಿಂದ ಕೂಲಿ ಪಾವತಿ ಬಾಕಿಯಿದೆ. ಇದರಿಂದ ರೇಗಾ ಕೂಲಿಕಾರರಲ್ಲಿ ತೀವ್ರ ಆಕ್ರೋಶ ಮೂಡಿದ್ದು ಕಲಬುರ್ಗಿಯಲ್ಲಿ ಎರಡು ಪ್ರತಿಭಟನೆಗಳು ಫೆ.1/2 ರಂದು ನಡೆದಿವೆ.

ಒಂದು ಪ್ರತಿಭಟನೆಯನ್ನು ಜನವಾದಿ ಮಹಿಳಾ ಸಂಘಟನೆ, ಉದ್ಯೋಗ ಖಾತ್ರಿ ಕಾಯಕ ಜೀವಿಗಳ ಸಂಘಟನೆ ಜಂಟಿಯಾಗಿ ಹಮ್ಮಿಕೊಂಡಿತ್ತು. ಈ ಪ್ರತಿಭಟನೆಯಲ್ಲಿ ಕೇಂದ್ರ ಸರಕಾರದ ಪ್ರತಿಕೃತಿಯನ್ನು ಸುಡಲಾಯಿತು. ಕೆ.ನೀಲಾ, ಡಾ. ಪ್ರಭು ಖಾನಾಪುರೆ, ಅಶ್ವಿನಿ ಮದನಕರ್ ಪ್ರತಿಭಟನೆಯ ನಾಯಕತ್ವ ವಹಿಸಿದ್ದರು.

ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಘಟಕ ಸೂಪರ್ ಮಾರ್ಕೆಟ್ ಕಲಬುರಗಿ ಅಂಚೆ ಕಚೇರಿ ಮುಂದೆ ಪ್ರತಿಭಟನೆ ನಡೆಸಿತು. ಮಾರುತಿ ಮಾನ್ಪಡೆ, ಶರಣಬಸವ ಮಮಶೆಟ್ಟಿ ಪ್ರತಿಭಟನೆಯ ನಾಯಕತ್ವ ವಹಿಸಿದ್ದರು.



ಕುಂದಾಪುರದಲ್ಲಿ ಅಕ್ಷರ ದಾಸೋಹ ನೌಕರರ ಪ್ರತಿಭಟನೆ:

ಕೇಂದ್ರ ಸರಕಾರ ಮಂಡಿಸಿರುವ ಬಜೆಟ್‌ನಲ್ಲಿ ಅಕ್ಷರ ದಾಸೋಹ ಕಾರ್ಯಕರ್ತರಿಗೆ ಯಾವುದೇ ಸೌಲಭ್ಯವನ್ನು ನೀಡಿಲ್ಲ ಎಂದು ಆರೋಪಿಸಿ ಫೆಬ್ರವರಿ 4 ರಂದು ಕುಂದಾಪುರದಲ್ಲಿ ಅಕ್ಷರದಾಸೋಹ ನೌಕರರು ತಾಲೂಕು ಪಂಚಾಯತ್ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಸಂಘಟನೆಯ ಉಡುಪಿ ಜಿಲ್ಲೆಯ ಗೌರವಾಧ್ಯಕ್ಷ ಯು.ದಾಸ ಭಂಡಾರಿ, ಸಂಘದ ಕುಂದಾಪುರ ತಾಲೂಕು ಅಧ್ಯಕ್ಷೆ ಜಯಶ್ರೀ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು. ಸಂಘದ ತಾಲೂಕು ಕಾರ್ಯದರ್ಶಿ ಸಿಂಗಾರಿ, ಕೋಶಾಧಿಕಾರಿ ನಾಗರತ್ನ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಫೆಬ್ರುವರಿ 18: ದಿಲ್ಲಿ ಚಲೋ

ಶಿಕ್ಷಣ ಉಳಿಸಿ ! ಪ್ರಜಾಪ್ರಭುತ್ವ ಉಳಿಸಿ !! ದೇಶ ಉಳಿಸಿ !!!

ಗುರುರಾಜ ದೇಸಾಯಿ

ಕೇಂದ್ರ ಸರಕಾರದ ನೀತಿಗಳ ವಿರುದ್ಧ ರೈತರು, ಕಾರ್ಮಿಕರು, ಯುವಜನರು, ಮಹಿಳೆಯರು ಹೋರಾಟ ನಡೆಸಿದ್ದಾರೆ. ನ್ಯಾಯಯುತವಾದ ಬೇಡಿಕೆ ಈಡೇರಿಸಬೇಕು ಎಂದು ಆಗ್ರಹಿಸಿ ಸಂಸತ್ ಭವನದ ಮುಂದೆ ಪ್ರತಿಭಟನೆ ನಡೆಸಿದ್ದಾರೆ. ಈಗ ವಿದ್ಯಾರ್ಥಿಗಳು ಫೆಬ್ರವರಿ 18 ರಂದು ಸಂಸತ್ ಭವನದ ಮುಂದೆ ಬೃಹತ್ ಪ್ರತಿಭಟನೆ ನಡೆಸುತ್ತಿವೆ. ಶಿಕ್ಷಣ–ದೇಶವನ್ನು ರಕ್ಷಿಸಿ, ವಿದ್ಯಾರ್ಥಿಗಳ ಹಕ್ಕುಗಳ ಜಾರಿಗಾಗಿ, ಕೋಮುವಾದವನ್ನು ವಿರೋಧಿಸಿ SFI, AISF, AIDSO, AISB, PSU ವಿದ್ಯಾರ್ಥಿ ಸಂಘಟನೆಗಳು ಕೇಂದ್ರ ಸರಕಾರದ ಶಿಕ್ಷಣ ವಿರೋಧಿ ನೀತಿಗಳನ್ನು ಖಂಡಿಸಿ ಪ್ರತಿಭಟನೆ ನಡೆಸುತ್ತಿವೆ.

ಸಚಿವ ಪಿಯೂಷ್ ಗೋಯೆಲ್ ರವರ ಸಂಪೂರ್ಣ ಬಜೆಟ್ ಭಾಷಣದಲ್ಲಿ ಶಿಕ್ಷಣದ ಬಗ್ಗೆ ಕೇವಲ ಎರಡು ಸಾಲುಗಳಿವೆ. ಇದು ಬಿಜೆಪಿ ಸರ್ಕಾರ ಶಿಕ್ಷಣದ ಬಗ್ಗೆ ಲಜ್ಜೆಗೆಟ್ಟ ತಿರಸ್ಕಾರವು ಸ್ಪಷ್ಟವಾಗಿದೆ.

ಈ ವರ್ಷದ ಯೂನಿಯನ್ ಬಜೆಟನಲ್ಲಿ, ಶಿಕ್ಷಣಕ್ಕಾಗಿ ಅಪಾರವಾದ ಹಣ ಕಡಿತ ಮಾಡಲಾಗಿದೆ. ಕಳೆದ ವರ್ಷದ ಬಜೆಟ್ ಗೆ ಹೋಲಿಸಿದರೆ ಈ ಬಾರಿ ಬಜೆಟಿನಲ್ಲಿ ಕೇವಲ ಶೇ. 0.10 ರಷ್ಟು ಮಾತ್ರ ಶಿಕ್ಷಣಕ್ಕೆ

ಪುಟ 11 ನೋಡಿ

"ಉದ್ಯೋಗಕ್ಕಾಗಿ, ನಾವು ನೀವು" ಸಹಿ ಸಂಗ್ರಹ ಚಳುವಳಿ

ಸಿ.ಐ.ಟಿ.ಯು. ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ಯಿಂದ ನಿರುದ್ಯೋಗ, ಅರೆ ಉದ್ಯೋಗ ವಿರುದ್ಧ, "ಉದ್ಯೋಗಕ್ಕಾಗಿ, ನಾವು ನೀವು" ಸಹಿ ಸಂಗ್ರಹ ಉದ್ಘಾಟನಾ ಸಭೆ, ಜ್ಯೋತಿ ಬಸು ಭವನ ಬೆಂಗಳೂರಿನಲ್ಲಿ ನಡೆಯಿತು, ರಾಜ್ಯ ಕಾರ್ಯದರ್ಶಿಗಳಾದ ಕೆ.ಎನ್, ಉಮೇಶ್ ರವರು ಸಹಿ ಮಾಡುವ ಮೂಲಕ ಸಹಿ ಸಂಗ್ರಹ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ವೇದಿಕೆಯಲ್ಲಿ ಬಿ.ಎನ್. ಮಂಜುನಾಥ್ ಸೆಲ್ವಿ ದಿಲೀಪ್, ರವಿ ಕುಮಾರ್ ಇದ್ದರು. ಸಭೆಯಲ್ಲಿ ಎಲ್ಲಾ ಸಂಘಗಳ ಪದಾಧಿಕಾರಿಗಳು ಹಾಜರಿದ್ದರು.

'ಸುಂದರಿ ಪ್ರಿಯಾಂಕಾ', 'ಮಂಡ್ಯ ಗೌಡತಿ', 'ಗೋಡ್ಸೆ ಕಿ ಜೈ' ಇತ್ಯಾದಿ

ನಮ್ಮ ಸಮಾಜದ ಎಲ್ಲಾ ಕೊಚ್ಚೆಗುಂಡಿಗಳು, ಗಬಾರುಗಳೇ ಇಂದಿನ ಎಂ.ಎಲ್.ಎ., ಎಂ.ಪಿಗಳಾಗಿ ನಿಂತಿವೆ ಎನ್ನಿಸುತ್ತದೆ. ಹೊಲಸು ಭಾಷೆ, ವಿಕೃತ ವಿಚಾರಗಳನ್ನು ಎಗ್ಗಿಲ್ಲದೇ ಬಳಸುವ ಇವರುಗಳು ಭಾರತೀಯ ನಾಗರೀಕತೆಯ ಅತ್ಯಂತ ಕೊಳಕು ರೋಗಗಳಾಗಿದ್ದಾರೆ. ಕೆಲವರು ಇದರಲ್ಲಿ ವಿಶೇಷ ಪರಿಣಿತಿಯನ್ನು ಪಡೆದಿದ್ದಾರೆ. ಹಿಂದು ಹೆಂಗಸರನ್ನು ಮುಟ್ಟಿದ ಮುಸ್ಲಿಮ್ ಕೈಗಳು ಇರಬಾರದು ಎನ್ನುವ ವ್ಯಕ್ತಿಯ ಬಾಯಿ ಹಾಗೂ ಬುದ್ಧಿಯಲ್ಲಿ ಸಾವಿರಾರು ವರ್ಷಗಳ ಮಾಲಿನ್ಯವೇ ಹರಿದುಬರುತ್ತದೆ.

ಅತಿಥಿ ಅಂಕಣ




ಪ್ರೊ. ರಾಜೇಂದ್ರ ಚೆನ್ನಿ

ನಮ್ಮ ರಾಜಕೀಯ ವರ್ಗವು ಯಾವುದೇ ಪಕ್ಷವಿರಲಿ, ಸ್ವಭಾವದಲ್ಲಿ ಒಂದೇ ಆಗಿದೆ. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಗಾಂಧಿಯವರು ಅಲ್ಲದೆ ಇನ್ನೂ ಅನೇಕ ಶ್ರೇಷ್ಠ ವ್ಯಕ್ತಿತ್ವವುಳ್ಳ ನಾಯಕರಿಂದಾಗಿ ಹೋರಾಟಕ್ಕೆ ನುಗ್ಗಿದ ವರ್ಗವು ಸುಸಂಸ್ಕೃತವಾಗಿತ್ತು. ಕಾಂಗ್ರೆಸ್ ನೇತೃತ್ವದ ಹೋರಾಟದ ಮೊದಲ ಹಂತದಲ್ಲಿ ಕಾಂಗ್ರೆಸ್ ಇನ್ನೂ ಜನಸಾಮಾನ್ಯರ ಪಕ್ಷವಾಗಿರದೇ ಇಂಗ್ಲೀಷ್ ಬಲ್ಲ, ಶಿಕ್ಷಿತ, ನಗರವಾಸಿ ಜನರ ಪಕ್ಷವಾಗಿತ್ತು. ಇವರಲ್ಲಿ ಬಹುಪಾಲು ನ್ಯಾಯವಾದಿಗಳು, ಶಿಕ್ಷಕರು ಆಗಿದ್ದರು. ಅಲ್ಲದೆ ಅವರ ಸ್ವಾತಂತ್ರ್ಯದ ಕಲ್ಪನೆಯೆಂದರೆ 'ಬ್ರಿಟಿಷ್ ಇಂಗ್ಲಿಷ್" ನಲ್ಲಿ ಅಚ್ಚುಕಟ್ಟಾದ ಅಹವಾಲುಗಳನ್ನು ಬರೆದು ವಸಾಹತುಶಾಹಿ ಸರಕಾರಕ್ಕೆ ಗೌರವಪೂರ್ವಕವಾಗಿ ಸಲ್ಲಿಸಿ, ವಸಾಹತು ಆಡಳಿತದ ಅಡಿಯಲ್ಲಿಯೇ ಕನಿಷ್ಠ ಮಟ್ಟದ ಕೆಲವು ಸ್ವಾತಂತ್ರ್ಯಗಳನ್ನು, ರಿಯಾಯಿತಿಗಳನ್ನು ಕೇಳುವುದಾಗಿತ್ತು. ಹೀಗಾಗಿ ಅಂದಿನ ರಾಜಕೀಯ ವರ್ಗದ ಭಾಷೆಯು ಸುಸಂಸ್ಕೃತವೇ ಆಗಿತ್ತು. ಮುಂದೆ ಈ ಪಕ್ಷದಲ್ಲಿ "ಉಗ್ರಪಂಥೀಯ"ರಾದ ತಿಲಕ್ ರಂಥವರ ಕೈ ಮೇಲಾದರೂ ತಿಲಕ್ ರಂಥವರು ವಿದ್ವಾಂಸರಾಗಿದ್ದರು, ಪತ್ರಕರ್ತರಾಗಿದ್ದರು. ಗಾಂಧಿಯವರ ಪ್ರವೇಶದಿಂದಾಗಿ ಎಲ್ಲಾ ವರ್ಗಗಳ ಜನರು ಸ್ವಾತಂತ್ರ್ಯ ಆಂದೋಲನವನ್ನು ಮಹಿಳೆಯರು ಸೇರಿದಂತೆ ಪ್ರವೇಶ ಮಾಡಿದರು. ಆದರೆ ಅವರಿಗೆ ಯಾರಿಗೂ ಸ್ವಾತಂತ್ರ್ಯ ಹೋರಾಟವೆಂದರೆ ಮುಂದೆ ಅಧಿಕಾರಗಿಟ್ಟಿಸುವ ವಿಧಾನವೆಂದು ಗೊತ್ತೇ ಇರಲಿಲ್ಲ. ಲಕ್ಷಾಂತರ ಜನರು ತಮ್ಮದೆಲ್ಲವನ್ನು ತೊರೆದು ಸ್ವಾತಂತ್ರ್ಯಹೋರಾಟದಲ್ಲಿ ಎಲ್ಲವನ್ನೂ ಕಳೆದುಕೊಂಡು ಅನಾಮಧೇಯರಾಗಿಯೇ ಕಾಲಗರ್ಭವನ್ನು ಸೇರಿದರು.

ಆದರೆ ಕ್ರಮೇಣವಾಗಿ ಬ್ರಿಟಿಷ್ ಸರಕಾರವು ಹಲವು ರಾಜಕೀಯ ಸುಧಾರಣೆಗಳ ಮೂಲಕ ಸ್ಥಳೀಯ ಆಡಳಿತವನ್ನು ಸ್ವದೇಶಿಯರಿಗೆ ಕೊಡಲಾರಂಬಿಸಿದಾಗ ಈ ನಕಾಶೆಯೇ ಬದಲಾಯಿತು. ಸ್ಥಳೀಯ ಬಲಾಢ್ಯರು, ಜಮೀನ್ದಾರರು, ಶ್ರೀಮಂತರು ಇವರುಗಳು ಪ್ರವೇಶಮಾಡತೊಡಗಿದರು. ಇವರಿಗೆ ಗಾಂಧಿ ಚಿಂತನೆಯ ಯಾವ ಕಾಳಜಿಯೂ ಇರಲಿಲ್ಲ. ಅಲ್ಲದೇ ಈ ದೇಶೀ ವರ್ಗವು ಜಮೀನ್ದಾರಿ ಮನೋಭಾವನೆಯ, ಜಾತಿವ್ಯವಸ್ಥೆಯ ಪರವಾಗಿದ್ದ ಹಾಗೂ ಯಾವುದೇ ಪ್ರಗತಿಪರ ನಂಬಿಕೆಗಳು ಇಲ್ಲದ ವರ್ಗವಾಗಿತ್ತು. ಕಾಂಗ್ರೆಸ್ ಹೋರಾಟವನ್ನು ಬೆಂಬಲಿಸಿದ ಇನ್ನೊಂದು ವರ್ಗವೆಂದರೆ ವ್ಯಾಪಾರಿಗಳ ಹಾಗೂ ಕಾರ್ಖಾನೆಗಳ ಮಾಲೀಕರ, ವ್ಯವಹಾರಸ್ಥರ ವರ್ಗವಾಗಿತ್ತು. ಇವರಿಗೆ ಬ್ರಿಟಿಷ್ ವಸಾಹತುಶಾಹಿ ತಮ್ಮ ಮೇಲೆ ಹೇರಿದ್ದ ಅನೇಕ ಅಡಚಣೆಗಳನ್ನು ನಿವಾರಿಸುವ ಸ್ವದೇಶೀ ಆಡಳಿತವು ಬೇಕಾಗಿತ್ತು. ಬ್ರಿಟಿಷ್ ಸರಕಾರವು ಇಲ್ಲಿಯ ಕೈಗಾರಿಕೆಗಳ ಬೆಳವಣಿಗೆಯನ್ನು ಉದ್ದೇಶಪೂರ್ವಕವಾಗಿ ಕುಂಠಿತಗೊಳಿಸಿತ್ತು. ಹೀಗಾಗಿ ಕಾಂಗ್ರೆಸ್ ನೇತೃತ್ವದ ಹೋರಾಟವು ಗೆದ್ದು ಸ್ವದೇಶೀ ಸರಕಾರವು ಬರುವುದಾದರೆ ಅದು ತಮ್ಮ ಜೊತೆಗೆ ಶಾಮೀಲಾಗುತ್ತದೆ ಎನ್ನುವುದನ್ನು ಈ ವರ್ಗವು ಸರಿಯಾಗಿಯೇ ಗುರುತಿಸಿತ್ತು. ಹಾಗೆಂದ ಮಾತ್ರಕ್ಕೆ ಸ್ವಾತಂತ್ರ್ಯ ಹೋರಾಟಕ್ಕೆ ಇಳಿದ ಎಲ್ಲರೂ ಇಂಥ ಸ್ವಾರ್ಥದ ಕಾರಣಕ್ಕಾಗಿಯೇ ಎಂದಲ್ಲ. ಒಟ್ಟಾರೆ ಅಂದಿನ ವರ್ಗಗಳ ಹಿತಾಸಕ್ತಿಗಳು ಹೇಗಿದ್ದವು ಎನ್ನುವುದನ್ನು ವಿವರಿಸಿದ್ದೇನೆ.

ಈ ಮಧ್ಯೆ ಗಾಂಧೀಜಿಯ ಹಟಮಾರಿತನ,



ರಾಜ್ ಮೋಹನ್ ಗಾಂಧಿ

ಉಪವಾಸಗಳು, ಬೋಧನೆ ಇವುಗಳಿಂದಾಗಿ ಅಂದಿನ ಹೋರಾಟದಲ್ಲಿದ್ದ ಜನರು, ನಾಯಕರು ಅನಾಗರೀಕವಾಗಿ ವರ್ತಿಸಿದ ಉದಾಹರಣೆಗಳು ಬಹಳ ಕಡಿಮೆ. ಹಿಂಸೆಯನ್ನು ಸಾಧನವಾಗಿ ಬಳಸಬಹುದೆಂದು ನಂಬಿದ ಕ್ರಾಂತಿಕಾರಿಗಳು ಕೂಡ ಆ ಕಾಲದ ಶ್ರೇಷ್ಠ ವ್ಯಕ್ತಿಗಳಾಗಿದ್ದರು.

ನಾನು ಇಲ್ಲಿ ಹಳೆಯ ಕಾಲವನ್ನು ರೋಮ್ಯಾಂಟಿಕ್ ಆಗಿ ನೋಡುತ್ತಿದ್ದೇನೆಂದಲ್ಲ. ಅಂದಿನ ಆತ್ಮಕತೆಗಳು, ಪತ್ರಗಳು, ನಿರ್ಣಯಗಳು, ದಾಖಲೆಗಳು, ವರದಿಗಳು ಇವುಗಳನ್ನು ನೋಡಿದ ಮೇಲೆ ಬಹುಮಟ್ಟಿಗೆ ಮುಂಚೂಣಿ ವರ್ಗವು ಭಾಷೆ ಹಾಗೂ ನಡವಳಿಕೆಯಲ್ಲಿ ನಾಗರೀಕತೆಯ ಎಲ್ಲೆಗಳನ್ನು ಮೀರಲಿಲ್ಲವೆಂದೆನಿಸುತ್ತದೆ. ವಿಶೇಷವೆಂದರೆ ಇದೇ ಕಾಲದಲ್ಲಿ ನಡೆದ ಕೋಮುವಾದಿ ಕಲಹಗಳು ಮತ್ತು ಜಾತಿ ಕೇಂದ್ರಿತ ಜಗಳಗಳು ಮಾತ್ರ ಅವಾಚ್ಯವಾದ ಭಾಷೆಯನ್ನು ಧಾರಾಳವಾಗಿ ಬಳಸಿದವು. ಉದಾಹರಣೆಗೆ ಪುಣೆ ಹಾಗೂ ಮಹಾರಾಷ್ಟ್ರದ ನಗರಗಳಲ್ಲಿ ಬ್ರಾಹ್ಮಣರು ಹಾಗೂ ದಲಿತರ ನಡುವಿನ ಕಲಹಗಳಲ್ಲಿ, ಮೆರವಣಿಗೆಯ ಘೋಷಣೆಗಳಲ್ಲಿ ಹಾಗೂ ಕರಪತ್ರಗಳಲ್ಲಿ ಇದನ್ನು ಕಾಣಬಹುದು. ಅದೇ ರೀತಿ ಕರ್ನಾಟಕದಲ್ಲಿ ಬ್ರಾಹ್ಮಣರು ಹಾಗೂ ಲಿಂಗಾಯಿತರ ನಡುವಿನ ಸಾರ್ವಜನಿಕ ವಿವಾದಗಳಲ್ಲಿ. ಇವುಗಳಲ್ಲಿ ಬ್ರಾಹ್ಮಣರೇ ಅವಾಚ್ಯ ನಿಂದನೆಗಳಲ್ಲಿ ಪ್ರಥಮ ಬಹುಮಾನ ಪಡೆದದ್ದು ಆಶ್ಚರ್ಯಕರವಲ್ಲವೆ?

ಇರಲಿ, ನಾನು ವಿವರಿಸುತ್ತಿದುದು ರಾಜಕೀಯದ ಭಾಷೆ ಹಾಗೂ ನಡವಳಿಕೆಗಳ ಬಗ್ಗೆ. ಗಾಂಧಿ, ಪಟೇಲ್, ನೆಹರು. ಲೋಹಿಯ ಇವರುಗಳು ಆಡಿದ ಮಾತುಗಳಂತೂ ವಿಶ್ವದ ಶ್ರೇಷ್ಠ ರಾಜಕೀಯ ಚರ್ಚೆಗಳಾಗಿವೆ. ಇದಕ್ಕೆ ಹೋಲಿಸಿದರೆ ಸದ್ಯದ ರಾಜಕೀಯ ವರ್ಗವು ಅಶಿಕ್ಷಿತ, ಕೊಳಕು ಭಾಷೆ ಹಾಗೂ ಮನಸುಗಳ ಅತ್ಯಂತ ಅನಾಗರೀಕ ವರ್ಗವಾಗಿದೆ. ನಮ್ಮ ಸಮಾಜದ ಎಲ್ಲಾ ಕೊಚ್ಚೆಗುಂಡಿಗಳು, ಗಟಾರುಗಳೇ ಇಂದಿನ ಎಂ.ಎಲ್.ಎ., ಎಂ.ಪಿಗಳಾಗಿ ನಿಂತಿವೆ ಎನ್ನಿಸುತ್ತದೆ. ಹೊಲಸು ಭಾಷೆ, ವಿಕೃತ ವಿಚಾರಗಳನ್ನು ಎಗ್ಗಿಲ್ಲದೇ

ಮೊನ್ನೆ ಗಾಂಧಿ ಹುತಾತ್ಮರಾದ ದಿನದಂದು ಅಸಹ್ಯವಾದ ಒಂದು ದೃಶ್ಯಾವಳಿಯು ಹರಿದಾಡಿತು. ಬಲಪಂಥೀಯ ಸಂಘಟನೆಯ ಕೆಲವರು ಗಾಂಧಿ ಪ್ರತಿಮೆಗೆ ತಮ್ಮ ಸಂಘಟನೆಯ ನಾಯಕಿಯೊಬ್ಬಳಿಂದ ಗುಂಡು ಹಾಕಿಸಿ ಕೊಲೆಮಾಡಿಸಿದರು. ಪತ್ರಕಾರರು ಅವರನ್ನು ಕೇಳಿದರು. "ಈ ದೃಶ್ಯಾವಳಿಯ ಬಗ್ಗೆ ಗಾಂಧಿ ಕುಟುಂಬದವರಾದ ನಿಮ್ಮ ಪ್ರತಿಕ್ರಿಯೆಯೇನು?". ರಾಜ್ ಮೋಹನ್ ಗಾಂಧಿ ಹೇಳಿದರು. "ಗಾಂಧಿಯವರಿಗಾಗಿ ಗಾಂಧಿ ಕುಟುಂಬದವರು ಏನನ್ನೂ ಹೇಳಬೇಕಾಗಿಲ್ಲ, ಇಡೀ ದೇಶವೇ ಹೇಳುತ್ತದೆ. ಆದರೆ ಆಶ್ಚರ್ಯಕರವಾದ ವಿಷಯವೆಂದರೆ ಇದರ ಬಗ್ಗೆ ದೇಶದ ಅತ್ಯುನ್ನತ ಪದವಿ ಹೊಂದಿದ ನಾಯಕರು ಏನೂ ಹೇಳದಿದ್ದದ್ದು."

ಬಳಸುವ ಇವರುಗಳು ಭಾರತೀಯ ನಾಗರೀಕತೆಯ ಅತ್ಯಂತ ಕೊಳಕು ರೋಗಗಳಾಗಿದ್ದಾರೆ. ಕೆಲವರು ಇದರಲ್ಲಿ ವಿಶೇಷ ಪರಿಣಿತಿಯನ್ನು ಪಡೆದಿದ್ದಾರೆ. ಹಿಂದು ಹೆಂಗಸರನ್ನು ಮುಟ್ಟಿದ ಮುಸ್ಲಿಮ್ ಕೈಗಳು ಇರಬಾರದು ಎನ್ನುವ ವ್ಯಕ್ತಿಯ ಬಾಯಿ ಹಾಗೂ ಬುದ್ಧಿಯಲ್ಲಿ ಸಾವಿರಾರು ವರ್ಷಗಳ ಮಾಲಿನ್ಯವೇ ಹರಿದುಬರುತ್ತದೆ.

'ಪ್ರಿಯಾಂಕಾ ಗಾಂಧಿ ಸುಂದರಿ, ಆದರೆ ರಾಜಕೀಯಕ್ಕೆ ನಾಲಾಯಕು' ಅನ್ನುವವರು ಇದ್ದಾರೆ. ಕೊನೇ ಪಕ್ಷ ಇವರು ,'ಸೆಕ್ಸಿಸ್ಟ್' ಆದರೂ ಪ್ರಾಮಾಣಿಕರು. ಇವರುಗಳು ಇರುವ ರಾಜಕೀಯ ರಂಗದಲ್ಲಿ ಸುಂದರವಾದದ್ದು ಯಾವುದೂ ಇರಲಾರದು ಎನ್ನುವ ಜ್ಞಾನೋದಯವು ಇವರಿಗಾಗಿದೆ! ನಮ್ಮ ಈ ರಾಜಕೀಯ ವರ್ಗವು ಪುರುಷ ಪ್ರಾಧಾನ್ಯವನ್ನು ಸಂಪೂರ್ಣ ಒಪ್ಪಿಕೊಂಡಿದೆ. ಹೀಗಾಗಿ ಅವರ ಪ್ರತಿಕ್ರಿಯೆಗಳಲ್ಲಿ ಹಾಸುಹೊಕ್ಕಾಗಿ ಮಹಿಳೆಯರ ಬಗೆಗಿನ ಕೀಳು ಅಭಿಪ್ರಾಯಗಳು ಹರಿದಾಡುತ್ತವೆ. ತೀರ ಇತ್ತೀಚಿನದೆಂದರೆ ಹೊಸದಾಗಿ ರಾಜಕೀಯ ಪ್ರವೇಶ ಮಾಡುತ್ತಿರುವ ಒಬ್ಬ ಮಹಿಳೆ



"ಮಂಡ್ಯದ ಗೌಡ್ತಿ"ಯೇ ಅಥವಾ ಆಂಧ್ರದ ಗೌಡ್ತಿಯೇ ಎನ್ನುವ ನಮ್ಮ ಕಾಲದ ಅತ್ಯಂತ ವೈಚಾರಿಕವಾದ ಸಂವಾದ! ಒಂದು ಮಾತು ಮಾತ್ರ ನಿಜ. ನಮ್ಮ ಈ ರಾಜಕೀಯ ವರ್ಗವನ್ನು ಅಶ್ಲೀಲತೆ ಹಾಗೂ ಸ್ತ್ರೀ ದ್ವೇಷದಲ್ಲಿ ಮೀರಿಸುವ ಇನ್ನೊಂದೇ ವರ್ಗವೆಂದರೆ ಸಾಮಾಜಿಕ ತಾಣಗಳಲ್ಲಿ ಸತತವಾಗಿ ವಿಷಕಾರಿಕೊಳ್ಳುವವರ ವರ್ಗ. ಹದಿಹರೆಯದ ವಿದ್ಯಾರ್ಥಿನಿಯೊಬ್ಬಳು "ಇನ್ನೊಂದು ದೇಶದೊಂದಿಗೆ ಯುದ್ಧಬೇಡ; ರಾಷ್ಟ್ರಗಳು ಮನುಷ್ಯರನ್ನು ಕೊಲ್ಲುತ್ತವೆ; ಧರ್ಮಗಳು ಮನುಷ್ಯರನ್ನು ಕೊಲ್ಲುವುದಿಲ್ಲವೆಂದು" ಟಿ.ವಿ. ಎದುರಿಗೆ ಹೇಳಿಕೆ ನೀಡಿದಳು. ಸ್ವತಃ ಅವಳ ತಂದೆ ಯೋಧರಾಗಿದ್ದರು. ನೆರೆ ದೇಶದವರೊಂದಿಗೆ ನಡೆದ ಯುದ್ಧದಲ್ಲಿ ಹುತಾತ್ಮರಾಗಿದ್ದರು. ಈ ವಿದ್ಯಾರ್ಥಿನಿ ಕೂಡ ವೈರಿಗಳನ್ನು ದ್ವೇಷಿಸಿದವಳು. ಆದರೆ ತಾಯಿಯಿಂದ ಪಾಠ ಕಲಿತು ಯುದ್ಧಗಳ ನಿರರ್ಥಕತೆಯನ್ನು ಅರ್ಥಮಾಡಿಕೊಂಡಿದ್ದಳು. ಅವಳ ಹೇಳಿಕೆಯು ವೈರಲ್ ಆದ ಕೆಲವೇ ಕ್ಷಣಗಳಲ್ಲಿ ಸಾಮಾಜಿಕ ತಾಣಗಳಲ್ಲಿ ಅವಳನ್ನು ಅನೇಕರು ಸೂಳೆಯೆಂದು ಕರೆದರು.

ಮೊನ್ನೆ ಗಾಂಧಿ ಹುತಾತ್ಮರಾದ ದಿನದಂದು ಅಸಹ್ಯವಾದ ಒಂದು ದೃಶ್ಯಾವಳಿಯು ಹರಿದಾಡಿತು. ಬಲಪಂಥೀಯ ಸಂಘಟನೆಯ ಕೆಲವರು ಗಾಂಧಿ ಪ್ರತಿಮೆಗೆ ತಮ್ಮ ಸಂಘಟನೆಯ ನಾಯಕಿಯೊಬ್ಬಳಿಂದ ಗುಂಡು ಹಾಕಿಸಿ ಕೊಲೆಮಾಡಿಸಿದರು. ಅಲ್ಲದೆ ಮಹಾತ್ಮಾ ಗೋಡ್ಸೆ ಕೀ ಜೈ ಎಂದು ಘೋಷಿಸಿದರು. ಮರುದಿನ 31 ರಂದು ನಾವು ಗಾಂಧಿಯವರ ಮೊಮ್ಮಗ ಹಾಗೂ ಪ್ರಸಿದ್ಧ ಬರಹಗಾರರಾದ ರಾಜ್ ಮೋಹನ್ ಗಾಂಧಿಯವರೊಂದಿಗೆ 'ದಕ್ಷಿಣಾಯಣ'ದ ಪರವಾಗಿ ಒಂದು ಪತ್ರಿಕಾಗೋಷ್ಠಿಯಲ್ಲಿ ಧಾರವಾಡದಲ್ಲಿ ಭಾಗವಹಿಸಿದೆವು. ಪತ್ರಕಾರರು ಅವರನ್ನು ಕೇಳಿದರು. "ಈ ದೃಶ್ಯಾವಳಿಯ ಬಗ್ಗೆ ಗಾಂಧಿ ಕುಟುಂಬದವರಾದ ನಿಮ್ಮ ಪ್ರತಿಕ್ರಿಯೆಯೇನು?". ರಾಜ್ ಮೋಹನ್ ಗಾಂಧಿ ಹೇಳಿದರು. "ಗಾಂಧಿಯವರಿಗಾಗಿ ಗಾಂಧಿ ಕುಟುಂಬದವರು ಏನನ್ನೂ ಹೇಳಬೇಕಾಗಿಲ್ಲ, ಇಡೀ ದೇಶವೇ ಹೇಳುತ್ತದೆ. ಆದರೆ ಆಶ್ಚರ್ಯಕರವಾದ ವಿಷಯವೆಂದರೆ ಇದರ ಬಗ್ಗೆ ದೇಶದ ಅತ್ಯುನ್ನತ ಪದವಿಹೊಂದಿದ ನಾಯಕರು ಏನೂ ಹೇಳದಿದ್ದದ್ದು." ರಾಜ್ ಮೋಹನ್ ಅತ್ಯಂತ ಮಾರ್ಮಿಕವಾಗಿ ಕರಾಳ ಸತ್ಯವನ್ನು ನುಡಿದಿದ್ದರು. ನಮ್ಮ ರಾಜಕೀಯ ವರ್ಗವೇ ಅತ್ಯಂತ ಕೊಳಕು ಹಾಗೂ ಅನಾರೋಗ್ಯಕರ ಸ್ಥಿತಿಯಲ್ಲಿದ್ದಾಗ ನಾಯಕರು ನುಡಿಸುತ್ತಾರೆ; ಮಾಡಿಸುತ್ತಾರೆ. ಹಿಂಬಾಲಕರು ನುಡಿಯುತ್ತಾರೆ ಹಾಗೂ ಮಾಡುತ್ತಾರೆ. ಏಕೆಂದರೆ ಅವರ ಮಧ್ಯ ಯಾವ ವ್ಯತ್ಯಾಸವೂ ಇಲ್ಲ. ಇದಕ್ಕೇ ಸಮಾನತೆಯೆನ್ನುತ್ತಾರಲ್ಲವೇ? ●



ಸಾಕಷ್ಟು ಸಮಯದ ವರೆಗೆ ಶಾರದಾ –ರೋಸ್‌ವ್ಯಾಲಿ ಹಗರಣಗಳ ತನಿಖೆಯನ್ನು ಬದಿಗಿಟ್ಟಿದ್ದ ಸಿಬಿಐ ಇದೀಗ ಇದ್ದಕ್ಕಿಂದ್ದಂತೆ ಕೊಲ್ಕತಾ ಪೋಲೀಸ್ ಕಮಿಷನರ್ ರಾಜೀವ್ ಕುಮಾರ್ ಮನೆಗೆ "ಭೇಟಿ" ನೀಡಲು ನಿರ್ಧರಿಸಿರುವುದು ಬಿಜೆಪಿಯ ರಾಜಕೀಯ ಹಿತದ ಅನುಕೂಲದ ದೃಷ್ಟಿಯಿಂದ ಲೋಕಸಭೆ ಚುನಾವಣೆ ಸಮೀಪಿಸುತ್ತಿರುವಾಗ ಮಮತಾ ಬ್ಯಾನರ್ಜಿಯವರನ್ನು ಇಕ್ಕಟ್ಟಿಗೆ ಸಿಲುಕಿಸಲಿಕ್ಕಾಗಿ.. ಅತ್ತ, ಮಮತಾ ಬ್ಯಾನರ್ಜಿಯ ನಟನೆಯ ಹಿಂದಿರುವುದು ಇಡೀ ಹಗರಣವನ್ನು ಮುಚ್ಚಿಹಾಕುವ ಪ್ರಯತ್ನದಲ್ಲಿ ತೊಡಗಿರುವ ಎಲ್ಲರನ್ನೂ ರಕ್ಷಿಸುವ ಆಶಯ.

ಬಿಜೆಪಿ–ಟಿಎಂಸಿ ಹುಸಿ ಸಮರ

ರಾಜಕೀಯ ಲಾಭದ ಲೆಕ್ಕಾಚಾರವೂ, ವಂಚಕರನ್ನು ರಕ್ಷಿಸುವ ಹುನ್ನಾರವೂ

ಈ ಹುಸಿ ಸಮರದಿಂದ ದೂರ ನಿಲ್ಲುವುದಲ್ಲದೆ, ಇಲ್ಲಿನ ನಿಜವಾದ ಪ್ರಶ್ನೆಯ ಮೇಲೆ ಗಮನವನ್ನು ಮತ್ತೆ ಕೇಂದ್ರೀಕರಿಸುವಂತೆ ಮಾಡುವುದು ಇಲ್ಲಿ ಮಹತ್ವದ್ದಾಗಿದೆ. ಆ ನಿಜವಾದ ಪ್ರಶ್ನೆಯೆಂದರೆ, ಭ್ರಷ್ಟ ಚಿಟ್‌ಫಂಡ್‌ಗಳು–ರಾಜಕಾರಣಿಗಳು–ಅಧಿಕಾರಶಾಹಿ ನಡುವಿನ ದುಷ್ಟಕೂಟದಲ್ಲಿ ಶಾಮೀಲಾಗಿರುವ ಎಲ್ಲರನ್ನು ಶಿಕ್ಷೆಗೆ ಗುರಿಪಡಿಸುವುದು; ಎಲ್ಲ ಹಗರಣಕೋರರ ಆಸ್ತಿಪಾಸ್ತಿಯನ್ನು ಜಪ್ತಿ ಮಾಡುವುದು ಮತ್ತು ಇಂತಹ ಮೋಸದ ಸ್ಕೀಮುಗಳ ಎಲ್ಲಾ ಸಂತ್ರಸ್ತರಿಗೆ ನಷ್ಟ ಭರ್ತಿಮಾಡುವುದು. ಸುಪ್ರಿಂ ಕೋರ್ಟ್ ಈ ಶಾರದಾ, ರೋಸ್‌ವ್ಯಾಲಿ ಮತ್ತಿತರ ಚಿಟ್‌ಫಂಡ್ ಹಗರಣಗಳ ಸಿಬಿಐ ತನಿಖೆಗಳ ಉಸ್ತುವಾರಿಯನ್ನು ತಾನೇ ನೇರವಾಗಿ ವಹಿಸಿಕೊಳ್ಳುವುದೇ ಒಳ್ಳೆಯದು.

ಪ್ರಕಾಶ್ ಕಾರಟ್





ಪೋಲೀಸ್ ಕಮಿಶನರ್ ರಾಜೀವ್ ಕುಮಾರ್ ನೇತೃತ್ವದ ಎಸ್‌ಐಟಿ ತನಿಖೆಯಲ್ಲಿ ಔದಾಸೀನ್ಯದಿಂದಾಗಿ ಸಿಬಿಐ ತನಿಖೆ

ಸಿಬಿಐ ಮುಂದೆ ಒಂದು ತಟಸ್ಥ ಸ್ಥಳದಲ್ಲಿ ವಿಚಾರಣೆಗಾಗಿ ಹಾಜರಾಗುವಂತೆ ಸುಪ್ರೀಂ ಕೋರ್ಟ್ ಕೊಲ್ಕತಾದ ಪೊಲೀಸ್ ಕಮಿಷನರ್‌ಗೆ ನಿರ್ದೇಶನ ನೀಡಿರುವುದು ಹಾಗೂ ಅದೇ ವೇಳೆ ಈ ಪೊಲೀಸ್ ಅಧಿಕಾರಿಯ ಬಂಧನದಂಥ ಬಲವಂತದ ಕಮ್ರಗಳನ್ನು ಕೈಗೊಳ್ಳಬೇಡಿ ಎಂದು ಸಿಬಿಐಗೆ ನಿರ್ದೇಶಿಸಿರುವುದು ಒಂದೆಡೆ ಮಮತಾ ಬ್ಯಾನರ್ಜಿ ಹಾಗೂ ಟಿಎಂಸಿ ಸರಕಾರ ಮತ್ತು ಇನ್ನೊಂದೆಡೆ ಬಿಜೆಪಿ ಹಾಗೂ ಮೋದಿ ಸರಕಾರದ ರಾಜಕೀಯ ನಟನೆಗಳನ್ನು ಬಯಲು ಮಾಡಿದೆ.

ತಾನು ಹಾಗೂ ತನ್ನ ಸರಕಾರ ಕೇಂದ್ರದ ಬಿಜೆಪಿ ಸರಕಾರದ ಪಿತೂರಿಗಳ ಸಂತ್ರಸ್ತರು ಎಂಬುದಾಗಿ ತೋರಿಸಿಕೊಳ್ಳಲು ಮಮತಾ ಬ್ಯಾನರ್ಜಿ ತಮ್ಮ ನಾಟಕದ ಮೂಲಕ ಪ್ರಯತ್ನಿಸಿದ್ದಾರೆ. ಅತ್ತ, ಬಂಧನಕ್ಕಾಗಿ ಪೊಲೀಸ್ ಆಯುಕ್ತರ ಮನೆಯನ್ನು ಪ್ರವೇಶಿಸಲು ಸಿಬಿಐ ಪ್ರಯತ್ನಿಸಿದ್ದು ಶಾರದಾ ಹಗರಣ ಹಾಗೂ ಇತರ ಮೋಸದ ಸ್ಕೀಮುಗಳ ತನಿಖೆಯ ವಿಚಾರದಲ್ಲಿ ಒಂದು ಪ್ರಮುಖ ಹೆಜ್ಜೆ ಎಂಬುದಾಗಿ ಬಿಜೆಪಿ ದೊಡ್ಡದಾಗಿ ಹೇಳಿಕೊಳ್ಳುತ್ತಿದೆ. ಆದರೆ ಇವೆರಡರಲ್ಲಿ ಯಾವುದೂ ಸತ್ಯವಲ್ಲ.

ಲಕ್ಷಾಂತರ ಜನರು ಕಷ್ಟಪಟ್ಟು ದುಡಿದು ಉಳಿತಾಯ ಮಾಡಿದ್ದ ಕೋಟ್ಯಂತರ ರೂಪಾಯಿಗಳನ್ನು ನುಂಗಿ ನೀರು ಕುಡಿದ ಶಾರದಾ ಮತ್ತು ರೋಸ್‌ವ್ಯಾಲಿ ಹಗರಣಗಳಲ್ಲಿ ಟಿಎಂಸಿ ನಾಯಕತ್ವ ಮತ್ತು ಅಧಿಕಾರಶಾಹಿಗಳು ಹಾಗೂ ನಿವೃತ್ತ ಪೊಲೀಸ್ ಅಧಿಕಾರಿಗಳ ಒಂದು ಕೂಟ ಸಂಪೂರ್ಣವಾಗಿ ಶಾಮೀಲಾಗಿದ್ದಾರೆ. ಉದಾಹರಣೆಗೆ, ಶಾರದಾ ಗುಂಪಿನ ಕಂಪೆನಿಗಳು 17 ಲಕ್ಷ ಠೇವಣಿದಾರರಿಂದ 30,000 ಕೋಟಿ ರೂಪಾಯಿಗಳನ್ನು ಸಂಗ್ರಹಿಸಿವೆ. ಅವುಗಳ ವ್ಯವಹಾರ ಕುಸಿದಾಗ ಲಕ್ಷಾಂತರ ಸಣ್ಣ ಠೇವಣಿದಾರರು ತಮ್ಮ ಉಳಿತಾಯಗಳನ್ನು ಕಳೆದುಕೊಂಡರು. ಈ ಹಗರಣದಲ್ಲಿ ಭಾಗಿಯಾಗಿರುವುದನ್ನು ಮುಚ್ಚಿಹಾಕಲು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮತ್ತು ಆಳುವ ತೃಣಮೂಲ ಕಾಂಗ್ರೆಸ್ ಸತತವಾಗಿ ಪ್ರಯತ್ನಿಸುತ್ತಿವೆ. ಕೊಲ್ಕತಾ ಪೋಲೀಸ್ ಕಮಿಶನರ್ ರಾಜೀವ್ ಕುಮಾರ್ ನೇತೃತ್ವದ ವಿಶೇಷ ತನಿಖಾ ತಂಡ (ಎಸ್‌ಐಟಿ)ದ ತನಿಖೆಯಲ್ಲಿ ಔದಾಸೀನ್ಯ ಮತ್ತು ಈ ಹಗರಣವು ಹಲವು ರಾಜ್ಯಗಳಲ್ಲಿ ಹರಡಿರುವುದರಿಂದ ಈ ಹಗರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸುವಂತೆ ಕೋರಿ ಸಿಪಿಐ (ಎಂ) ಹಾಗೂ ಇತರ ಕೆಲವರು ಸುಪ್ರೀಂಕೋರ್ಟ್ ಮೊರೆ ಹೋಗಿದ್ದರು. ಸರ್ವೋನ್ನತ ನ್ಯಾಯಾಲಯ ಚಿಟ್‌ಫಂಡ್ ಕಂಪೆನಿಗಳಿಗೆ ಸಂಬಂಧಿಸಿದ ಎಲ್ಲಾ ಪ್ರಕರಣಗಳನ್ನು ಸಿಬಿಐ ತನಿಖೆಗೆ ಒಪ್ಪಿಸುವಂತೆ 2014ರ ಮಾರ್ಚ್‌ನಲ್ಲಿ ಆದೇಶಿಸಿತ್ತು.

ಸಿಬಿಐ ತನಿಖೆಯ ಫಲವಾಗಿ ಟಿಎಂಸಿಯ ಇಬ್ಬರು ಸಂಸದರಾದ ಕುಣಾಲ್ ಘೋಷ್ ಮತ್ತು ಶ್ರಿಂಜೊಯ್ ಬೋಸ್, ತೃಣಮೂಲ ಸರಕಾರದ ಮಂತ್ರಿ ಮದನ್ ಮಿತ್ರ, ಮಾಜಿ ಪೊಲೀಸ್ ಮಹಾನಿರ್ದೇಶಕ ರಜತ್ ಮಜುಂದಾರ್ ಬಂಧಿತರಾಗಿದ್ದರು. ಆನಂತರ, ರೋಸ್ ವ್ಯಾಲಿ ಹಗರಣದ ಸಂಬಂಧ ಲೋಕಸಭೆಯಲ್ಲಿ ಟಿಎಂಸಿ ಗುಂಪಿನ ನಾಯಕ ಸುದೀಪ್ ಬಂದೋಪಾಧ್ಯಾಯರನ್ನು ಬಂಧಿಸಲಾಗಿತ್ತು.

ಆದರೆ ಕ್ರಮೇಣ ಬಿಜೆಪಿಯ ರಾಜಕೀಯ ಅಗತ್ಯಗಳಿಗನುಸಾರವಾಗಿ ಸಿಬಿಐ ತನಿಖೆಯ ಗತಿಯನ್ನು ನಿಧಾನಗೊಳಿಸಿತ್ತು ಅಥವಾ ಸ್ಥಗಿತಗೊಳಿಸಿತ್ತು. ಸಿಬಿಐ ತನಿಖೆಯನ್ನು ಕಾಲಕಾಲಕ್ಕೆ ಟಿಎಂಸಿಯನ್ನು ಪಳಗಿಸುವುದಕ್ಕಾಗಿ ಬಳಸಲು ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಕ್ರಮಗಳನ್ನು ಕೈಗೊಳ್ಳುತ್ತಲೇ ಇದೆ. ಈ ಹಗರಣಗಳಲ್ಲಿ ಒಳಗೊಂಡಿರುವ ಕೆಲವರನ್ನು ತನ್ನ ಪಕ್ಷದ ತೆಕ್ಕೆಗೆ ತೆಗೆದುಕೊಳ್ಳಲು ಕೂಡ ಬಿಜೆಪಿ ಪ್ರಯತ್ನಿಸಿದೆ.

ಟಿಎಂಸಿಯ ಮುಕುಲ್ ರಾಯ್ ಮತ್ತು ಕಾಂಗ್ರೆಸ್ ಪಕ್ಷದ ಹಿಮಂತ್ ಬಿಸ್ವ ಶರ್ಮಾ ಹಗರಣದಲ್ಲಿ ಒಳಗೊಂಡಿರುವ ಇಬ್ಬರು ಪ್ರಮುಖರಾಗಿದ್ದಾರೆ. ಟಿಎಂಸಿಯ ಪ್ರಧಾನ ಕಾರ್ಯದರ್ಶಿಯಾಗಿದ್ದ ಮುಕುಲ್ ರಾಯ್‌ರನ್ನು ಶಾರದಾ ಹಗರಣದ ಸಂಬಂಧ ಸಿಬಿಐ ವಿಚಾರಣೆಗೊಳಪಡಿಸಿತ್ತು. ಆದರೆ ಅವರು 2017 ನವೆಂಬರ್‌ನಲ್ಲಿ ಬಿಜೆಪಿ ಸೇರಿದ ಮೇಲೆ ಆತನ ವಿರುದ್ಧದ ಮುಂದಿನ ಕ್ರಮಗಳನ್ನು ಸಿಬಿಐ ಕೈಬಿಟ್ಟಿತು. 2014 ನವೆಂಬರ್‌ನಲ್ಲಿ ಹಿಮಂತ್ ಬಿಸ್ವ ಶರ್ಮಾ ಮನೆ ಮೇಲೆ ಸಿಬಿಐ ದಾಳಿ ನಡೆಸಿ ವಿಚಾರಣೆ ನಡೆಸಿತ್ತು. ಆದರೆ ಆತ 2015 ರ ಆಗಸ್ಟ್‌ನಲ್ಲಿ ಬಿಜೆಪಿ ಸೇರಿದ ನಂತರ ಆತನ ವಿರುದ್ಧ ಸಿಬಿಐ ಯಾವುದೇ ಕ್ರಮಗಳನ್ನು ಕೈಗೊಳ್ಳಲಿಲ್ಲ.

ಸಾಕಷ್ಟು ಸಮಯದ ವರೆಗೆ ಶಾರದಾ ಹಗರಣದ ತನಿಖೆಯನ್ನು ಬದಿಗಿಟ್ಟಿದ್ದ ಸಿಬಿಐ ಇದೀಗ ಇದ್ದಕ್ಕಿಂದ್ದಂತೆ ಕೊಲ್ಕತಾ ಪೊಲೀಸ್ ಕಮಿಷನರ್ ರಾಜೀವ್ ಕುಮಾರ್ ಮನೆಗೆ "ಭೇಟಿ" ನೀಡಲು ನಿರ್ಧರಿಸಿತು. ಸಿಬಿಐ ಹೇಳುವಂತೆ ಒಂದು ವೇಳೆ ರಾಜೀವ್ ಕುಮಾರ್ ಪದೇ ಪದೇ ಸಮನ್ಸ್‌ಗಳಿಗೆ ಪ್ರತಿಕ್ರಿಯಿಸದೇ ಇದ್ದಿದ್ದರೆ ಅದು ಅಂದರೆ ಸಿಬಿಐ ಕಾನೂನಾತ್ಮಕ ನಿರ್ದೇಶನಕ್ಕಾಗಿ ಹೈಕೋರ್ಟ್‌ನ ಮೊರೆ ಹೋಗಬಹುದಿತ್ತು. ಅದರ ಬದಲು ಬಿಜೆಪಿಯ ರಾಜಕೀಯ ಹಿತದ ಅನುಕೂಲದ ದೃಷ್ಟಿಯಿಂದ ಲೋಕಸಭೆ ಚುನಾವಣೆಯು ಜಿದ್ದಾಜಿದ್ದಿ ಆರಂಭವಾಗುತ್ತಿರುವಾಗ ಮಮತಾ ಬ್ಯಾನರ್ಜಿಯುವರನ್ನು ಇಕ್ಕಟ್ಟಿಗೆ ಸಿಲುಕಿಸಲು ಕಮಿಷನರ್ ಮನೆ ಮೇಲೆ ದಾಳಿ ನಡೆಸಲಾಯಿತು. ಇದು ರಾಜಕೀಯ ಪ್ರೇರಿತ ಕ್ರಮವಾಗಿದೆ.


ಅತ್ತ, ಮಮತಾ ಬ್ಯಾನರ್ಜಿ ತಾನು ಬಿಜೆಪಿ–ವಿರೋಧಿ ಹೋರಾಟಗಾರ್ತಿ ಹಾಗೂ ರಾಜ್ಯದ ಹಕ್ಕುಗಳ ರಕ್ಷಕಿ ಎಂಬುದನ್ನು ತೋರ್ಪಡಿಸಿಕೊಳ್ಳಲು ಈ ಪ್ರಕರಣವನ್ನು ಬಳಸಿಕೊಳ್ಳಲು ಮುಂದಾಗಿದ್ದಾರೆ. ಆಕೆಯ ಈ ನಟನೆಯ ಹಿಂದಿರುವುದು ಇಡೀ ಹಗರಣವನ್ನು ಮುಚ್ಚಿಹಾಕುವ ಪ್ರಯತ್ನದಲ್ಲಿ ತೊಡಗಿರುವ ಎಲ್ಲರನ್ನೂ ರಕ್ಷಿಸುವ ಅವರ ಏನೇನೂ ಮರೆಮಾಚಿರದ ಆಶಯ.

ಜನರ ಹಣವನ್ನು ನುಂಗಿ ಹಾಕಿದ ಶಾರದಾ ಮತ್ತಿತರ ಚಿಟ್ ಫಂಡ್‌ಗಳು 2011ರ ವಿಧಾನಸಭೆ ಚುನಾವಣೆಗಳಲ್ಲಿ ಎಡರಂಗ ಸರಕಾರದ ವಿರುದ್ಧ ಪ್ರಚಾರಕ್ಕಾಗಿ ಮತ್ತು ಟಿಎಂಸಿ ಪರ ಪ್ರಚಾರಕ್ಕಾಗಿ ಪತ್ರಿಕೆಗಳು ಹಾಗೂ ವಿದ್ಯುನ್ಮಾನ ಮಾಧ್ಯಮಗಳನ್ನು ಆರಂಭಿಸಲು ಟಿಎಂಸಿಗೆ ಹಣಕಾಸು ಒದಗಿಸುವಲ್ಲಿಯೂ ಮುಖ್ಯ ಪಾತ್ರ ವಹಿಸಿದ್ದವು. ಈ ರೀತಿಯಾಗಿ ಜನರನ್ನು ದೋಚುವವರನ್ನು ರಕ್ಷಿಸುವುದು ಮಾತ್ರವಲ್ಲದೆ ಇಂಥ ಕೀಳುದರ್ಜೆಯ ಲೇವಾದೇವಿಗಾರರಿಂದ ಪೋಷಣೆ ಪಡೆದಿರುವ ತನ್ನ ರಾಜಕೀಯ ವಂಶವಳಿಯನ್ನು ರಕ್ಷಿಸುವುದು ಕೂಡ ಮಮತಾ ಬ್ಯಾನರ್ಜಿಯ ಆಶಯವಾಗಿತ್ತು..

ಬಿಜೆಪಿ ಮತ್ತು ಟಿಎಂಸಿ ನಡುವಿನ ಈ ಹುಸಿ ಸಮರದಿಂದ ದೂರ ನಿಲ್ಲುವುದಲ್ಲದೆ, ಇಲ್ಲಿನ ನಿಜವಾದ ಪ್ರಶ್ನೆಯ ಮೇಲೆ ಗಮನವನ್ನು ಮತ್ತೆ ಕೇಂದ್ರೀಕರಿಸುವಂತೆ ಮಾಡುವುದು ಇಲ್ಲಿ ಮಹತ್ವದ್ದಾಗಿದೆ. ಆ ನಿಜವಾದ ಪ್ರಶ್ನೆಯೆಂದರೆ, ಭ್ರಷ್ಟ ಚಿಟ್‌ಫಂಡ್‌ಗಳು–ರಾಜಕಾರಣಿಗಳು–ಅಧಿಕಾರಶಾಹಿ ನಡುವಿನ ದುಷ್ಟಕೂಟದಲ್ಲಿ ಶಾಮೀಲಾಗಿರುವ ಎಲ್ಲರನ್ನು ಶಿಕ್ಷೆಗೆ ಗುರಿಪಡಿಸುವುದು; ಎಲ್ಲ ಹಗರಣಕೋರರ ಆಸ್ತಿಪಾಸ್ತಿಯನ್ನು ಜಪ್ತಿ ಮಾಡುವುದು ಮತ್ತು ಇಂತಹ ಮೋಸದ ಸ್ಕೀಮುಗಳ ಎಲ್ಲಾ ಸಂತ್ರಸ್ತರಿಗೆ ನಷ್ಟ ಭರ್ತಿಮಾಡುವುದು. ಸುಪ್ರಿಂ ಕೋರ್ಟ್ ಈ ಶಾರದಾ, ರೋಸ್‌ವ್ಯಾಲಿ ಮತ್ತಿತರ ಚಿಟ್‌ಫಂಡ್ ಹಗರಣಗಳ ಸಿಬಿಐ ತನಿಖೆಗಳ ಉಸ್ತುವಾರಿಯನ್ನು ತಾನೇ ನೇರವಾಗಿ ವಹಿಸಿಕೊಳ್ಳುವುದೇ ಒಳ್ಳೆಯದು.

ಅನು: ವಿಶ್ವ

ಪೋಂಝಿ' ಸ್ಕೀಮ್ ಸ್ಫೂರ್ತಿ: ಮೋದಿ 'ನ್ಯೂ ಇಂಡಿಯ', ದೀದಿ'ಪೊರಿಬರ್ತನ್'



ಮೋದಿ–ದೀದಿ ಪ್ರಹಸನ
–ವ್ಯಂಗ್ಯಚಿತ್ರಕಾರರು ಕಂಡಂತೆ

ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಂಸ್ ಆಫ್ ಇಂಡಿಯ



ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ಆಸ್ಫೋಟಕಾರಿ ನಿರುದ್ಯೋಗ



ನಿರುದ್ಯೋಗ ಕಳೆದ ನಾಲ್ಕು ದಶಕಗಳಲ್ಲೇ ಕಂಡಿರದ ಮಟ್ಟಕ್ಕೇ ಏರಿದೆ ಎಂದು ಸರಕಾರ ಪ್ರಕಟಿಸ ಬಯಸದ ಅಧಿಕೃತ ಅಂಕಿ-ಅಂಶವೇ ಹೇಳುತ್ತಿದೆ ಎಂದು ಇತ್ತೀಚೆಗೆ ಬಯಲಾಗಿದೆ. ಉದ್ಯೋಗಗಳಲ್ಲಿ ಭಾರೀ ಕಡಿತವಾಗಿರುವುದು, ಕಾರ್ಮಿಕ ಭಾಗವಹಿಸುವಿಕೆಯ ಅನುಪಾತ ಇಳಿಯುತ್ತಿರುವುದು, ಮತ್ತು ಈಗ ಮೀಸಲಾತಿ ಪಡೆಯುವುದಕ್ಕೆ ವರಮಾನ ಮಿತಿಯನ್ನು ಮಾಸಿಕ ರೂ. 66,000ಕ್ಕೆ ಏರಿಸಿರುವುದು ಉದ್ಯೋಗ ನೀಡಿಕೆಯ ಪ್ರಶ್ನೆಯಲ್ಲಿ ಈ ಸರಕಾರದ ಶೋಚನೀಯ ಪ್ರದರ್ಶನದ ದ್ಯೋತಕ. ಇದೀಗ 10% ಮೀಸಲಾತಿ ಯುವ ಜನತೆ ಈ ಸರ್ಕಾರದಿಂದ ಇದುವರೆಗೆ ಕಂಡಿರುವ ಅತಿ ದೊಡ್ಡ ಬೊಗಳೆ. ಈ ಕ್ರೂರ ವಂಚನೆ ಮರಳಿ ಬಂದು ಈ ಬೊಗಳೆಕೋರರನ್ನು ಕಾಡುತ್ತದೆ ಎಂಬುದರಲ್ಲಿ ಸಂದೇಹವಿಲ್ಲ.

ನಿಲೋತ್ಪಲ ಬಸು — **ಅನು: ಎಂ.ಜಿ. ವೆಂಕಟೇಶ್**

ಬಿಜೆಪಿಯ ಇತ್ತೀಚಿನ ಅಸೆಂಬ್ಲಿ ಚುನಾವಣಾ ಹಿನ್ನಡೆಯಲ್ಲಿ ಕೃಷಿ ಬಿಕ್ಕಟ್ಟು, ಮತ್ತು ಅದರ ಅತ್ಯಂತ ಅಮಾನವೀಯ ಅಭಿವ್ಯಕ್ತಿಯಾದ ಹೆಚ್ಚುತ್ತಿರುವ ರೈತರ ಆತ್ಮಹತ್ಯೆ ಚುನಾವಣಾ ರಂಗದ ಕದನದಲ್ಲಿ ಬಾರಿ ಪರಿಣಾಮ ಬೀರಿದೆಯೆಂಬುದನ್ನು ಗುರುತಿಸಲಾಗಿದೆ. ಆದರೆ ಅದಕ್ಕಿಂತ ಹೆಚ್ಚಾಗಿ ವಾಖ್ಯಾನಕಾರರು. ಆಸ್ಫೋಟಕಾರಿ ನಿರುದ್ಯೋಗ ಮೋದಿ ಸರ್ಕಾರ ಮಣ್ಣು ಮುಕ್ಕುವಂತೆ ಮಾಡುತ್ತದೆ, ಬಹುಶಃ ಮುಂಬರುವ ಸಾರ್ವತ್ರಿಕ ಚುನಾವಣೆಗಳಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಇದು ವ್ಯಕ್ತಗೊಳ್ಳುವ ಸಾಧ್ಯತೆಯಿದೆ ಎಂದು ನಂಬಲಾಗುತ್ತಿದೆ.

ಬಿಜೆಪಿಯ ಭವಿಷ್ಯ ಮಸುಕಾಗಿರುವ ಬಗ್ಗೆ ಗಟ್ಟಿಯಾದ ಸಾಕ್ಷಗಳು ಕಾಣುತ್ತಿವೆ. ಕಾರ್ಮಿಕ ಬ್ಯೂರೊ ಅಂಕಿ ಅಂಶವನ್ನು ಪಾರ್ಲಿಮೆಂಟ್‌ನ ಚಳಿಗಾಲದ ಅವಧಿಯಲ್ಲಿ ಕಾರ್ಮಿಕ ಮತ್ತು ಉದ್ಯೋಗ ಮಂತ್ರಿ ಅನುಮೋದಿಸಿದ್ದರೂ ಮಂಡಿಸಿರಲಿಲ್ಲ. ವರದಿಯ ಪ್ರಕಾರ ಭಾರತ ಪ್ರಪಂಚದಲ್ಲೇ ಅತ್ಯಂತ ಹೆಚ್ಚಿನ ನಿರುದ್ಯೋಗಿಗಳ ರಾಷ್ಟ್ರವಾಗಲಿದೆ. ಕಳೆದ ಎರಡು ವರ್ಷಗಳಿಂದ ಸರ್ಕಾರ ಉದ್ಯೋಗ-ನಿರುದ್ಯೋಗದ ಅಂಕಿ ಅಂಶಗಳನ್ನು ಬಯಲು ಮಾಡಲು ಹಿಂಜರಿಯುತ್ತಿದೆ. ಆದರೂ ಬೇರೆ ಅಧಿಕೃತ ಮೂಲಗಳಿಂದ ಈ ವಿಷಯವನ್ನು ಸಾರ್ವಜನಿಕ ವಿಶ್ಲೇಷಣೆಯಿಂದ ತಡೆಯಲು ಸಾಧ್ಯವಾಗುವುದಿಲ್ಲ. ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಇಕಾನಮಿ(ಸಿಎಂಐಇ) ಹೊರಡಿಸಿರುವ ಅಂಕಿ ಅಂಶದಂತೆ 2018 ರಲ್ಲೇ 11 ಲಕ್ಷ ಉದ್ಯೋಗ ನಷ್ಟವಾಗಿರುತ್ತದೆ. ಅಶೋಕ ವಿಶ್ವವಿದ್ಯಾನಿಲಯದ ಆರ್ಥಿಕ ತಜ್ಞರ ಅಧ್ಯಯನದ ಪ್ರಕಾರ ಈಗಿನ ನಿರುದ್ಯೋಗ ಕಳೆದ ಎರಡು ದಶಕಗಳಲ್ಲೇತ್ಯಂತ ಕೆಟ್ಟದಾಗಿದೆ.

ಉದ್ಯೋಗದ ಭರವಸೆ: ಅತ್ಯಂತ ಕ್ರೂರ ಮೋಸ

ಅಮಿತ್ ಶಾ ಕಪಮುಹಣವನ್ನು ದೇಶಕ್ಕೆ ವಾಪಾಸು ತರುವ ಆಶ್ವಾಸನೆ ಚುನಾವಣಾ ಗಿಮಿಕ್ ಎಂದು ಟೆಲಿವಿಶನ್ ಕಾರ್ಯಕ್ರಮದಲ್ಲಿ ಸಾರ್ವಜನಿಕವಾಗಿ ಒಪ್ಪಿಕೊಂಡ ಮೇಲೆ ಸರ್ಕಾರದ ಪ್ರತಿಯೊಂದು ಭರವಸೆ, ಆಶ್ವಾಸನೆಗಳನ್ನು ಗುಮಾನಿಯಿಂದ ನೋಡಬೇಕಿದೆ. ಚುನಾವಣಾ ಭರವಸೆಗಳನ್ನು ಕಾರ್ಯಗತ ಗೊಳಿಸದಿರುವುದು ನರೇಂದ್ರ ಮೋದಿಯವರ ಹೆಗ್ಗಳಿಕೆ. ಅಧಿಕೃಯ ಅಂಕಿ ಅಂಶಗಳ ವಿಶ್ವಾಸಾರ್ಹತೆ ಈ ಹಿಂದೆ ಸರ್ಕಾರಗಳಲ್ಲಿ ಒಂದು ಬಲವಾದ ಅಂಶವಗಿತ್ತು. ಆದರೆ ಪ್ರಸಕ್ತ ಆಡಳಿತದಲ್ಲಿ ಅದೇ ಬಲಿಯಾಗಿದೆ. ಜಿಡಿಪಿ ಅಥವಾ ಯಾವುದೇ ಆರ್ಥಿಕ ಮಾನದಂಡಗಳನ್ನು ತಿರುಚಲಾಗುತ್ತಿದೆ. ಇದು ಯಾವ ಮಟ್ಟ ಮುಟ್ಟಿದೆಯೆಂದರೆ ಈ ಅಂಕಿ-ಅಂಶಗಳನ್ನು ಅಂತರಾಷ್ಟ್ರೀಯ ಸಂಸ್ಥೆಗಳು ನಂಬುವುದಿರಲಿ, ರಿಸರ್ವ್ ಬ್ಯಾಂಕಿನ ಗವರ್ನರ್ ರಿಂದ ಹಿಡಿದು ಸ್ವತಃ ಸರ್ಕಾರದ ಆರ್ಥಿಕ ಸಲಹೆಗಾರರೇ ಅವನ್ನು ಪ್ರಶ್ನಿಸುತ್ತಿದ್ದಾರೆ.

ವಾರ್ಷಿಕವಾಗಿ ಎರಡು ಕೋಟಿ ಉದ್ಯೋಗಗಳನ್ನು ಕೊಡುವುದು ದೂರದ ಮಾತಾಯಿತು. ಈಗಿನ ಪರಿಸ್ಥಿತಿ ಇನ್ನೂ ಅಪಾಯಕಾರಿಯಾಗಿದೆ. ಡಿಸೆಂಬರ್ 2017 ರಲ್ಲಿದ್ದ 26.94 ಕೋಟಿ ಉದ್ಯೋಗಿಗಳ ಸಂಖ್ಯೆ ಡಿಸೆಂಬರ್ 2018 ರ ವೇಳೆಗೆ 26.03 ಕೋಟಿಗೆ ಇಳಿದು 90 ಲಕ್ಷ ಉದ್ಯೋಗ ನಷ್ಟವಾಗಿರುತ್ತದೆ. ಉಳಿದಂತೆ 18 ಲಕ್ಷ ನಗರ ಪ್ರದೇಶದ ಉದ್ಯೋಗಗಳು ನಷ್ಟವಾಗಿ ಒಟ್ಟಾರೆ 1.12 ಕೋಟಿ ಉದ್ಯೋಗ ಕಡಿತಗೊಂಡಿದೆ. ದುಡಿಯಲು ಇಚ್ಛಿಸುವ ದುಡಿಮೆಯಲ್ಲಿರುವ ಅಥವಾ ಉದ್ಯೋಗವನ್ನು ಹುಡುಕುತ್ತಿರುವವವರ ಸಂಖ್ಯೆ ಕಾರ್ಮಿಕ ಭಾಗವಹಿಸುವಿಕೆಯ ಅನುಪಾತವೆಂದು ಹೇಳಲಾಗುತ್ತದೆ. ಅಂತಹ ಅನುಪಾತ ಸಿಎಂಐಇ ಪ್ರಕಾರ ಡಿಸೆಂಬರ್ 2016 ರಲ್ಲಿ 45.15 ಇದ್ದರೆ ಡಿಸೆಂಬರ್ 2018 ರಲ್ಲಿ 42.47 ಆಗಿರುತ್ತದೆ.

ಚುನಾವಣೆಗಳನ್ನು ಹೇಗಾದರೂ ಗೆಲ್ಲಬೇಕೆಂಬ ಭರದಲ್ಲಿ 2014 ರಲ್ಲಿ ಮೋದಿ ತಂಡ ಜನರಿಗೆ ಅಂಗೈನಲ್ಲೇ ಆಕಾಶ ತೋರಿಸಿತು. ಬಹುಶಃ ಗುಜರಾತ್‌ನಲ್ಲಿ ಕೊಲೆಗಳ ಆಳ್ವಿಕೆಯನ್ನು ದಕ್ಕಿಸಿಕೊಳ್ಳುವಲ್ಲಿ ದೊರೆತ ಯಶಸ್ಸು ಅವರಲ್ಲಿ ಧೈರ್ಯ ತುಂಬಿತ್ತು. ನಿರುದ್ಯೋಗದ ಸ್ಥಿತಿ ಹದಗೆಡುತ್ತಿದ್ದರೂ, ಘೋಷಣೆಗಳನ್ನು ಕೊಡುವಲ್ಲಿ ನಿಸ್ಸೀಮರಾದ ಪ್ರಧಾನಿಯವರು ಡಿಜಿಟಲ್ ಇಂಡಿಯಾ, ಕೌಶಲ್ಯ ಭಾರತ, ಮುದ್ರಾ ಮುಂತಾದ ಇಂಪೆನಿಸುವ ಘೋಷಣೆಗಳನ್ನು ಸೃಷ್ಟಿಸುತ್ತಿದ್ದರೂ ಬುಡಮಟ್ಟದಲ್ಲಿ ಯಾವ ಪರಿಣಾಮವನ್ನೂ ಬೀರಿಲ್ಲ. ಇದರಿಂದಾಗಿ ಯುವಜನರೇ ಒಟ್ಟು ಜನಸಂಖ್ಯೆಯಲ್ಲಿ ಬಹುಸಂಖ್ಯಾತರಾಗಿರುವ "ಜನಸಂಖ್ಯಾ ಲಾಭಾಂಶ' (ಡೆಮಾಗ್ರಾಫಿಕ್ ಡಿವಿಡೆಂಡ್) ಮುಂಬರುವ ಚುನಾವಣೆಗಳಲ್ಲಿ 'ಜನಸಂಖ್ಯಾ ರಕ್ಕಸರು' ಆಗುವ ಬೆದರಿಕೆ ಉಂಟಾಗಿದೆ.

ಸಂರಚನಾ ಕೊರತೆಯಷ್ಟೇ ಅಲ್ಲ,
ನೋಟುರದ್ಧತಿಯೂ ಮಾಡಿದ ಗಾಯಗಳು:

ಉದ್ಯೋಗರಹಿತ ಬೆಳವಣಿಗೆಯನ್ನು ತರುವ ಆರ್ಥಿಕ ಸಂರಚನಾ ದೌರ್ಬಲ್ಯ ಮತ್ತಷ್ಟು ದುಷ್ಟ ರೀತಿಯಲ್ಲಿ ಮುಂದುವರೆದಿದೆ. ಸರ್ಕಾರ ವಾಸ್ತವ ಸ್ಥಿತಿಯನ್ನು ಅರಿತು ಬಿಕ್ಕಟ್ಟನ್ನು ವಿಶ್ಲೇಷಿಸಬೇಕಿತ್ತು.

ಪುಟ 10 ನೋಡಿ

45 ವರ್ಷಗಳಲ್ಲಿ ಕಾಣದಷ್ಟು ನಿರುದ್ಯೋಗ ಎನ್ನುತ್ತದೆ ಎನ್ ಎಸ್ ಎಸ್ ಒ ಮಾಹಿತಿ ಉದ್ಯೋಗ ಮಾಹಿತಿ ಸಂಗ್ರಹದ ಸರಿಯಾದ ವ್ಯವಸ್ಥೆ ಇಲ್ಲ ಎನ್ನುತ್ತಾರೆ ಪ್ರಧಾನಿಗಳು



ಐದು ವರ್ಷಗಳ ಹಿಂದೆ ವರ್ಷಕ್ಕೆ 2 ಕೋಟಿ ಉದ್ಯೋಗಗಳನ್ನು ಸೃಷ್ಟಿಸುವ ಆಶ್ವಾಸನೆ ನೀಡಿದ್ದ ಮೋದಿಯವರು ನಾಲ್ಕು ವರ್ಷಗಳು ಕಳೆದರೂ ಅದನ್ನು ಈಡೇರಿಸಿಲ್ಲ ಎಂದು ಯುವಜನರ ನಡುವೆ ವ್ಯಾಪಕ ಆಕ್ರೋಶ ವ್ಯಕ್ತವಾಗುತ್ತಿರುವುದನ್ನು ಕಂಡಾಗ **ದೇಶದಲ್ಲಿ ಉದ್ಯೋಗಗಳ ಬರವಿಲ್ಲ, ಉದ್ಯೋಗಗಳ ಮಾಹಿತಿಯ ಕೊರತೆಯಿದೆಯಷ್ಟೆ ಎಂದು ಕಳೆದ ವರ್ಷ ಹೇಳಿದ್ದರು.** ಪಕೋಡಾ ಮಾರುವುದೂ ಒಂದು ಉದ್ಯೋಗವಲ್ಲವೇ ಎಂದು 'ಮುಗ್ಧ'ವಾಗಿ ಪ್ರಶ್ನಿಸಿದ್ದರು.

* ಇತ್ತೀಚೆಗೆ ಮಾಹಿತಿ ಸಂಗ್ರಹಣೆಯ ರಾಷ್ಟ್ರೀಯ ಸಂಸ್ಥೆಯಾದ 'ರಾಷ್ಟ್ರೀಯ ಸಾಂಖ್ಯಿಕ ಆಯೋಗ'(ಎನ್‌ಎಸ್‌ಸಿ)ಯ ಇಬ್ಬರು ಪ್ರಮುಖರು ಸರಕಾರ ಈ ಸಂಸ್ಥೆಯ ಅವಗಣನೆ ಮಾಡುತ್ತಿದೆ ಎಂದು ಹೇಳಿ ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ರಾಷ್ಟ್ರೀಯ ಸ್ಯಾಂಪಲ್ ಸರ್ವೆ ಸಂಘಟನೆ(ಎನ್‌ಎಸ್‌ಎಸ್‌ಒ) ಕಲೆ ಹಾಕಿದ, ಆದರೆ ಸರಕಾರ ಪ್ರಕಟಿಸಲು ಬಿಡದ ಮಾಹಿತಿಯನ್ನು ಪ್ರಮುಖ ಬಿಸಿನೆಸ್ ಪತ್ರಿಕೆಯೊಂದು ಪ್ರಕಟಿಸಿತು. ಅದರ ಪ್ರಕಾರ **ನೋಟು ರದ್ಧತಿಯ ನಂತರ ದೇಶದಲ್ಲಿ ನಿರುದ್ಯೋಗ ದರ ಜುಲೈ 2017 ರಿಂದ ಜೂನ್ 2018ರ ನಡುವೆ 6.1%ಕ್ಕೆ ನೆಗೆದಿದೆ. ಇದು ಕಳೆದ 45 ವರ್ಷಗಳಲ್ಲೇ ದಾಖಲೆ ಏರಿಕೆ.**
* ಎನ್‌ಎಸ್‌ಎಸ್‌ಒದ 'ನಿಗದಿತ ಅವಧಿ ಶ್ರಮಶಕ್ತಿ ಸರ್ವೆ'(ಎಲ್‌ಎಫ್‌ಪಿಎಸ್) ಆಧಾರದಲ್ಲಿ **'ಪ್ರಸಕ್ತ ವಾರದ ಉದ್ಯೋಗ ಸ್ಥಾನಮಾನ'**(ಸಿಡಬ್ಲ್ಯುಎಸ್) **ವಿಧಾನದ ಪ್ರಕಾರ ನಿರುದ್ಯೋಗದ ಪ್ರಮಾಣ 8.9%!**

ಸಹಜವಾಗಿ ಈ ಸುದ್ದಿ ದೇಶಾದ್ಯಂತ ಅಲ್ಲೋಲ-ಕಲ್ಲೋಲ ಎಬ್ಬಿಸಿದೆ. ಈ ಹಿನ್ನೆಲೆಯಲ್ಲಿ ಪ್ರಧಾನಿಗಳು ಮತ್ತೆ ಫೆಬ್ರುವರಿ 8ರಂದು ಲೋಕಸಭೆಯಲ್ಲಿ ಅದೇ 'ಉದ್ಯೋಗ ಕೊರತೆಯಲ್ಲ- ಮಾಹಿತಿ ಕೊರತೆ'ಯ ರಾಗವನ್ನು ಆಲಾಪಿಸಿದ್ದಾರೆ ಎಂದು ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ವರದಿಯಾಗಿದೆ.

ಹಾಗಿದ್ದರೆ, * ರೈಲ್ವೆಯಲ್ಲಿ 1ಲಕ್ಷ ಉದ್ಯೋಗಗಳಿಗೆ 2.5 ಕೋಟಿ ಅರ್ಜಿಗಳು ಏಕೆ? * ಉತ್ತರಪ್ರದೇಶದಲ್ಲಿ 368 ವೇಕೆನ್ಸಿಗಳಿಗೆ 23 ಲಕ್ಷ ಅರ್ಜಿಗಳು ಏಕೆ?* ಹರ್ಯಾಣದ ಒಂದು ಕೋರ್ಟಿನಲ್ಲಿನ 18 ಹುದ್ದೆಗಳಿಗೆ 12 ಸಾವಿರ ಅರ್ಜಿಗಳು ಏಕೆ?

□ **ಉದ್ಯೋಗ ನಿರ್ಮಾಣದ ಬದಲು ಈ ಕೆಳಗಿನಂತೆ ಉದ್ಯೋಗಗಳ ಕಡಿತವಾಗುತ್ತಿದೆ**

* ಈ ಸರಕಾರ ಬಂದಾಗ ಕೇಂದ್ರ ಸರಕಾರದ ವಿವಿಧ ಇಲಾಖೆಗಳಲ್ಲಿ 33.28 ಲಕ್ಷ ಉದ್ಯೋಗಗಳಿದ್ದವು, 2017ರಲ್ಲಿ ಅದು 32.53 ಲಕ್ಷಕ್ಕೆ ಇಳಿದುದರ, ಅಂದರೆ 75,000 ಉದ್ಯೋಗಗಳ ಕಡಿತ.
* 330 ಕೇಂದ್ರೀಯ ಸಆರ್ವಜನಿಕ ವಲಯದ ಘಟಕಗಳಲ್ಲಿ 2014-2017 ರ ನಡುವೆ, ಒಟ್ಟು ಉದ್ಯೋಗ 16.91ಲಕ್ಷ ದಿಂದ 15.24ಲಕ್ಷಕ್ಕೆ ಇಳಿಯಿತು, ಅಂದರೆ 3ವರ್ಷಗಳಲ್ಲಿ 1.67ಲಕ್ಷ ' ಉದ್ಯೋಗಗಳ ಖೋತಾ,
* ಬ್ಯಾಂಕಿಂಗ್ ವಲಯದಲ್ಲೂ ಉದ್ಯೋಗಗಳ ಸಂಖ್ಯೆ 9.47ಲಕ್ಷದಿಂದ 9.12 ಲಕ್ಷಕ್ಕೆ, ಅಂದರೆ 35,000 ಕಡಿಮೆಯಾಯಿತು
* **ಸಂಸತ್ತಿನಲ್ಲಿ ಈ ಸರಕಾರವೇ ಕೊಟ್ಟಿರುವ ಮಾಹಿತಿಗಳ ಪ್ರಕಾರ 60ಲಕ್ಷ ಸರಕಾರೀ ಹುದ್ದೆಗಳು ಭರ್ತಿ ಮಾಡದೆ ಖಾಲಿ ಬಿದ್ದಿವೆ.** ಇದರಲ್ಲಿ ಶಿಕ್ಷಣ ವಲಯದಲ್ಲಿ 10ಲಕ್ಷ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಕರ ಹುದ್ದೆಗಳು, 2ಲಕ್ಷ ಕಾಲೇಜು, ವಿವಿಗಳು, ಇತರ ಉನ್ನತ ಶಿಕ್ಷಣ ಸಂಸ್ಥೆಗಳ ಅಧ್ಯಾಪಕರ ಹುದ್ದೆಗಳು, ಆರೋಗ್ಯ ವಲಯದಲ್ಲಿ 2.2 ಲಕ್ಷ ಡಾಕ್ಟರುಗಳು ಮತ್ತು ಇತರ ಆರೋಗ್ಯ ಸಿಬ್ಬಂದಿ, 5.38ಲಕ್ಷ ರಾಜ್ಯ ಪೋಲೀಸ್ ಸಿಬ್ಬಂದಿ ಹುದ್ದೆಗಳು ಮತ್ತು 5000ಕ್ಕೂ ಹೆಚ್ಚು ನ್ಯಾಯಾಧೀಶರ ಹುದ್ದೆಗಳು ಖಾಲಿ ಬಿದ್ದಿವೆ.

ಇವುಗಳಿಗೆ ನೇಮಕಾತಿ ಏಕಿಲ್ಲ?

□ **ಖಾಯಂ ಹುದ್ದೆಗಳನ್ನು ಕ್ಯಾಷುವಲ್/ಕಾಟ್ರಾಕ್ಟ್/ಹೊರಗುತ್ತಿಗೆಯಾಗಿ ಬದಲಿಸಲಾಗುತ್ತಿದೆ.**

ಈಗ 'ನಿಗದಿತ ಅವಧಿಯ ಉದ್ಯೋಗ'ದ ಮಾತಾಡಲಾಗುತ್ತಿದೆ.

ಎಲ್ಲವೂ 'ಸುಗಮ ವ್ಯಾಪಾರ-ವ್ಯವಹಾರ'ಕ್ಕೆ ಅನುಕೂಲ ಮಾಡಿಕೊಡಲು!

□ **ಇವೆಲ್ಲದರ ಫಲಿತಾಂಶ ಎಂದರೆ, ಯುವಜನರ ನಡುವೆ ಬಹಿರಂಗ ನಿರುದ್ಯೋಗ ಏರುತ್ತಿದೆ.**

□ ಶಿಕ್ಷಿತ ಯುವಜನರಲ್ಲಿ ಸ್ನಾತಕರ ನಡುವೆ 13.8% ಮತ್ತು ಸ್ನಾತಕೋತ್ತರ ಅಥವ ಇನ್ನೂ ಉನ್ನತ ಶಿಕ್ಷಣ ಪಡೆದವರ ನಡುವೆ 12.6% ನಿರುದೋಗ ಇದೆ ಎಂದು 2015ರ ಲೇಬರ್ ಬ್ಯುರೊ ಮಾಹಿತಿಗಳು ತಿಳಿಸುತ್ತವೆ. ಅಂದರೆ ಒಟ್ಟಾರೆ ನಿರುದ್ಯೋಗ(ಆಗಿನ ಅಂದಾಜಿನ ಪ್ರಕಾರ 3.7%)ದ 3ರಿಂದ 4ಪಟ್ಟು ಹೆಚ್ಚು!

□ 15-25ರ ವಯೋಗುಂಪಿನ ಯುವತಿಯರಲ್ಲಿ ನಿರುದ್ಯೋಗ ದರ ಇನ್ನೂ ಹೆಚ್ಚು, ಅದೇ ವಯೋಗುಂಪಿನ ಯುವಕರಿಗಿಂತ 16.3% ಹೆಚ್ಚು.

□ ಬಹುಪ್ರಚಾರಿತ 'ಸ್ಕಿಲ್ ಇಂಡಿಯಾ'(ಕೌಶಲ ಭಾರತ) ಅಡಿಯಲ್ಲಿ ತರಬೇತಿ ಪಡೆದ 41.3 ಲಕ್ಷ ಮಂದಿಯಲ್ಲಿ ಉದ್ಯೋಗ ಪಡೆದವರ ಸಂಖ್ಯೆ ಕೇವಲ 6.15ಲಕ್ಷ, ಅಂದರೆ 15%

□ ಇನ್ನೊಂದು ಬಹುಪ್ರಚಾರಿತ 'ಮುದ್ರಾ' ಸ್ಕೀಮಿನಲ್ಲಿ 10.38 ಕೋಟಿ ಮಂದಿಗೆ 4.6ಲಕ್ಷ ಕೋಟಿ ರೂ.ಗಳ ಸಾಲ ಕೊಡಲಾಗಿದೆ, ಅಂದರೆ ತಲಾ 44,000 ರೂ, ಇದು ಮೋದಿಯವರು ಸಲಹೆ ಮಾಡಿದ ಪಕೋಡಾ ಮಾರಲಷ್ಟೇ ಸಾಕು! ಅಲ್ಲದೆ ಮುಂದಿನ ಎನ್‌ಪಿಎ ಅಂದರೆ 'ಮರುಪವತಿಯಾಗದ ಸಾಲ'ಸಮಸ್ಯೆ ಈ ವಲಯದಿಂದ ಬರಲಿದೆ ಎಂದು ಆರ್‌ಬಿಐ ಈಗಾಗಲೇ ಎಚ್ಚರಿಸಿದೆ. ಈ ಸ್ಕೀಮಿನ ಅಡಿಯಲ್ಲಿ 'ಕೆಟ್ಟ ಸಾಲ'ಗಳ ಮೊತ್ತ 11,000 ಕೋಟಿ ರೂ.ಗೇರಿದೆ ಎಂದು ಅದು ಹೇಳಿದೆ.

ಕೊಲ್ಕತಾದ 'ಜನತೆಯ ಬ್ರಿಗೇಡ್' – 10 ಲಕ್ಷ ಕಂಠಗಳಿಂದ ಹೊಮ್ಮಿದ ಘೋಷಣೆ:

"ಬಿಜೆಪಿ ಒದ್ದೋಡಿಸಿ–ಭಾರತ ಉಳಿಸಿ; ಟಿಎಂಸಿ ಒದ್ದೋಡಿಸಿ–ಬಂಗಾಲ ಉಳಿಸಿ"





ಫೆಬ್ರುವರಿ 3 ರಂದು ಕೊಲ್ಕತಾದ ಬ್ರಿಗೇಡ್ ಪರೇಡ್ ಮೈದಾನ ಪಶ್ಚಿಮ ಬಂಗಾಲದ ಮೂಲೆ–ಮೂಲೆಗಳಿಂದ ಬಂದ ಜನಗಳು, ಅವರು ತಂದ ಕೆಂಬಾವುಟಗಳಿಂದ ಅಕ್ಷರಶಃ ಕೆಂಪು ಸಾಗರವೇ ಆಯಿತು. ಹಿಂದೆಂದೂ, ಅದರಲ್ಲೂ ಎಡರಂಗ ಅಧಿಕಾರ ಕಳಕೊಂಡ ಮೇಲಂತೂ, ಕೊಲ್ಕತಾದ ಈ ಚಾರಿತ್ರಿಕ ಮೈದಾನ ಇಷ್ಟೊಂದು ಬೃಹತ್ ಜನಸ್ತೋಮವನ್ನು ಕಂಡಿಲ್ಲ ಎನ್ನಲಾಗಿದೆ. ಸುಮಾರು ಒಂದು ಮಿಲಿಯ ಅಂದರೆ 10 ಲಕ್ಷ ಜನಗಳು ಇದರಲ್ಲಿ ಭಾಗವಹಿಸಿದರು ಎಂದು ಅಂದಾಜು ಮಾಡಲಾಗಿದೆ. ಅಂದು ಬೆಳಿಗ್ಗೆಯಿಂದಲೇ ಎಡರಂಗದ ಕರೆಯ ಮೇರೆಗೆ 'ಜನತೆಯ ಬ್ರಿಗೇಡ್' ಆಗಿ ಬಿಟ್ಟ ಮೈದಾನ ರವೀಂದ್ರ ಸಂಗೀತ ಮಾತ್ರವಲ್ಲ, ಸಲಿಲ್ ಚೌಧುರಿ, ಕೈಫಿ ಆಜ್ಮಿ ಮತ್ತಿತರ ಪ್ರಗತಿಪರ ಕವಿ–ಕಲಾವಿದರ ಹೋರಾಟದ, ಮಾನವೀಯತೆಯ ಹಾಡುಗಳಿಂದ ತುಂಬಿ ಹೋಗಿತ್ತು.





ಪಶ್ಚಿಮ ಬಂಗಾಲದ ಜನತೆ ಮಾತಾಡಿದ್ದಾರೆ. ಕೇಂದ್ರದ ಮತ್ತು ರಾಜ್ಯದ ಜನ–ವಿರೋಧಿ ಸರಕಾರಗಳೆರಡನ್ನೂ ಸೋಲಿಸಲಾಗುವುದು ಎಂದು ಇಲ್ಲಿ ನೆರೆದಿರುವ ಅಪಾರ ಜನಸಮೂಹ ನಮಗೆ ಹೇಳುತ್ತಿದೆ ಎಂದು ಈ ಬೃಹತ್ ಜನಸಭೆಯನ್ನು ಉದ್ದೇಶಿಸಿ ಮಾತಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು ಉದ್ಗರಿಸಿದರು. **"ಚೌಕೀದಾರ" ಮೋದಿ ಕನಸುಗಳನ್ನು ಕಾಣಿಸುತ್ತಿದ್ದಾರೆ, ಆದರೆ ಅವರ ಮುಂದೆಯೇ ಲೂಟಿ ನಡೆಯುತ್ತಿದೆ. ಇಂತಹ ಚೌಕೀದಾರ ನಮಗೆ ಬೇಕಿಲ್ಲ, ಅವರನ್ನು ತೆಗೆದು ಹಾಕಬೇಕು. ಕೇಂದ್ರ ಸರಕಾರ ಕಳೆದ 5 ವರ್ಷಗಳಿಂದ ದೇಶವನ್ನು ಲೂಟಿ ಹೊಡೆಯುತ್ತಿದೆ, ಈಗ ಚುನಾವಣೆಗಳ ಮೊದಲು ಆಮಿಷಗಳನ್ನು ಹಂಚುತ್ತಿದೆ. ಮೋದಿಯವರನ್ನು ಸೋಲಿಸಬೇಕು ಎಂದು ಹೇಳುತ್ತಿರುವುದು ಅವರನ್ನು ನಾವು ಇಷ್ಟಪಡುವುದಿಲ್ಲ ಎಂಬ ಕಾರಣಕ್ಕೆ ಅಲ್ಲ. ನಮ್ಮ ದೇಶ ಇನ್ನಷ್ಟು ವಿನಾಶವನ್ನು ಕಾಣದಿರಬೇಕಾದರೆ ಜನ–ವಿರೋಧಿ ಧೋರಣೆಗಳನ್ನು ಬದಲಿಸಬೇಕು, ಪರ್ಯಾಯ ಧೋರಣೆಗಳನ್ನು ಅಂಗೀಕರಿಸಬೇಕು, ಅದಕ್ಕಾಗಿ ಈ ಸರಕಾರವನ್ನು ಬದಲಿಸಬೇಕು** ಎಂದು ಯೆಚುರಿ ಅಲ್ಲಿ ಸೇರಿದ ಜನಸ್ತೋಮಕ್ಕೆ ವಿವರಿಸಿದರು.

ಮುಂದುವರೆದು ಅವರು ಈ ಪಕ್ಷ ಮತ್ತು ಪಶ್ಚಿಮ ಬಂಗಾಲದಲ್ಲಿ ಆಳುತ್ತಿರುವ ಟಿಎಂಸಿ ಒಂದೇ ನಾಣ್ಯದ ಎರಡು ಮುಖಗಳು, ದೇಶದಲ್ಲಿ ಬಿಜೆಪಿಯನ್ನು ಸೋಲಿಸಬೇಕಾದರೆ ಪಶ್ಚಿಮ ಬಂಗಾಲದಲ್ಲಿ ಟಿಎಂಸಿಯನ್ನು ಸೋಲಿಸುವುದು ಮಹತ್ವದ್ದಾಗುತ್ತದೆ ಎಂದು ಅವರು ಹೇಳಿದರು.

"ಇದು ರೈತರು, ಕಾರ್ಮಿಕರು, ವಿದ್ಯಾರ್ಥಿಗಳು ಮತ್ತು ಯುವಜನರ ಒಂದು ಅತಿ ದೊಡ್ಡ ಸಭೆ" ಎಂದು ವರ್ಣಿಸಿದ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯ ಮತ್ತು ಲೋಕಸಭಾ ಸದಸ್ಯರೂ ಆದ

ಪುಟ 10 ನೋಡಿ

















“ಬಿಜೆಪಿ ಒದ್ದೋಡಿಸಿ–ಭಾರತ ಉಳಿಸಿ; ಟಿಎಂಸಿ ಒದ್ದೋಡಿಸಿ–ಬಂಗಾಲ ಉಳಿಸಿ”



ಪುಟ 9 ರಿಂದ

ಮಹಮ್ಮದ್ ಸಲೀಮ್ ಅವರು **“ಈ ಕೆಂಪು ಸಾಗರದ ಮುನ್ನಡೆಯನ್ನು ತಡೆಯುವ ಯಾವುದೇ ಪ್ರಯತ್ನ ರಾಜಕೀಯ ರಂಗದಲ್ಲಿ ಸುನಾಮಿಯನ್ನು ಎಬ್ಬಿಸುತ್ತದೆ, ಅದು ಎಲ್ಲ ಜನತಂತ್ರ–ವಿರೋಧಿ ಮತ್ತು ಕೋಮುವಾದಿ ಶಕ್ತಿಗಳನ್ನು, ಪ್ರಧಾನ ಮಂತ್ರಿ ಮತ್ತು ಅವರ ಕೋಮುವಾದಿ ಪಡೆಗಳನ್ನು ಮತ್ತು ಅವರ ಪರೋಕ್ಷ ಮಿತ್ರರಾದ ಮಮತಾ ಬ್ಯಾನರ್ಜಿ ಮತ್ತು ಅವರ ಪಕ್ಷವನ್ನು ಕೊಚ್ಚಿಕೊಂಡು ಹೋಗುತ್ತದೆ”** ಎಂದು ಎಚ್ಚರಿಸಿದರು. ಇದಕ್ಕೆ ಸ್ಪಂದಿಸಿದ ಜನಸಾಗರದಿಂದ “ದೇಶಕ್ಕಾಗಿ ಬಿಜೆಪಿಯನ್ನು ಒದ್ದೋಡಿಸಿ, ಬಂಗಾಲಕ್ಕಾಗಿ ಟಿಎಂಸಿಯನ್ನು ಒದ್ದೋಡಿಸಿ” ಎಂಬ ಘೋಷಣೆ ಮೊಳಗಿತು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಸೂರ್ಯಕಾಂತ್ ಮಿಶ್ರ **ಈ ಲಕ್ಷ–ಲಕ್ಷ ಜನಗಳೇ ನಿಜವಾದ ನೇತಾರರು ಎನ್ನುತ್ತ “ನೀವು ಪ್ರತಿಯೊಬ್ಬರೂ ನಿಮ್ಮ ಕ್ಷೇತ್ರಗಳಲ್ಲಿ ಕನಿಷ್ಟ 50 ಮಂದಿಗೆ ಈ ಪ್ರತಿಜ್ಞೆಯನ್ನು ಒಯ್ಯಬೇಕು”** ಎಂದರು .ಒಮ್ಮೆ ಕೇಂದ್ರದಿಂದ ಬಿಜೆಪಿಯನ್ನು ಒದ್ದೋಡಿಸಿದ ಮೇಲೆ ಬಂಗಾಲದಲ್ಲಿ ಟಿಎಂಸಿ ಸರಕಾರವನ್ನು ಇಳಿಸಲು ಬಹಳ ದಿನಗಳೇನೂ ಬೇಕಾಗದು, ಏಕೆಮದರೆ ಈ ಎರಡೂ ಪಕ್ಷಗಳನ್ನು ಜೀವಂತವಾಗಿಟ್ಟಿರುವುದು ಅವುಗಳ ನಡುವಿನ ಪರೋಕ್ಷ ಒಪ್ಪಂದ ಎಂದು ಅವರು ವರ್ಣಿಸಿದರು. ರೈತರ, ಕಾರ್ಮಿಕರ, ಜನಸಾಮಾನ್ಯರ ಹೋರಾಟಗಳು ಕೇವಲ ಅವರಿಗಾಗಿಯಲ್ಲ, ಇಡೀ ದೇಶಕ್ಕಾಗಿ, ದೇಶದ ಜನಗಳ ಒಳಿತಿಗಾಗಿ ಎಂದು ಅವರು ಹೇಳಿದರು.

ಎಡರಂಗದ ಅಧ್ಯಕ್ಷ ಬಿಮನ್ ಬಸು ಮಾತಾಡುತ್ತಲ್ಲೀ ಮಾದರಿಯಲ್ಲಿ **‘ಮಿನಿ ಬ್ರಿಗೇಡ್ ರ್‍ಯಾಲಿ”ಗಳು ರಾಜ್ಯಾದ್ಯಂತ ನಡೆಯಬೇಕು, ಸಮರವನ್ನು ವೈರಿ ಪಾಳೆಯದೊಳಕ್ಕೆ ಒಯ್ಯಬೇಕು** ಎಂದು ಕರೆ ನೀಡಿದರು.

ಎಡರಂಗ ಸರಕಾರದಲ್ಲಿ ಮಂತ್ರಿಯಾಗಿದ್ದ ಸಿಪಿಐ(ಎಂ) ಮುಖಂಡರಾದ ದೇಬ್ಲೀನಾ ಹೆಂಬ್ರಮ್ ತಮ್ಮ ಮಾತೃಭಾಷೆಯಾದ ಸಂತಾಲಿಯಲ್ಲಿ ನೆರೆದಿದ್ದ ಜನಸ್ತೋಮದಲ್ಲಿ ಸ್ಫೂರ್ತಿ ತುಂಬುವ ಮಾತುಗಳನ್ನಾಡಿದರು. ಆಹಾರ, ಶಿಕ್ಷಣ, ವಸತಿ ಮತ್ತು ಉದ್ಯೋಗಗಳಿಗಾಗಿ ಹೋರಾಡಬೇಕಾಗಿರುವ ಆದಿವಾಸಿ ಜನಗಳ ಶೋಚನೀಯ ಪರಿಸ್ಥಿತಿಯ ಬಗ್ಗೆ ಹೇಳುತ್ತ, ಅವರ ಹೋರಾಟಗಳಿಗೆ ಸ್ಪಂದಿಸುವ ಬದಲು ಪ್ರಖ್ಯಾತ ಬುಡಕಟ್ಟು ನೃತ್ಯಗಳನ್ನು ಪ್ರಸ್ತುತಪಡಿಸುವ ‘ಪ್ರದರ್ಶನದ ವಸ್ತು’ಗಳ ಮಟ್ಟಕ್ಕೆ ಇಳಿಸಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

“ನಾವು ಬುಡಕಟ್ಟು ಜನ ನಿಸರ್ಗದ ಮಡಿಲಲ್ಲಿ ಬದುಕಿದ್ದೇವೆ, ಕುಣಿತ ನಮಗೆ ಸಹಜವಾಗಿ ಬರುತ್ತದೆ. ಅದಕ್ಕೇನೂ ಹೊರಗಿನ ಒತ್ತಾಸೆ ಬೇಕಾಗುವುದಿಲ್ಲ. ನಮಗೆ ಶಿಕ್ಷಣ, ನಮ್ಮ ಭಾಷೆಗೆ ಮಾನ್ಯತೆ, ಪ್ರತಿಷ್ಠೆ ಬೇಕಾಗಿದೆ. ನಮಗೆ ಶಾಲೆಗಳು, ಕಾಲೇಜುಗಳು ಮತ್ತು ವಸತಿ ಬೇಕಾಗಿದೆ. ನಮಗೆ ನಮ್ಮ ಗೌರವವನ್ನು ಒದಗಿಸಿ ಕೊಟ್ಟದ್ದು ಎಡರಂಗ . ಆ ಗೌರವ ಈಗ ಕಾಣೆಯಾಗಿದೆ. ನಮ್ಮನ್ನು ಹಣದಿಂದ ಖರೀದಿಸಲು ಸಾಧ್ಯವಿಲ್ಲ. ಈ ಏಳು ವರ್ಷಗಳ ಕಾಲ ನಮ್ಮನ್ನು ಲೂಟಿ ಮಾಡಿರುವ ಟಿಎಂಸಿ ಈಗ ಅದನ್ನೇ ಮಾಡುತ್ತಿದೆ” ಎಂದು ದೇಬ್ಲೀನಾ ಹೇಳಿದರು.





ಸಿಪಿಐ ಪ್ರಧಾನ ಕಾರ್ಯದರ್ಶಿ ಸುಧಾಕರ ರೆಡ್ಡಿಯವರು **ಮುಂಬರುವ ದಿನಗಳಲ್ಲಿ ದೇಶದಲ್ಲಿ ಎಡಶಕ್ತಿಗಳ ಒಂದು ಏಕೀಕೃತ ಆಂದೋಲನ ಮತ್ತು ಒಂದು ಜನತಾ ಆಂದೋಲನ ರಾಜಕೀಯದ ಆಯಾಮವನ್ನು ಬದಲಿಸಲಿದೆ, ಅದರ ಪ್ರಭಾವ ಮುಂಬರುವ ಲೋಕಸಭಾ ಚುನಾವಣೆಗಳಲ್ಲಿಯೂ ಕಾಣಲಿದೆ** ಎಂದರು.

ಆರ್‌ಎಸ್‌ಪಿಯ ಮುಖಂಡರಾದ ಕ್ಷಿತಿ ಗೋಸ್ವಾಮಿ ಬಂಗಾಲ ಈಗ ಒಂದು ಕರಾಳ ಘಟ್ಟದ ಮೂಲಕ ಹಾದು ಹೋಗುತ್ತಿದೆ, **ಈ ಬೃಹತ್ ರ್‍ಯಾಲಿ ರಾಜ್ಯದಲ್ಲಿ ಮತ್ತು ದೇಶದಲ್ಲಿ ಜನತಂತ್ರ–ವಿರೋಧಿ ಶಕ್ತಿಗಳ ಆಳ್ವಿಕೆಯನ್ನು ಕೊನೆಗೊಳಿಸುಇವ ಹೋರಾಟದಲ್ಲಿ ಕೆಂಬಾವುಟ ಹಿಡಿದವರಲ್ಲಿ ವಿದ್ಯುತ್ ಸಂಚಾರ ಉಂಟುಮಾಡಿದೆ** ಎಂದರು.

ಸಿಪಿಐ(ಎಂಎಲ್–ಲಿಬರೇಷನ್)ನ ಮುಖಂಡ ದೀಪಂಕರ್ ಭಟ್ಟಾಚಾರ್ಯ **ಪಶ್ಚಿಮ ಬಂಗಾಲದಲ್ಲಿ ಎಡಶಕ್ತಿಗಳು ಆಳವಾದ ಬೇರು ಬಿಟ್ಟಿವೆ, ಬಿಜೆಪಿ ಮತ್ತು ಟಿಎಂಸಿಯಂತಹ ಫ್ಯಾಸಿಸ್ಟ್ ಶಕ್ತಿಗಳು ತಮ್ಮ ಹುಸಿ ಕಿತ್ತಾಟದ ಮೂಲಕ ಅವನ್ನು ಕೀಳಲು ಸಾಧ್ಯವಿಲ್ಲ ಎಂಬುದನ್ನು ಈ ರ್‍ಯಾಲಿ ತೋರಿಸಿದೆ** ಎಂದರು.



ಫಾರ್ವರ್ಡ್ ಬ್ಲಾಕ್ ಮುಖಂಡ ದೇಬಬ್ರತ ಬಿಸ್ವಾಸ್ ನಿಜವಾದ ಹೋರಾಟ ನರೇಂದ್ರ ಮೋದಿ ಮತ್ತು ಮಮತಾ ಬ್ಯಾನರ್ಜಿಯಂತಹ ‘ದಮನಕಾರೀ ಶಕ್ತಿ’ಗಳನ್ನು ಪದಚ್ಯುತಗೊಳಿಸಲಿಕ್ಕಾಗಿ ಎನ್ನುತ್ತ **ಈ ಮಿಲಿಯ ಜನಗಳ ರ್‍ಯಾಲಿ ಪಶ್ಚಿಮ ಬಂಗಾಲದಲ್ಲಿ ಜನಗಳ ಮನೋಭಾವ ಬದಲಾಗುತ್ತಿದೆ ಎಂಬ ಸೂಚನೆ ನೀಡಿದೆ** ಎಂದರು.





ಆಸ್ಫೋಟಕಾರಿ ನಿರುದ್ಯೋಗ

ಪುಟ 8 ರಿಂದ

ಅದಕ್ಕಿಂತಲೂ ಹೆಚ್ಚಾಗಿ ಅದನ್ನು ಎದುರಿಸಲು ಪ್ರಭುತ್ವವು ಪ್ರಜ್ಞಾಪೂರ್ವಕವಾಗಿ ಸ್ಪಷ್ಟ ಕಣ್ನೋಟದಿಂದ ಮಧ್ಯಪ್ರವೇಶಿಸಬೇಕಿತ್ತು.

ಆರ್ಥಿಕ ಬೇಡಿಕೆಗಳು ಹೆಚ್ಚುತ್ತಿದ್ದರೆ ಅದು ಹೆಚ್ಚಿನ ಹೂಡಿಕೆಗಳಿಗೆ, ತನ್ಮೂಲಕ ಹೆಚ್ಚಿನ ಉದ್ಯೋಗ ಸೃಷ್ಟಿಗೆ ಅವಕಾಸ ಕಲ್ಪಿಸುತ್ತಿತ್ತು. ಆದರೆ ಹೆಚ್ಚುತ್ತಿರುವ ಅಸಮಾನತೆ, ಜತೆಗೆ ಉದ್ಯೋಗಾವಕಾಶಗಳ ಕೊರತೆಯ ಪರಿಣಾಮವಾಗಿ ಆರ್ಥಿಕ ಬೇಡಿಕೆ ಹೆಚ್ಚುವ ಬದಲು ನಿಧಾನಗೊಂಡಿದೆ. ಕೃಷಿ ಬಿಕ್ಕಟ್ಟಿಗೆ ಪರಿಹಾರಾರ್ಥವಾಗಿ ಮನ್ರೇಗಾದಂತಹ (ಉದ್ಯೋಗ ಖಾತ್ರಿ) ಯೋಜನೆಗಳಲ್ಲಿ ಸಾರ್ವಜನಿಕ ಹೂಡಿಕೆ ಅವಶ್ಯವಾಗಿತ್ತು. ಆದರೆ ಸಂಸದರು ಮತ್ತು ಸಾರ್ವಜನಿಕ ಕಾರ್ಯಕರ್ತರು ಪ್ರಧಾನಮಂತ್ರಿಗಳಿಗೆ ಸಲ್ಲಿಸಿದ್ದ ಅಹವಾಲಿನಲ್ಲಿ ಹೇಳಿರುವಂತೆ “ದೇಶದ ಏಕೈಕ ಉದ್ಯೋಗ ಖಾತ್ರಿ ಯೋಜನೆಯನ್ನು ವ್ಯವಸ್ಥಿತವಾಗಿ ನಿರ್ಲಕ್ಷಿಸಲಾಗುತ್ತಿದೆ. ಬಜೆಟ್‌ನಲ್ಲಿ ಖಾತ್ರಿ ಯೋಜನೆಗೆ ನಿಗದಿತ ಮೊತ್ತವನ್ನು ಕಾನೂನುಬಾಹಿರವಾಗಿ ಕಮ್ಮಿ ಮಾಡುವುದು, ಕೂಲಿ ವಿತರಣೆಯಲ್ಲಿ ವಿಳಂಬದಿಂದಾಗಿ ಈ ಅತ್ಯಂತ ಪ್ರಮುಖವಾದ ಕಾನೂನಾತ್ಮಕ ಕಾರ್ಯಕ್ರಮದ ಫಲವನ್ನು ಪಡೆಯುವಲ್ಲಿ ಜನರು ವಂಚಿತರಾಗಿದ್ದಾರೆ”. ಒಟ್ಟಾರೆ ಕೃಷಿ ರಂಗದಲ್ಲಿನ ಬಿಕ್ಕಟ್ಟಿನ ಫಲವಾಗಿ ದಾಖಲೆ ಬೆಲೆ ಕುಸಿತದಿಂದ ಈ ರಂಗದಲ್ಲಿ ಬೆಳವಣಿಗೆ ಇನ್ನಷ್ಟು ಇಳಿಯಲಿದೆ.

ಖಾಸಗಿ ಬಂಡವಾಳದ ಮೂಲಕವೇ ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆ ಉಲ್ಟಾ ಹೊಡೆದಿದೆ ಕಾರಣ ಬೇಡಿಕೆಯಿಲ್ಲದೇ ಯಾವ ಹೂಡಿಕೆಯೂ ಮುಂದೆ ಬರುವ ಧೈರ್ಯ ತೋರುತ್ತಿಲ್ಲ. ಸರಿಯಾದ ದಿಗ್ದರ್ಶನ ಹೊಂದಿರುವ ಸಾರ್ವಜನಿಕ ಹೂಡಿಕೆಯೇ ಇದಕ್ಕೆ ಪರಿಹಾರ. ಆದರೆ ನವ–ಉದಾರವಾದಿ ಗೊಡ್ಡು ನಂಬಿಕೆ ಇದಕ್ಕೆ ಅವಕಾಶ ನೀಡುತ್ತಿಲ್ಲ. ಬಿಕ್ಕಟ್ಟು ಎಷ್ಟು ಆಳವಾಗಿದೆ ಎಂಬುದನ್ನು ಸರಕು ತಯಾರಿಕಾ ಸೂಚ್ಯಂಕ ತೋರಿಸುತ್ತಿದೆ.

ಡಿಜಿಟಲ್ ಇಂಡಿಯಾ, ಕೌಶಲ್ಯ ಭಾರತ, ಸ್ಟಾರ್ಟ್ ಅಪ್ ಇಂಡಿಯಾ ಈ ಪರಿಸ್ಥಿತಿಯಲ್ಲಿ ಯಶಸ್ವಿಯಾಗಬಹುದೇ? ಖಾಸಗಿ ಬಂಡವಾಳಿಗರ ಬಗ್ಗೆ ಇರುವ ಪ್ರೀತಿಯಿಂದ ಸಾರ್ವಜನಿಕ ಹಣ ಸೋರಿಕೆಯಾಗಿ ಮತ್ತು ದೊಡ್ಡ ಪ್ರಮಾಣದ ಖಾಸಗೀಕರಣದಿಂದಾಗಿ ಹೆಚ್‌ಎಎಲ್ ಮತ್ತು ಒಎನ್‌ಜಿಸಿ ಮುಂತಾದ ಸಾರ್ವಜನಿಕ ವಲಯದ ಉದ್ಯಮಗಳು ಕುಸಿಯುತ್ತಿವೆ. ರಫೇಲ್ ವ್ಯವಹಾರದಲ್ಲಿ ಚಮಚಾ ಬಂಡವಾಳಶಾಹಿ ಹೇಗೆ ‘ಮೇಕ್ ಇನ್ ಇಂಡಿಯಾ’ವನ್ನು ಕೈಬಿಡುವಂತೆ ಮಾಡಿದೆ ಎಂಬುದು ಎಲ್ಲರ ಕಣ್ಣ ಮುಂದಿದೆ.

ಅತಿ ದೊಡ್ಡ ವಿನಾಸ ಉಂಟಾಗಿರುವುದು ನೋಟುರದ್ಧತಿಯಿಂದ. ನಮ್ಮ ಅಸಂಘಟಿತ ಅನೌಪಚಾರಿಕ ವಲಯಗಳಲ್ಲಿ ಕಾರ್ಮಿಕ ವರ್ಗದ 94% ಮಂದಿ ದುಡಿಯುತ್ತಿದ್ದಾರೆ. ಇಲ್ಲಿ ನಗದಿನ ಪಾತ್ರ ದೊಡ್ಡದು. 86% ನಗದನ್ನು ಹಿಂಪಡೆದಿದ್ದರಿಂದ ಈ ವಲಯಗಳ ಬೆನ್ನುಮೂಳೆ ಮುರಿದಿದ್ದು 35 ಲಕ್ಷ ಉದ್ಯೋಗಗಳು ನಷ್ಟಗೊಂಡಿವೆ. ಲೇಬರ್ ಬ್ಯೂರೋ ವರದಿಯಂತೆ ನಿರುದ್ಯೋಗಿಗಳ ಸಮಖ್ಯೆ 2016–17ರಲ್ಲಿ ನಾಲ್ಕು ವರ್ಷಗಳಲ್ಲೇ ಹೆಚ್ಚಿನ ಸ್ಥಿತಿ ಅಂದರೆ 3.9% ತಲುಪಿರುವುದು. ಇದು 2015–16ರಲ್ಲಿ 3.7% ಮತ್ತು 2014–15 ರಲ್ಲಿ 3.4% ಇತ್ತು. ಪ್ರಧಾನಮಂತ್ರಿಯವರ ನವೆಂಬರ್ 8, 2016ರಂದು ಪ್ರಧಾನ ಮಂತ್ರಿಗಳು ಮಾಡಿದ ನೋಟುರದ್ಧತಿಯ ದುರದೃಷ್ಟಕರ ಘೋಷಣೆಯ ದುಷ್ಫಲವಿದು..



ಘೋಷಣೆಗಳು ಎಷ್ಟೆ ಆಕರ್ಷಕವಾಗಿದ್ದರೂ, ಅವುಗಳಿಂದ ಒಟ್ಟಾರೆ ಆರ್ಥಿಕ ಪರಿಸ್ಥಿತಿಯು ಸುಧಾರಿಸುವುದಿಲ್ಲ. ಬದಲಿಗೆ ಇವುಗಳಿಗಳಿಗಾಗಿ ಜಾಹಿರಾತುಗಳ ಮತ್ತು ಪ್ರಚಾರದ ಮೇಲೆ ಭಾರೀ ಹಣ ಖರ್ಚು ಮಾಡಿರುವುದು ಕೂಡ ಪರಿಸ್ಥಿತಿಯನ್ನು ಮತ್ತಷ್ಟು ಬಿಗಡಾಯಿಸಿದೆ.

‘ಜುಮ್ಲಾ’ಗಳು ಬಯಲಾಗುತ್ತಿದ್ದಂತೆ ಮತ್ತಷ್ಟು ‘ಜುಮ್ಲಾ’ಗಳು

ಅಮಿತ್ ಷಾ, ಈ ಸರಕಾರದ ಪ್ರಮುಖ ಪ್ರಚಾರಕ, ಒಂದೊಮ್ಮೆ 7 ಕೋಟಿ ಜನರಿಗೆ 10 ಲಕ್ಷ ಮುದ್ರಾ ಸಾಲವನ್ನು ನೀಡಲಾಗಿದೆಯೆಂದು ಹೇಳಿಕೊಂಡರು. ಆದರೆ ರಿಸರ್ವ್‌ಬ್ಯಾಂಕ್ ಅಂಕಿ ಅಂಶದ ಪ್ರಕಾರ ಸಾಲದ ಬೆಳವಣಿಗೆ ಮುದ್ರಾ ಸಾಲಗಳಿಂದಾಗಿ ಸಾಲನೀಡಿಕೆ ಹೆಚ್ಚಿರುವುದನ್ನು 2015–16 ರ ಮತ್ತು 2016–17(ಮುದ್ರಾ ಸಾಲದ ನಂತರದ) ಅಂಕಿ–ಅಂಶಗಳಲ್ಲೇನೂ ಕಾಣುತ್ತಿಲ್ಲ.

ಆದರೂ ಸರ್ಕಾರ ಇದೇ ಅಚ್ಚಿನಲ್ಲಿ ಮುಂದುವರೆಯುತ್ತಿದೆ ಎಂಬುದನ್ನು ಇದುವರೆಗೆ ಮೀಸಲಾತಿ ಇಲ್ಲದ ವರ್ಗಗಳಿಗೆ 10% ಮೀಸಲಾತಿಗಾಗಿ ಸಂವಿಧಾನ ತಿದ್ದುಪಡಿ ತಂದಿರುವುದು ಸ್ಪಷ್ಟಗೊಳಿಸಿದೆ. ಉದ್ಯೋಗಗಳಲ್ಲಿ ಕಡಿತವಾಗಿರುವುದು, ಕಾರ್ಮಿಕ ಭಾಗವಹಿಸುವಿಕೆಯ ಅನುಪಾತ ಇಳಿಯುತ್ತಿರುವುದು, ಮತ್ತು ಈಗ ಮೀಸಲಾತಿ ಪಡೆಯುವುದಕ್ಕೆ ವರಮಾನ ಮಿತಿಯನ್ನು ಮಾಸಿಕ ರೂ. 66,000ಕ್ಕೆ ಏರಿಸಿರುವುದು ಉದ್ಯೋಗ ನೀಡಿಕೆಯ ಪ್ರಶ್ನೆಯಲ್ಲಿ ಈ ಸರಕಾರದ ಶೋಚನೀಯ ಪ್ರದರ್ಶನದ ದ್ಯೋತಕ.

ಇದೀಗ ಯುವ ಜನತೆ ಈ ಸರ್ಕಾರದಿಂದ ಇದುವರೆಗೆ ಪಡೆದಿರುವ ಅತಿ ದೊಡ್ಡ ‘ಜುಮ್ಲಾ’ ಅಂದರೆ ಬೊಗಳೆ. ಅಮಿತ್ ಶಾ ತಮ್ಮ ಎಂದಿನ ಬಡಾಯಿಯ ದನಿಯಲ್ಲಿ ಮುಂದುವರೆದ ಜಾತಿಗಳ ಲಕ್ಷಾಂತರ ಯುವಜನರಿಗೆ ಪ್ರಧಾನಿಗಳ ದೂರದೃಷ್ಟಿಯ ಆಶೀರ್ವಾದ ದೊರೆತಿದೆ ಎಂದು ಪ್ರಯೋಜನ ಪಡೆಯಲಿರುವುದು ಪ್ರಧಾನಮಂತ್ರಿ ದೃಷ್ಟಿಯ ಪ್ರತೀಕವೆಂದು ಕೊಚ್ಚಿಕೊಂಡಿದ್ದಾರೆ. ಆದರೆ ಈ ಕ್ರೂರ ವಂಚನೆ ಅವರನ್ನು ಮತ್ತೆ ಕಾಡುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ●

ಮಹಿಳೆಯರನ್ನು ಅಲಕ್ಷಿಸಿದ ರಾಜ್ಯ ಬಜೆಟ್: ಜನವಾದಿ ಮಹಿಳಾ ಸಂಘಟನೆ ಟೀಕೆ

ಮಂಡನೆಯಾಗುವುದೇ ಅನುಮಾನ ಎನ್ನುವ ಡೋಲಾಯಮಾನ ಸ್ಥಿತಿಯನ್ನು ಮೀರಿ ಮಾನ್ಯ ಮುಖ್ಯ ಮಂತ್ರಿಯವರು ಸಮ್ಮಿಶ್ರ ಸರಕಾರದ ಎರಡನೇ ಬಜೆಟನ್ನು ಮಂಡಿಸಿದ್ದಾರೆ. ಸದಾಶಯದ ಈ ಬಜೆಟ್ ಗಾತ್ರದಲ್ಲಿ ದೊಡ್ಡದಿದೆ, ಆದರೆ ಅನುಷ್ಠಾನದಲ್ಲಿ ಪರಿಶ್ರಮ ಮತ್ತು ಪ್ರಾಮಾಣಿಕತೆಯ ಅಗತ್ಯವಿದೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಅಭಿಪ್ರಾಯ ಪಡುತ್ತದೆ.

ಮಹಿಳೆಯರು ಮತ್ತು ಮಕ್ಕಳ ವಿರುದ್ಧ ಅವ್ಯಾಹತವಾಗಿ ನಡೆಯುತ್ತಿರುವ ಹಲವು ರೀತಿಯ ದೌರ್ಜನ್ಯದ ನಿಯಂತ್ರಣದ ಕುರಿತಾಗಲಿ, ಹಿಂದಿನ ರಾಜ್ಯ ಸರ್ಕಾರವೇ ರಚಿಸಿದ ಸಮಿತಿಗಳು– ಜಯಮಾಲ ಸಮಿತಿ, ಉಗ್ರಪ್ಪ ನೇತ್ರತ್ವದ ಸಮಿತಿ ಮುಂತಾದ ಇನ್ನೂ ಹಲವು ಸಮಿತಿಗಳು ವ್ಯಾಪಕ ಅಧ್ಯಯನ ಮಾಡಿ ಕೊಟ್ಟ ವಿಸ್ತಾರವಾದ ವರದಿಗಳ ಅನುಷ್ಠಾನದ ಬಗ್ಗೆಯಾಗಲೀ ಮುಖ್ಯಮಂತ್ರಿಗಳು ಪ್ರಸ್ತಾಪವನ್ನೇ ಮಾಡಿಲ್ಲದಿರುವುದು ಲಿಂಗ ಸಂವೇದನೆಯ ವಿಷಯದಲ್ಲಿ ಇರುವ ಕೊರತೆಯನ್ನು ಎತ್ತಿ ತೋರಿಸುತ್ತಿದೆ.

ದಮನಿತ ಮಹಿಳೆಯರಿಗೆ ಆರ್ಥಿಕ ಸಬಲೀಕರಣಕ್ಕೆ ನೆರವನ್ನು ಘೋಷಿಸಿರುವುದನ್ನು ಸ್ವಾಗತಿಸುತ್ತೇವೆ. ಆದರೆ ದೇವದಾಸಿಯಂಥಹ ಕ್ರೌರ್ಯಕ್ಕೆ ಒಳಗಾದ ಮಹಿಳೆಯರ ಸಬಲೀಕರಣದತ್ತ ಗಮನಹರಿಸದಿರುವುದನ್ನು ಪ್ರಶ್ನಿಸುತ್ತೇವೆ.

ಲಕ್ಷಾಂತರ ಮಹಿಳೆಯರು ತೊಡಗಿಕೊಂಡಿರುವ ಅಸಂಘಟಿತ ವಲಯಕ್ಕೆ ಕಾನೂನಾತ್ಮಕ ಭವಿಷ್ಯ ನಿಧಿ ಮತ್ತು ನಿವೃತ್ತಿ ವೇತನದ ಬಗ್ಗೆ ಪ್ರಸ್ತಾಪ ಮಾಡದಿರುವುದು ಆ ವಲಯದ ಬಡ ಕಾರ್ಮಿಕರ ಬದುಕಿನ ಬಗ್ಗೆ ತೋರಿಸಿದ ನಿರ್ಲಕ್ಷ್ಯವೆಂದೇ ಹೇಳಬೇಕಾಗುತ್ತದೆ.

ಮಹಿಳೆ ಮತ್ತು ಮಕ್ಕಳು ವಿಭಾಗದಲ್ಲಿ ಮುಖ್ಯಮಂತ್ರಿಗಳ ಬಜೆಟ್ ಅಂಗನವಾಡಿ ಅಕ್ಕಂದಿರಿಗೆ ಕೊಟ್ಟಿರುವ ಅಲ್ಪ ಸ್ವಲ್ಪವಾದರೂ ನೆರವನ್ನು ಸ್ವಾಗತಿಸುತ್ತೇವೆ. ಆದರೆ ಬಿಸಿಯೂಟದ ಸೋದರಿಯರನ್ನು ಪರಿಗಣಿಸದಿರುವುದನ್ನು ವಿರೋಧಿಸುತ್ತೇವೆ.

ಅಲ್ಲದೇ ಹಲವು ವರ್ಷಗಳ ನಿರಂತರ ಹೋರಾಟದ ಮೂಲಕ ಜಾರಿಗೆ ಬರಲುಪಕ್ರಮಿಸಿದ್ದ ಜೆಂಡರ್ ಬಜೆಟಿಂಗ್ ಎಂಬ ಕಲ್ಪನೆಗೆ ತಿಲಾಂಜಲಿ ಇಟ್ಟಿರುವುದನ್ನು ಖಂಡಿಸುತ್ತೇವೆ.

ಬರ ಪರಿಹಾರದ ನಿಟ್ಟಿನಲ್ಲಿ ವ್ಯಾಪಕ ನೀರಾವರಿ ಯೋಜನೆಗಳ ಬಗ್ಗೆ ಪ್ರಸ್ತಾಪವಿದೆ. ಅದನ್ನು ಸ್ವಾಗತಿಸುತ್ತೇವೆ. ಆದರೆ ಜಲ ಸಂಪನ್ಮೂಲ ಕ್ರೋಢೀಕರಣದ ಮಾರ್ಗದ ಬಗ್ಗೆ ಪ್ರಸ್ತಾಪವಿಲ್ಲ. ರಾಜ್ಯದಾದ್ಯಂತ ಜಿಲ್ಲೆಗಳಲ್ಲಿ ಇರುವ ಪ್ರಾಕೃತಿಕ ಕೆರೆಗಳ ಹೂಳೆತ್ತುವ, ಪುನಃಶ್ಚೇತನಗೊಳಿಸುವ ಸ್ಪಷ್ಟ ಕಾರ್ಯಕ್ರಮ ಹಾಕಿಕೊಳ್ಳುವ ಮೂಲಕ ಅತಿ ಹೆಚ್ಚು ಸಂಖ್ಯೆಯಲ್ಲಿ ಈ ಕೆಲಸಗಳಿಗೆ ತೊಡಗಿಕೊಳ್ಳುವ ಗ್ರಾಮೀಣ ಮಹಿಳೆಯರ ಬದುಕಿಗೂ ನೆರವಾಗುವ ಕ್ರಮ ಕೈಗೊಳ್ಳದಿರುವುದು ದೊಡ್ಡ ಕೊರತೆ ಎಂದು ಸಂಘಟನೆ ಭಾವಿಸುತ್ತದೆ.

ಬಡತನದ ಬೇಗೆಯಿಂದ ನಗರದ ಜನರನ್ನು ಪಾರು ಮಾಡುವ ನಿಟ್ಟಿನಲ್ಲಿ ರಾಜ್ಯಸರ್ಕಾರದ ಯೋಜನೆಯಾಗಿ ನಗರ ಉದ್ಯೋಗ ಖಾತ್ರಿ ಯೋಜನೆಯನ್ನು ಜಾರಿಗೆ ತರುವ ಆಲೋಚನೆ ಮಾಡಬಹುದಿತ್ತು.

ನಿರುದ್ಯೋಗ ಸಮಸ್ಯೆ ಇಡೀ ದೇಶದಲ್ಲಿ ಉಲ್ಬಣಗೊಂಡಿದ್ದು ರಾಜ್ಯದಲ್ಲಿ ಉದ್ಯೋಗ ಸೃಷ್ಟಿ ಗೆ ಮೀಸಲಿಟ್ಟ ಹಣ ಕೇವಲ 50 ಕೋಟಿ ರೂ. ಯಾವ ಮೂಲೆಗೂ ಸಾಲದು.

ರಾಜ್ಯದ ಕೆಲವು ಜಿಲ್ಲೆಗಳ ಅಪೌಷ್ಟಿಕತೆಯ ಪ್ರಮಾಣ ಮಿತಿಮೀರಿದ್ದು ಮಕ್ಕಳು ಮತ್ತು ಮಹಿಳೆಯರು ಇದಕ್ಕೆ ನೇರ ಬಲಿ ಎನ್ನುವುದು ಎಲ್ಲರಿಗೂ ತಿಳಿದ ಸಂಗತಿ. ಅದಕ್ಕೆ ಮೀಸಲಿರಿಸಿರುವ ಅನುದಾನ ಕೂಡ ಅತ್ಯಂತ ಕಡಿಮೆಯಾಗಿದೆ.

ಗ್ರಾಮೀಣ ಪ್ರದೇಶದಲ್ಲಿ ಸಾಮಾನ್ಯವಾಗಿ ಮತಬ್ಯಾಂಕ್ ಗಳಾಗಿ ಪರಿಗಣಿಸಲ್ಪಡುವ ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳ ಕುರಿತು ಮಾಡಿರುವ ಪೂರ್ಣ ನಿರ್ಲಕ್ಷ್ಯ ಈ ಸರಕಾರಕ್ಕೆ ಮಹಿಳೆಯರ ಸ್ಥಿತಿಯ ಬಗ್ಗೆ ಇರುವ ನಕಾರಾತ್ಮಕ ಧೋರಣೆಗೆ ಸಾಕ್ಷಿಯಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಜನಪರತೆಯ ಹೆಸರಿನಲ್ಲಿ ಜನಪ್ರಿಯ ಬಜೆಟ್ ಗಳನ್ನು ಮಂಡಿಸಲಾಗುತ್ತಿದೆ. ಅದನ್ನು ಬಿಟ್ಟು ಜನರ ಬದುಕಿನ ವಾಸ್ತವ ಸ್ಥಿತಿಗಳ ಅಧ್ಯಯನ ನಡೆಸಿ, ಪರಿಸ್ಥಿತಿ ಸುಧಾರಿಸುವ ಹೊಸ ಮಾದರಿಗಳನ್ನು ಅಳವಡಿಸಿಕೊಳ್ಳುವ ಅಗತ್ಯವನ್ನು ಸರ್ಕಾರ ಮನಗಾಣಬೇಕೆಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಆಗ್ರಹಿಸುತ್ತದೆ.

ಶಿಕ್ಷಣ ಕ್ಷೇತ್ರದ ನಿರ್ಲಕ್ಷ್ಯ: ಎಸ್.ಎಫ್.ಐ. ಆರೋಪ

ಇಂದು ಮುಖ್ಯಮಂತ್ರಿ ಕುಮಾರಸ್ವಾಮಿ ಮಂಡಿಸಿರುವ ಬಜೆಟ್ ಕಳೆದಬಾರಿಗಿಂತ ಗಾತ್ರದಲ್ಲಿ ದೊಡ್ಡದಾಗಿ ಕಾಣುತ್ತಿದೆ. ಆದರೆ ಶಿಕ್ಷಣ ಕ್ಷೇತ್ರವನ್ನು ದೊಡ್ಡ ಪ್ರಮಾಣದಲ್ಲಿ ನಿರ್ಲಕ್ಷಿಸಲಾಗಿದೆ. ಕಳೆದ ಬಾರಿ ಶಿಕ್ಷಣಕ್ಕೆ ಶೇ. 11.68 ರಷ್ಟು ಹಣ ಮೀಸಲಿಟ್ಟಿದ್ದರು. ಈ ಬಾರಿ ಕೇವಲ ಶೇ. 11% ನಷ್ಟು ಮೀಸಲಿಟ್ಟಿದ್ದಾರೆ. ಆ ಮೂಲಕ 0.68% ಹಣ ಕಡಿತ ಮಾಡುವ ಮೂಲಕ ವಿದ್ಯಾರ್ಥಿ ವಿರೋದಿ ನೀತಿಯನ್ನು ಮುಂದುವರೆಸಿದೆ.



ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡುವುದಾಗಿ ಹೇಳಿದ್ದ ಸರ್ಕಾರ, ಬಜೆಟ್ ನಲ್ಲಿ ಆ ಬಗ್ಗೆ ಪ್ರಸ್ತಾಪವನ್ನು ಮಾಡದೆ ದ್ರೋಹ ಎಸಗಿದೆ. ರಾಜ್ಯದಲ್ಲಿ 55 ಸಾವಿರಕ್ಕೂ ಹೆಚ್ಚು ಶಾಲೆಗಳು ಮೂಲ ಸೌಲಭ್ಯವಿಲ್ಲದೆ ನರಳುತ್ತಿವೆ. ಅವುಗಳಿಗೆ ಮೂಲಸೌಲಭ್ಯ ಕಲ್ಪಿಸುವ ಬದಲು ಕೇವಲ 5000 ಶಾಲೆಗಳಿಗೆ ಮೂಲ ಸೌಲಭ್ಯ ನೀಡುವುದಾಗಿ ಪ್ರಸ್ತಾಪಿಸಿದೆ. 1000 ಶಾಲೆಗಳಿಗೆ ಮಾತ್ರ ಕಲಿಕಾಸಾಮಗ್ರಿಗಳಿಗೆ ಹಣ ತೆಗೆದಿಡಲಾಗಿದೆ. ಹಾಗಾದರೆ ಉಳಿದ ಶಾಲೆಗಳಿಗೆ ಕಲಿಕಾಸಾಮಗ್ರಿಗಳ ಅಗತ್ಯವಿಲ್ಲವೆ? ಸರಕಾರ ಈ ದ್ವಂದ್ವನೀತಿ ತಾರತಮ್ಯವನ್ನು ಹುಟ್ಟಿಸುತ್ತದೆ.

ಖಾಸಗಿ ಶಾಲೆಗಳನ್ನು ನಿಯಂತ್ರಿಸುವ ಬದಲು ಅವುಗಳಿಗೆ ಪೈಪೋಟಿ ನೀಡುವುದಕ್ಕಾಗಿ 1000 ಆಂಗ್ಲ ಮಾಧ್ಯಮ ಶಾಲೆಗಳನ್ನು ತೆರೆಯಲು ಮುಂದಾಗಿರುವುದು ನಾಡದ್ರೋಹದ ಕೆಲಸವಾಗಿದೆ. ಸರಕಾರವೇ ಈ ರೀತಿ ಪೋಷಕರಿಗೆ ಇಂಗ್ಲೀಷ ವ್ಯಾಮೋಹವನ್ನು ತುಂಬುತ್ತಿರುವುದು ಅಪಾಯಕಾರಿ ನಡೆಯಾಗಿದೆ. ಹಾಗಾಗಿ ಇಂಗ್ಲೀಷ ಮಾಧ್ಯಮ ಶಾಲೆಗಳ ಸ್ಥಾಪನೆಯ ಪ್ರಸ್ಥಾಪವನ್ನು ಕೈ ಬಿಟ್ಟು, ಇಂಗ್ಲೀಷನ್ನು ಒಂದು ಭಾಷೆಯಾಗಿ ಕಲಿಸಬೇಕಿದೆ. ಸರಕಾರಿ ಶಾಲೆಗಳನ್ನು ಬಲಪಡಿಸಿ ಮಾತೃಭಾಷಾ ಶಿಕ್ಷಣಕ್ಕೆ ಮುಂದಾಗಬೇಕಿದೆ.

100 ಹಾಸ್ಟೇಲ್ ಗಳಿಗೆ ಸ್ವಂತ ಕಟ್ಟಡಕ್ಕೆ ಹಣ ನೀಡುವುದಾಗಿ ಜುಲೈ ತಿಂಗಳಲ್ಲಿ ಮಂಡಿಸಿದ್ದ ಬಜೆಟ್ ನಲ್ಲಿ ಹೇಳಲಾಗಿತ್ತು. ಅದನ್ನು ಜಾರಿ ಮಾಡದೆ ಮತ್ತೆ ಅದೇ ಭರವಸೆಯನ್ನು ಪುನರಾವರ್ತನೆ ಮಾಡಿದೆ. ಹಾಸ್ಟೇಲ್ ವಿದ್ಯಾರ್ಥಿಗಳ ಆಹಾರಭತ್ಯೆಯನ್ನು ಹೆಚ್ಚಿಸದಿರುವುದನ್ನು ಎಸ್.ಎಫ್.ಐ ವಿರೋಧಿಸುತ್ತದೆ.

ನೇಮಕಾತಿಗಳ ಬಗ್ಗೆ ಸರಿಯಾದ ಪಸ್ತಾಪವನ್ನು ಮಾಡದೆ ಉದ್ಯೋಗದ ಕುರಿತು ಕಾಲೇಜುಗಳಲ್ಲಿ ವಿಷಯವಾಗಿ ಕಲಿಸಲು ಪ್ರಸ್ಥಾಪಿಸಲಾಗಿದೆ. ಉದ್ಯೋಗವನ್ನು ಸೃಷ್ಟಿಮಾಡದೆ ಅದರ ಬಗ್ಗೆ ಅಧ್ಯಯನ ನಡೆಸಿದರೆ ಯಾವ ಪ್ರಯೋಜನವು ಸಿಗುವುದಿಲ್ಲ. ಈ ಮೂಲಕ ಉದ್ಯೋಗದ ಆಸೆಯಲ್ಲಿದ್ದವರ ಮೂಗಿಗೆ ತುಪ್ಪ ಸವರುವ ಕೆಲಸ ಮಾಡಿದೆ.

ರಾಜ್ಯದಲ್ಲಿ 1.19 ಲಕ್ಷ ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಅವರನ್ನು ಶಾಲೆಗೆ ಮರಳಿತರುವ ಮಹತ್ವಾಕಾಂಕ್ಷಿ ಯೋಜನೆಯನ್ನು ಪ್ರಸ್ಥಾಪಿಸಿಲ್ಲ.

ಒಟ್ಟಾರೆ ರಾಜ್ಯ ಸರಕಾರ ಶಿಕ್ಷಣಕ್ಕೆ ಹಣ ಕಡಿತ ಗೊಳಿಸುವ ಮೂಲಕ ಸಮಸ್ಯೆಗಳಲ್ಲಿ ನರಳುವಂತೆ ಮಾಡಿದೆ ಈ ಬಜೆಟ್ ನ್ನು ಭಾರತ ವಿದ್ಯಾರ್ಥಿ ಫೇರೇಷನ್ ವಿರೋದಿಸುತ್ತದೆ.

ಫೆಬ್ರುವರಿ 18: ದಿಲ್ಲಿ ಚಲೋ....... ಪುಟ 5 ರಿಂದ

ಏರಿಕೆಯಾಗಿದೆ. ಪ್ರಸ್ತುತ ಶಿಕ್ಷಣದ ವೆಚ್ಚವು ಜಿಡಿಪಿಯ 3.3% ರಷ್ಟಿದೆ. ಇದು ಬಿಜೆಪಿ 2014 ರ ಚುನಾವಣಾ ಪ್ರಣಾಳಿಕೆಯಲ್ಲಿ 6% ಕ್ಕೆ ಹೆಚ್ಚುವುದಾಗಿ ಹೇಳಿಕೊಂಡಿತ್ತು. ಐದು ವರ್ಷ ಪೂರ್ಣಗೊಳಿಸಿದರೂ ಅದು ಸಾಧ್ಯವಾಗಲಿಲ್ಲ.

ಹೈಯರ್ ಎಜುಕೇಷನ್ ಫೈನಾನ್ಸಿಂಗ್ ಏಜೆನ್ಸಿ (HEFA) ಗಾಗಿ ಕಳೆದ ವರ್ಷದ ಬಜೆಟ್ ನಲ್ಲಿ 2,750 ಕೋಟಿ ರೂ.ಗಳನ್ನು ಮೀಸಲಿಟ್ಟಿದ್ದರು. ಅದರಲ್ಲಿ ಕೇವಲ 250 ಕೋಟಿ ಮಾತ್ರ ಖರ್ಚು ಮಾಡಿದೆ! ಶಿಕ್ಷಣದ ಬಗ್ಗೆ ಬಿಜೆಪಿ ಸರಕಾರದ ನಿರ್ಲಕ್ಷ್ಯ ಎಷ್ಟಿದೆ ಎನ್ನುವುದಕ್ಕೆ ಈ ಅಂಕಿ ಅಂಶ ಸಾಕ್ಷಿಯಾಗಿದೆ. ಈ ವರ್ಷ, 650 ಕೋಟಿ ರೂಪಾಯಿಯನ್ನು ಕಡಿತ ಮಾಡಲಾಗಿದೆ.

ವಿದ್ಯಾರ್ಥಿಗಳಿಗೆ ಒಟ್ಟು ಹಣಕಾಸಿನ ಸಹಾಯದ ಹಂಚಿಕೆ ಕಳೆದ ವರ್ಷಕ್ಕೆ ಹೋಲಿಸಿದರೆ 306 ಕೋಟಿಯಷ್ಟು ಇಳಿಕೆ ಕಂಡಿದೆ. ಕಳೆದ ಬಾರಿ 2600 ಕೋಟಿ ಇದ್ದದ್ದು ಈ ಬಾರಿ 2306 ಕೋಟಿಗಳಿಗೆ ಇಳಿದಿದೆ. ಬಾಲಕಿಯರ ವಸತಿ ನಿಲಯಕ್ಕೆ ಕಳೆದ ವರ್ಷ 30 ಕೋಟಿಗಳಷ್ಟು ನಿಧಿ ನಿಗದಿಪಡಿಸಲಾಗಿತ್ತು ಈ ವರ್ಷ ಕೇವಲ 13 ಕೋಟಿಗಳಿಗೆ ಇಳಿಸಲಾಗಿದೆ. ಮಹಿಳಾ ಸಬಲೀಕರಣದ ಬಗ್ಗೆ ಮೋದಿ ಸಚಿವ ಸಂಪುಟ ಸುಳ್ಳು ಹೇಳುತ್ತಿದೆ ಎನ್ನುವುದಕ್ಕೆ ಇದು ಸಾಕ್ಷಿಯಾಗಿದೆ.


ಕಳೆದ ವರ್ಷದ ಬಜೆಟಿನಲ್ಲಿ IIT ಮತ್ತು IISER ಗಳಿಗೆ ಮೀಸಲಿಟ್ಟ ಬಜೆಟಿನಲ್ಲಿ ಬೃಹತ್ ಕುಸಿತ ಕಂಡು ಬಂದಿದೆ. ಗೋಮೂತ್ರ ಮತ್ತು ಪುರಾಣಗಳಿಗೆ ನೀಡುವ ಮಹತ್ವವನ್ನು ಬಿಜೆಪಿ ಸರಕಾರ ವಿಜ್ಞಾನ ಮತ್ತು ತಂತ್ರಜ್ಞಾನಗಳಿಗೆ ನೀಡುತ್ತಿಲ್ಲ.

UGC ಮತ್ತು AICTE ಗೆ ಅನುದಾನವನ್ನು ಸಹ ತೀವ್ರವಾಗಿ ನಿರಾಕರಿಸಲಾಗಿದೆ. ಈ ಅಂಕಿ ಅಂಶಗಳು ನಾಮಮಾತ್ರವೆಂದು ಮನಸ್ಸಿನಲ್ಲಿಟ್ಟುಕೊಳ್ಳಬೇಕು, ಇದರರ್ಥ ನಾವು ಹಣದುಬ್ಬರವನ್ನು ಗಣನೆಗೆ ತೆಗೆದುಕೊಳ್ಳುವಾಗ, ಈ ಅಂಕಿ ಅಂಶಗಳು ಹೆಚ್ಚು ಕುಸಿತ ಕಂಡಿವೆ.


ನಾಗರಿಕರಿಗೆ ಉದ್ಯೋಗವನ್ನು ಒದಗಿಸಲು ಸರ್ಕಾರ ವಿಫಲವಾಗಿದೆ. ಆ ವೈಫಲ್ಯವನ್ನು ಮರೆಮಾಡಲು ನಾಚಿಕೆಯಿಲ್ಲದ ಪ್ರಯತ್ನದಲ್ಲಿ ನಿರತವಾಗಿದೆ. ಬಜೆಟ್ ಭಾಷಣದಲ್ಲಿ ಉದ್ಯೋಗದ ಕುರಿತು ಸುಳ್ಳು ಹೇಳಲಾಗಿದೆ. ಇತ್ತೀಚೆಗೆ ಪ್ರಕಟವಾದ ಎನ್.ಎಸ್.ಎಸ್.ಓ. ವರದಿ ಕಳೆದ 45 ವರ್ಷಗಳಲ್ಲಿ ದೇಶದಲ್ಲಿ ನಿರುದ್ಯೋಗ ದರವು ಅತಿ ಹೆಚ್ಚು ಎಂದು ತೋರಿಸಿದೆ! ಕಳೆದ ಐದು ವರ್ಷಗಳಲ್ಲಿ ಬಿಜೆಪಿ ಸರ್ಕಾರವು ಪ್ರತಿ ವಿಧದಲ್ಲೂ ಈ ದೇಶದ ಯುವಕರನ್ನು ವಿಫಲಗೊಳಿಸಿರುವುದು ಸ್ಪಷ್ಟವಾಗಿದೆ. ಇದು ಶಿಕ್ಷಣ ಮತ್ತು ಉದ್ಯೋಗದ ನಿರಾಕರಣೆಯ ಬಜೆಟ್ ಆಗಿದೆ.

ಈ ವೇಳೆ ವಿದ್ಯಾರ್ಥಿ ಸಂಘಟನೆಗಳು ಈ ಕೆಳಗಿನ ಹಕ್ಕೊತ್ತಾಯಗಳಿಗೆ ಆಗ್ರಹಿಸಲಿವೆ.

1) ಕೆ.ಜಿ.ಯಿಂದ ಪಿ.ಜಿ.ವರೆಗೆ ರಾಷ್ಟ್ರವ್ಯಾಪಿ ಸಂಪೂರ್ಣ ಉಚಿತ ಶಿಕ್ಷಣ ನೀಡಬೇಕು.
2) ಜಿಡಿಪಿಯ ಕನಿಷ್ಠ 6% ಮತ್ತು ಕೇಂದ್ರ ಬಜೆಟ್ನ 10% ರಷ್ಟು ಹಣವನ್ನು ಶಿಕ್ಷಣಕ್ಕೆ ಮೀಸಲಿಡಬೇಕು.
3) ಭಗತ್ ಸಿಂಗ್ ರಾಷ್ಟ್ರೀಯ ಉದ್ಯೋಗ ಖಾತರಿ ಕಾಯ್ದೆ **(BNJA)** ಯನ್ನು ಜಾರಿಗೆ ತಂದು ಎಲ್ಲರಿಗೂ ಉದ್ಯೋಗವನ್ನು ಖಾತರಿಪಡಿಸಬೇಕು.
4) ಶಿಕ್ಷಣದ ವರ್ಗೀಕರಣವನ್ನು ನಿಲ್ಲಿಸಿ. ಅಸ್ತಿತ್ವದಲ್ಲಿರುವ ಮೀಸಲಾತಿಯನ್ನು ಸರಿಯಾಗಿ ಅಳವಡಿಸಿ ಮತ್ತು ಸಾಮಾಜಿಕ ನ್ಯಾಯವನ್ನು ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಖಚಿತಪಡಿಸಿಬೇಕು.
5) ತಕ್ಷಣವೇ ಉಳಿದಿರುವ ಎಲ್ಲಾ ವಿದ್ಯಾರ್ಥಿವೇತನಗಳ ಹಣವನ್ನು ಬಿಡುಗಡೆ ಮಾಡಿಬೇಕು ಮತ್ತು ಹಿಂದುಳಿದ ಹಿನ್ನೆಲೆಯಲ್ಲಿ ಸಂಶೋಧನಾ ವಿದ್ಯಾರ್ಥಿಗಳಿಗೆ ಹೆಚ್ಚಿನ ಫೆಲೋಶಿಪ್ ಗಳನ್ನು ಸ್ಥಾಪಿಸಿಬೇಕು.
6) ಶಿಕ್ಷಣದ ಕೇಂದ್ರೀಕರಣ ವಿರೋಧಿಸಿ.



ಅಚ್ಛೇ ದಿನ್ ಬಜೆಟಿನಲ್ಲಿ 'ಕೃಷಿ ಗೌರವ'ವೂ, ಗ್ರಾಮೀಣ ಉದ್ಯೋಗ ಖಾತ್ರಿ ಕಡಿತವೂ ಕಲ್ಯಾಣ ಕಾರ್ಯಕ್ರಮಗಳಿಗೆ ಕಡಿತ, ಖಾಸಗಿ-ಆಧಾರಿತ ಕಾರ್ಯಕ್ರಮಗಳಿಗೆ ಏರಿಕೆ



ಐದು ವರ್ಷಗಳ ಅಚ್ಛೇ ದಿನ್‌ಗಳನ್ನು ಬಹಳ ಸಂತೋಷದಿಂದ ನೆನಪಿಸಿಕೊಂಡು ಮುಂದಿನ ಹತ್ತು ವರ್ಷಗಳ 'ಹತ್ತು ಆಯಾಮಗಳ ಕಣ್ನೋಟ' ಎಂಬುದನ್ನು ಪ್ರಸ್ತುತ ಪಡಿಸಿದ ಹಂಗಾಮಿ ಹಣಕಾಸು ಮಂತ್ರಿಗಳು ಮಂಡಿಸಿದ ಮಧ್ಯಂತರಕ್ಕೆ ಎಂಬ ಬಜೆಟ್ ಯಾವುದೇ ಮುಲಾಜಿಲ್ಲದೆ ದೇಶದ ಏಕೈಕ ಉದ್ಯೋಗ ಖಾತ್ರಿ ಯೋಜನೆಯನ್ನು ಮುಗಿಸಿ ಬಿಡುವ ಕೊನೆಯ ಪ್ರಯತ್ನ ನಡೆಸಿದಂತೆ ಕಾಣುತ್ತದೆ.

ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಪ್ರಸ್ತುತ ಹಣಕಾಸು ವರ್ಷದಲ್ಲಿ ಇನ್ನೂ ಎರಡು ತಿಂಗಳಿದ್ದರೂ ಕಾನೂನಿನ ಪ್ರಕಾರ ಉದ್ಯೋಗ ಒದಗಿಸಲು ಗ್ರಾ ಮೀಣ ಅಭಿವೃದ್ಧಿ ಇಲಾಖೆಯಲ್ಲಿ ಹಣವೇ ಉಳಿದಿಲ್ಲವಂತೆ. ಈ ಎರಡು ತಿಂಗಳಿಗೆ 21,000 ಕೋಟಿ ರೂ. ಬೇಕು. ಆದರೆ ಇದರ ಪರಿವೆಯೇ ಇಲ್ಲದೆ ಹಂಗಾಮಿ ಹಣಕಾಸು ಮಂತ್ರಿಗಳು 2019–20 ಕ್ಕೆ ಕೊಟ್ಟಿರುವುದು 2018–19ರಲ್ಲಿ ಖರ್ಚಾದ್ದಕ್ಕಿಂತಲೂ ಕಡಿಮೆ.

2018–19ರ ಬಜೆಟಿನಲ್ಲಿ ಇದಕ್ಕೆ 55,000 ಕೋಟಿ ರೂ. ಕೊಡಲಾಗಿತ್ತು. ಇದು ಕಾನೂನಾತ್ಮಕ ಹಕ್ಕು ಕೊಡುವ ಯೋಜನೆಯಾದ್ದರಿಂದ ಜನವರಿ 2019ರಲ್ಲಿ ಮತ್ತೆ 6084 ಕೋಟಿ ರೂ. ಕೊಡಬೇಕಾಯಿತು. ಅಂದರೆ ಹತ್ತು ತಿಂಗಳಿಗೇ ಬೇಕಾದ್ದು ಒಟ್ಟು 61084 ಕೋಟಿ ರೂ. ಆದರೂ 2019–20ರ ಬಜೆಟಿನಲ್ಲಿ ಇಡೀ ವರ್ಷಕ್ಕೆ ಕೊಟ್ಟಿರುವುದು ಕೇವಲ 60,000 ಕೋಟಿ ರೂ.

'ಕೃಷಿ ಗೌರವ' ಮತ್ತು ಕಾರ್ಮಿಕರಿಗೆ 'ಮಾನಧನ'ದ ಯೋಜನೆಗಳ ಬಗ್ಗೆ ಬೆನ್ನು ತಟ್ಟಿ ಕೊಳ್ಳುತ್ತಿರುವ ಈ ಸರಕಾರಕ್ಕೆ ಗ್ರಾಮೀಣ ಬಡತನವನ್ನು ಕಡಿಮೆ ಮಾಡುವ ತುಸುವಾದರೂ ಯೋಚನೆ ಇದ್ದರೆ ಕನಿಷ್ಟ 88,000 ಕೋಟಿ ರೂ.ಗಳನ್ನು ಈ ಯೋಜನೆಗೆ ಕೊಡಬೇಕಾಗಿತ್ತು. ಆದರೆ ಈ ಸರಕಾರ ಇದನ್ನು ವ್ಯವಸ್ಥಿತವಾಗಿ ಬುಡಮೇಲು ಮಡುವಂತೆ ಕಾಣುತ್ತಿದೆ ಎಂದು 250 ಸಂಸತ್ ಸದಸ್ಯರು ಮತ್ತು ಪ್ರತಿಷ್ಠಿತ ನಾಗರಿಕರು ನೇರವಾಗಿ ಪ್ರಧಾನ ಮಂತ್ರಿಗಳಿಗೇ ಪತ್ರ ಬರೆದು ಖೇದ ಮತ್ತು ಆತಂಕ ವ್ಯಕ್ತಪಡಿಸಿದ್ದಾರೆ. ಬಜೆಟ್ ನೀಡಿಕೆಗಳ ಮೇಲೆ ಕಾನೂನುಬಾಹಿರ ಮಿತಿಗಳನ್ನು ಹಾಕಲಾಗುತ್ತಿದೆ, ಕಡಿಮೆ ಕೂಲಿ ಕೊಡಲಾಗುತ್ತಿದೆ, ಆ ಕೂಲಿಯ ಪಪಾವತಿಯಲ್ಲಿಯೂ ವಿಪರೀತ ವಿಳಂಬವಾಗುತ್ತಿದೆ ಎಂದು ಅವರು ಪ್ರಧಾನಿಗಳ ಗಮನಕ್ಕೆ ತಂದಿದ್ದಾರೆ. ದೇಶಾದ್ಯಂತ ಕೋಟಿಗಟ್ಟಲೆ ಗ್ರಾಮೀಣ ಕೆಲಸಗಾರರಿಗೆ ಕಾನೂನಾತ್ಮಕವಾಗಿ ನೀಡಿರುವ ಸೌಲಭ್ಯವನ್ನು ರಕ್ಷಿಸಲು ತ್ವರಿತ, ಸಂವೇದನಾಶೀಲ ಕ್ರಮ ಕೈಗೊಳ್ಳಬೇಕು ಮತ್ತು ರಾಜಕೀಯ ಇಚ್ಛಾಶಕ್ತಿಯನ್ನು ಪ್ರದರ್ಶಿಸಬೇಕು ಎಂದು ಈ ಪ್ರತಿಷ್ಠಿತರು ಪ್ರಧಾನಿಗಳನ್ನು ಕೋರಿದ್ದಾರೆ.


ಅಚ್ಛೇ ದಿನ್ ಕೊನೆಗಾಲದಲ್ಲಿ ಪ್ರಧಾನ ಮಂತ್ರಿಗಳು ಅಗತ್ಯ ಸಂವೇದನೆಯನ್ನು, ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸುತ್ತಾರೆಯೆ? ಕಳೆದ ಐದು ವರ್ಷಗಳ ಅನುಭವ ಮಾತ್ರವಲ್ಲ ಈ 'ಮಧ್ಯಂತರ ಬಜೆಟ್' ಕೂಡ ಅಂತಹ ನಿರೀಕ್ಷೆಗೆ ಅವಕಾಶ ಕೊಡುತ್ತಿಲ್ಲ.

ಈ ಮಧ್ಯಂತರ ಬಜೆಟಿನಲ್ಲಿ ರೈತರಿಗೆ ಮತ್ತು ಅಸಂಘಟಿತ ಕಾರ್ಮಿಕರಿಗೆಂದು ಎರಡು ಬಕ್ಷೀಸುಗಳನ್ನು ಘೋಷಿಸಲಾಗಿದೆ. ಅವು ಇನ್ನೆರಡು ಹೊಸ ಜುಮ್ಲಾಗಳಲ್ಲದೆ ಬೇರೇನೂ ಅಲ್ಲ ಎಂದು ರೈತರ ಮತ್ತು ಕಾರ್ಮಿಕರ ಪ್ರತಿನಿಧಿಗಳು ಈಗಾಗಲೇ ಮನವರಿಕೆ ಮಾಡಿಸಿದ್ದಾರೆ. 'ಪ್ರಧಾನ ಮಂತ್ರಿ ಕೃಷಿ ಸಮ್ಮಾನ್ ಯೋಜನಾ'ದ ನಿಜರೂಪವನ್ನು ಒಬ್ಬ ವ್ಯಂಗ್ಯಚಿತ್ರಕಾರರ ಈ ಕೆಳಗೆ ಕೊಟ್ಟಿರುವ ಕಾರ್ಟೂನ್ ಸರಿಯಾಗೇ ಬಿಂಬಿಸಿದೆ.

ಈ ಸರಕಾರದ ಸಂವೇದನೆ ಮತ್ತು ರಾಜಕೀಯ ಇಚ್ಛಾಶಕ್ತಿ ವಯಸ್ಸಾದವರಿಗೆ ಮತ್ತು ವಿಧವೆಯರಿಗೆ ಪೆನ್ಶನ್ ಕೊಡುವ ಸಾಮಾಜಿಕ ನೆರವು ಕಾರ್ಯಕ್ರಮ(ಎನ್‌ಎಸ್‌ಎಪಿ), ಗ್ರಾಮೀಣ ರಸ್ತೆ ಸಂಪರ್ಕ ಯೋಜನೆ(ಪಿಎಂ ಜಿಎಸ್‌ವೈ), ವಸತಿ ಯೋಜನೆ (ಪಿಎಂಎವೈ) ಗೆ ನೀಡಿರುವ ಮೊತ್ತಗಳಲ್ಲಾಗಲೀ, ಪರಿಶಿಷ್ಟ ಜಾತಿಗಳು(ಎಸ್‌ಸಿ), ಬುಡಕಟ್ಟುಗಳು(ಎಸ್‌ಟಿ)ಮತ್ತು ಅಲ್ಪಸಂಖ್ಯಾತರ ಶಿಕ್ಷಣ ಮತ್ತಿತರ ಕಲ್ಯಾಣ ಯೋಜನೆಗಳಿಗೆ ನೀಡಿರುವ ಮೊತ್ತಗಳಲ್ಲಾಗಲೀ ಕೂಡ ಕಾಣುತ್ತಿಲ್ಲ. ಯುಜಿಸಿ ಶಿಕ್ಷಣಕ್ಕೆ ನೀಡಿರುವ ಮೊತ್ತವೂ ಪ್ರಸಕ್ತ ಹಣಕಾಸು ವರ್ಷದ ಪರಿಷ್ಕೃತ ಬಜೆಟಿಗಿಂತಲೂ ಕಡಿಮೆ. ಹೆಣ್ಣುಮಗುವಿನ ಮಾಧ್ಯಮಿಕ ಶಿಕ್ಷಣಕ್ಕೆ ಪರಿಷ್ಕೃತ ಬಜೆಟ್ 255.9 ಕೋಟಿ ರೂ. ತೋರಿಸುತ್ತಿದ್ದರೆ, 2019–20ರ ಬಜೆಟ್‌ನಲ್ಲಿರುವುದು ಕೇವಲ 100 ಕೋಟಿ ರೂ.!

ಆರೋಗ್ಯದ ಬಾಬ್ತಿನಲ್ಲಿ ವಿಮಾ–ಆಧಾರಿತ ಆಯುಷ್ಮಾನ್ ಯೋಜನೆಗೆ ಹಣ 2400 ಕೋಟಿ ರೂ.ಗಳಿಂದ 6400 ಕೋಟಿ ರೂ.ಗೇರಿದರೆ, ಪ್ರಭುತ್ವ ಖರ್ಚು ಮಾಡುವ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಶನ್‌ಗೆ ಕೇವಲ 2% ಏರಿದೆ, ಹಣದುಬ್ಬರವನ್ನು ಲೆಕ್ಕಕ್ಕ ತಗೊಂಡರೆ ವಾಸ್ತವವಾಗಿ ಇಳಿದಿದೆ, ಜಿಲ್ಲಾ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸುವ ಬಾಬ್ತಿಗೆ ಹಣ 3168 ಕೊಟಿಯಿಂದ ಕೇವಲ 2000 ಕೋಟಿಗೆ ಇಳಿದಿದೆ.

ಒಟ್ಟಿನಲ್ಲಿ ಪ್ರಭುತ್ವ– ಪ್ರಾಯೋಜಿತ ಕಲ್ಯಾಣ ಕಾರ್ಯಕ್ರಮಗಳಿಗೆ ಕಡಿತ, ಖಾಸಗಿ–ಆಧಾರಿತ ಕಾರ್ಯಕ್ರಮಗಳಿಗೆ ಏರಿಕೆ. ಈ ಅಚ್ಛೇ ದಿನ್ ಸರಕಾರದ 'ರಾಜಕೀಯ ಇಚ್ಛಾಶಕ್ತಿ'ಯನ್ನು ಇದೇ ಚೆನ್ನಾಗಿ ಬಿಂಬಿಸುತ್ತದೆ.



ವ್ಯಂಗ್ಯಚಿತ್ರ: ಎಸ್.ವಿ.ಮುಡಿ

ಅಂಕಿ–ಅಂಶಗಳ ಅಚ್ಛೇದಿನ್ ಭಯ ಉದ್ಯೋಗಕ್ಕಷ್ಟೇ ಸೀಮಿತವಾಗಿಲ್ಲ

ರಾಷ್ಟ್ರೀಯ ಸಾಂಖ್ಯಿಕ ಆಯೋಗ ವಾರ್ಷಿಕ ಉದ್ಯೋಗ ಸರ್ವೆ 2017–18ರ ವರದಿಯನ್ನು ಸಿದ್ಧಪಡಿಸಿತ್ತು. ಅದನ್ನು ಸರಕಾರ ಪ್ರಕಟಿಸಲಿಲ್ಲ. ಈ ಹಿನ್ನೆಲೆಯಲ್ಲಿ ಆಯೋಗದ ಇಬ್ಬರು ಸದಸ್ಯರು ರಾಜೀನಾಮೆ ನಿಡಿದ್ದು ದೊಡ್ಡ ಸುದ್ದಿಯಾಯಿತು. ಸರಕಾರ ತನ್ನ ಮುಜುಗರವನ್ನು ಮರೆಮಾಚಲು ಮಾಡಿದ ಪ್ರಯತ್ನಗಳು ಅದರ ನಿಜರೂಪವನ್ನು ಹೆಚ್ಚೆಚ್ಚು ನಿಖರವಾಗಿ ಬಯಲಿಗೆ ತಂದವು. ಸರಕಾರ ತನ್ನ ರಕ್ಷಣೆಗೆಂದು ಕಳಿಸಿದ ನೀತಿ ಆಯೋಗದ ಉಪಾಧ್ಯಕ್ಷರು ಪತ್ರಕರ್ತರೆದುರು ನಗೆಪಾಟಲಾದರು. ಮೊದಲು ಇದು ಕರಡು ಎಂದರು, ಸರಕಾರ ಅದನ್ನು ಮಂಜೂರು ಮಾಡಬೇಕು ಎಂದರು. ಈ ಬಗ್ಗೆ ಸ್ಪಷ್ಟೀಕರಣ ಕೇಳಿದಾಗ ನನಗೆ ಗೊತ್ತಿಲ್ಲ ಎಂದು ಕೈಚೆಲ್ಲಿದರು. ಆಯೋಗ ಒಂದು ಸಂವಿಧಾನಿಕ ಸಂಸ್ಥೆ ಅಂಗೀಕರಿಸಿದ ವರದಿ ಅದು ಅಂತಿಮ ವರದಿಯೇ, ಕರಡು ಅಲ್ಲ, ಅದನ್ನು ಸಂಪುಟ ಮಂಜೂರು ಮಾಡುವ ಪ್ರಶ್ನೆಯಿಲ್ಲ ಎಂಬುದು ಬಹುಶಃ ಆಮೇಲೆ ಅವರಿಗೆ ತಿಳಿಯಿತು.

- ಅದೇ ರೀತಿ 2017–18ರ ಲೇಬರ್ ಬ್ಯುರೊದ ಉದ್ಯೋಗ–ನಿರುದ್ಯೋಗ ವರದಿ ಸಿದ್ಧವಾಗಿದೆ, ಅದನ್ನು ಕೂಡ ಸರಕಾರ ಬಿಡುಗಡೆ ಮಾಡಿಲ್ಲ.
  ಹೀಗೆ ಬಿಡುಗಡೆ ಮಾಡದಿರುವ ಅಂಕಿ–ಅಂಶಗಳ ವರದಿಗಳು ಇನ್ನೂ ಹಲವು ಇವೆ ಎಂದು 'ಇಂಡಿಯಾಸ್ಪೆಂಡ್'ನ ಪ್ರಾಚೀ ಸಾಳ್ವೆ ಹೇಳುತ್ತಾರೆ.
- ರಾಷ್ಟ್ರೀಯ ಅಪರಾಧ ದಾಖಲೆಗಳ ಕಚೇರಿ(ಎನ್‌ಸಿಆರ್‌ಬಿ) ಮಾಹಿತಿ ದೇಶದಲ್ಲಿ ರೈತರ ಆತ್ಮಹತ್ಯೆಗಳ ಪ್ರಶ್ನೆಯನ್ನು ಮುಂಚೂಣಿಗೆ ತರುವಲ್ಲಿ ಪ್ರಮುಖ ಪಾತ್ರವಹಿಸಿತ್ತು. ಆ ವರದಿ 2015ರ ನಂತರದ ಅವಧಿಗಳಿಗೆ ಲಭ್ಯವಿಲ್ಲ. ಎನ್‌ಸಿಆರ್‌ಬಿ ಈ ಮಾಹಿತಿಗಳನ್ನು ಸಂಗ್ರಹಿಸುತ್ತಿದೆ, ಅದನ್ನು ಪ್ರಕಟಿಸಲಾಗುತ್ತಿಲ್ಲ ಅಷ್ಟೇ ಎಂದು ಹೇಳಲಾಗಿದೆ.
- ಡಿಐಪಿಪಿ, ಅಂದರೆ ಕೈಗಾರಿಕಾ ಧೋರಣೆ ಮತ್ತು ಉತ್ಪಾದನಾ ಇಲಾಖೆ ವಿದೇಶಿ ನೇರ ಹೂಡಿಕೆ ಕುರಿತಂತೆ ತ್ರೈಮಾಸಿಕ ವರದಿಗಳನ್ನು ತಯಾರಿಸುತ್ತದೆ. ರಿಝರ್ವ್ ಬ್ಯಾಂಕ್ ಈ ಕುರಿತು ಮಾಹಿತಿ ಒದಗಿಸುತ್ತಿದ್ದರೂ ಜೂನ್ 2018ರಿಂದ ಅದನ್ನು ಬಿಡುಗಡೆ ಮಾಡಲಾಗಿಲ್ಲ.
- ಸಾಮಾಜಿಕ–ಆರ್ಥಿಕ ಜಾತಿ ಗಣತಿಯ ಸಾಮಾಜಿಕ–ಆರ್ಥಿಕ ರೂಪುರೇಷೆಯ ಮಾಹಿತಿಯನ್ನು 2015ರಲ್ಲಿ ಬಿಡುಗಡೆ ಮಾಡಿದರೂ, ಜಾತಿಗಳ ಕುರಿತಾದ ಮಾಹಿತಿಯನ್ನು ಇನ್ನೂ ಬಿಡುಗಡೆ ಮಾಡಿಲ್ಲ, ಮಾಹಿತಿಯ ಪರಿಮಾಣ ಬಹಳ ದೊಡ್ಡದಿರುವುದರಿಂದ ಸಾಧ್ಯವಾಗಿಲ್ಲ ಎಂಬ ಕಾರಣ ಕೊಡಲಾಗುತ್ತಿದೆ.
- ಮಕ್ಕಳ ಪೋಷಣಾಂಶ ಕುರಿತ ರಾಷ್ಟ್ರೀಯ ಸಮಗ್ರ ಪೋಷಕಾಂಶ ಸರ್ವೆಯ ವಿವಿಧ ವಯೋಗುಂಪಿನ ಮಕ್ಕಳನ್ನು ಕುರಿತಾದ ವರದಿಗಳು ಸಿದ್ಧವಾಗಿವೆ, ಆದರೆ ಬಿಡುಗಡೆ ಮಾಡಿಲ್ಲ.

ಇತ್ತೀಚೆಗೆ ವೆಬ್‌ಸೈಟ್‌ಗಳಲ್ಲಿ ಅದಾಗಲೇ ಹಾಕಿರುವ ಮಾಹಿತಿಗಳೂ ಕಾಣೆಯಾಗುತ್ತಿವೆ ಎಂದೂ ಸಾಳ್ವೆಯವರು ಹೇಳುತ್ತಾರೆ. ಉದಾ: ಸ್ವಚ್ಛಭಾರತ–ಗ್ರಾಮೀಣ ವೆಬ್ ಸೈಟಿನಲ್ಲಿದ್ದ ಖರ್ಚುಗಳು, ಕೈಗಳಿಂದ ಶುಚಿಗೊಳಿಸುವ ಶೌಚಾಲಯಗಳ ಪರಿವರ್ತನೆ, ಶೌಚಾಲಯ ನಿರ್ಮಾಣದ ವಿವಿಧ ಖರ್ಚುಗಳು ಇತ್ಯಾದಿಗಳನ್ನು ಕುರಿತ ಮಾಹಿತಿಗಳು ಈಗ ಲಭ್ಯವಿಲ್ಲವಂತೆ.

ವಾಸ್ತವವಾಗಿ ಈ ರೀತಿ ವರದಿಗಳನ್ನು ಬಿಡುಗಡೆ ಮಾಡಲು ಸರಕಾರ ಹಿಂದೇಟು ಹಾಕುವುದು ಅಥವ ಅವು ಲಭ್ಯವಾಗದಿರುವುದು ಏಕೆ?

ನೋಟುರದ್ದತಿಯ ನಂತರದ ಉದ್ಯೋಗ ಮಾಹಿತಿಗಳನ್ನು ಕುರಿತಂತೆ ಕಾರಣವನ್ನು ಅಂದಾಜು ಮಾಡಬಹುದು, ಪ್ರಧಾನಿಗಳ ಈ ದುಸ್ಸಾಹಸದ ನಿಜಚಿತ್ರ ಅವರಿಗೆ ಮುಜುಗರ ಉಂಟು ಮಾಡುವಂತದ್ದಾಗಿತ್ತು ಎಂಬುದು ಪತ್ರಿಕೆಯೊಂದರಲ್ಲಿ ಪ್ರಕಟವಾದ ಮಾಹಿತಿಯಿಂದ ಬೆಳಕಿಗೆ ಬಂದಿದೆ. ಸರಕಾರ ಇದನ್ನು ನಿರಾಕರಿಸಿಲ್ಲ, ಆದರೆ ಅದು ಕರಡು ಎಂದಿತ್ಯಾದಿ ಅಸಮರ್ಥನೀಯ ಕಾರಣಗಳನ್ನು ಕೊಟ್ಟಿದೆ.

ಬಹುಶಃ ಅದು ಬಿಡುಗಡೆ ಮಾಡದ ಇತರ ವರದಿಗಳ ಬಗ್ಗೆಯೂ ಇದನ್ನೇ ಹೇಳಬಹುದು. ಮಾಹಿತಿಗಳ ಗುಣಮಟ್ಟ ನಿರೀಕ್ಷಿತ ಮಟ್ಟದಲ್ಲಿ ಇಲ್ಲವೆಂದಾದರೆ ಅದನ್ನೂ ಹೇಳಬಹುದಲ್ಲ, ಅದನ್ನು ಬಳಸುವವರು ಅಗತ್ಯ ಸರಿಪಡಿಕೆ ಕ್ರಮಗಳನ್ನು ಕೈಗೊಳ್ಳುತ್ತಾರೆ ಎಂದು ಪರಿಣಿತರು ಹೇಳುತ್ತಾರೆ.

ಈ ಪಟ್ಟಿಗೆ ಇತ್ತೀಚೆಗೆ ಸೇರಿದ ಮೂರು ವರದಿಗಳು ಕಪ್ಪು ಹಣ ಕುರಿತಾದದ್ದು. ಯುಪಿಎ ಸರಕಾರ 2011ರಲ್ಲಿ ರಾಷ್ಟ್ರೀಯ ಸಾರ್ವಜನಿಕ ಹಣಕಾಸು ಮತ್ತು ಧೋರಣೆ ಸಂಸ್ಥೆ(ಎನ್‌ಐಪಿಎಫ್‌ಪಿ), ರಾಷ್ಟ್ರೀಯ ಆನ್ವಯಿಕ ಅರ್ಥಶಾಸ್ತ್ರ ಸಂಶೋಧನಾ ಮಂಡಳಿ(ಎನ್‌ಸಿಎಇಆರ್) ಮತ್ತು ರಾಷ್ಟ್ರೀಯ ಹಣಕಾಸು ನಿರ್ವಹಣೆ ಸಂಸ್ಥೆ(ಎನ್‌ಐಎಫ್‌ಎಂ) ಗೆ ಈ ಕುರಿತಂತೆ ಅಧ್ಯಯನ ಮಾಡಲು ಕೇಳಿತ್ತು. ಈ ಅಧ್ಯಯನಗಳ ವರದಿಗಳು 2013–2014ರಲಿ ಸರಕಾರದ ಕೈಸೇರಿವೆ ಎಂದು ಆರ್‌ಟಿಐ ಮಾಹಿತಿಗಳಿಂದ ತಿಳಿದು ಬಂದಿದೆ. ಆದರೆ ಹಣಕಾಸು ಮಂತ್ರಾಲಯ ಇದನ್ನು ಪ್ರಕಟಿಸಲು ನಿರಾಕರಿಸುತ್ತಿದೆ. ವರದಿ ಕೈಸೇರಿ ನಾಲ್ಕು ವರ್ಷಗಳು ದಾಟಿದರೂ ಇನ್ನೂ ಇದನ್ನು ಸಂಸದೀಯ ಸಮಿತಿಗಳು ಪರಿಶೀಲಿಸುತ್ತಿವೆ ಎಂದೇ ಹೇಳಲಾಗುತ್ತಿದೆ. ಅಂದರೆ ಭಾರತದಲ್ಲಿ ಅಥವ ವಿದೇಶಗಳಲ್ಲಿ ಇರುವ ಕಪ್ಪುಹಣದ ಪ್ರಮಾಣ ಎಷ್ಟು ಎಂಬುದರ ಅಧಿಕೃತ ಮಾಹಿತಿ ಲಭ್ಯವಿರದಿದ್ದರೂ ನೊಟುರದ್ಧತಿಯ ವಿನಾಶಕಾರಿ ಕ್ರಮ , ಮತ್ತು ಅದಕ್ಕೆ ಮೊದಲು ಪ್ರತಿಯೊಬ್ಬರ ಖಾತೆಗೆ 15ಲಕ್ಷ ರೂ. ತರುವ ಆಶ್ವಾಸನೆಗೆ ಆಧಾರಗಳೇನು ಎಂಬುದನ್ನು ರಹಸ್ಯವಾಗಿಯೇ ಇಡಲಾಗಿದೆ. ಯಾರ ಪ್ರೀತ್ಯರ್ಥವೋ ಗೊತ್ತಿಲ್ಲ. ○

ಸೈನಿಕರಿಗೆ ಟಿಎ ಡಿಎ ಕೊಡಲು ಹಣವಿಲ್ಲ!

ಫೆಬ್ರುವರಿ 4ರಂದು ಪ್ರಧಾನ ರಕ್ಷಣಾ ಅಕೌಂಟುಗಳ ನಿಯಂತ್ರಕ(ಪಿಸಿಡಿಎ) ವೆಬ್ ಸೈಟಿನಲ್ಲಿ ಹಾಕಿದ ನೋಟೀಸ್ ಹಾಗಂದಿತ್ತು. "ಸೇನಾ ಅಧಿಕಾರಿಗಳ ತಾತ್ಕಾಲಿಕ ಡ್ಯೂಟಿ ಮತ್ತು ಖಾಯಂ ಡ್ಯೂಟಿ ಬಾಬ್ತುಗಳಲ್ಲಿ ಸಾಕಷ್ಟ ಹಣ ಲಭ್ಯವಾಗಿಲ್ಲವಾದ್ದರಿಂದ ಸಂಬಂಧಪಟ್ಟ ಬಾಬ್ತುಗಳಲ್ಲಿ ಸಾಕಷ್ಟು ಹಣ ಬರುವ ವರೆಗೆ ಟಿಎ/ಡಿಎ ಅಡ್ವಾನ್ಸ್‌ಗಳು, ಪಾವತಿಗಳನ್ನು ಕೊಡಲಾಗುವುದಿಲ್ಲ" ಎಂದು ಅದು ಹೇಳಿತ್ತು. ಆ ನೋಟೀಸ್ ಫೆಬ್ರುವರಿ 5ರಂದು ಮಾಯವಾಗಿದೆಯಂತೆ.

ಇದು ಕ್ಷಣಿಕ ಸಮಸ್ಯೆ, ಇದನ್ನು ಸುಮ್ಮನೇ ದೊಡ್ಡದು ಮಾಡಲಾಗಿದೆ ಎಂದು ರಕ್ಷಣಾ ಮಂತ್ರಾಲಯ ನಂತರ ಹೇಳಿಕೆ ನೀಡಿದೆ.

ಆದರೆ ಸಮಸ್ಯೆ ಅದು ಹೇಳುವಷ್ಟು ಸರಳವಾಗಿಲ್ಲ ಎನ್ನಲಾಗಿದೆ. ಹಣದ ಕೊರತೆಯಿಂದಾಗಿ ಹಲವು ಮಿಲಿಟರಿ ಮೂಲರಚನೆ ಯೋಜನೆಗಳು ನಿಂತು ಹೋಗಿವೆ, ಇಲ್ಲವೇ ನಿಧಾನಗೊಂಡಿವೆಯಂತೆ. ಇತ್ತೀಚಿನ ಮಧ್ಯಂತರ ಬಜೆಟ್ ರಕ್ಷಣಾ ಬಾಬ್ತಿಗೆ 10% ಹೆಚ್ಚು ಮೊತ್ತ ನೀಡಿರುವುದಾಗಿಯೂ, ಈ ಬಜೆಟ್ ಮೊತ್ತ 3ಲಕ್ಷ ಕೋಟಿ ರೂ.ದಾಟಿದೆ ಎಂದೂ ಹೇಳಿತ್ತು.



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

‘ಸಾರ್ವತ್ರಿಕ ಮೂಲ ವರಮಾನ’ ಎಂಬ ಪ್ರಸ್ತಾಪದ ನಿಜ ಹೂರಣವೇನು?



ಹಣಕಾಸು ವಿಷಯಗಳಗೆ ಮೀಸಲಾದ, ದೊಡ್ಡ ಬಂಡವಳಗರ ಹಿತ ಕಾಯುವ ಪತ್ರಿಕೆಗಳು ಮತ್ತು ವಿಶ್ವ ಬ್ಯಾಂಕಿನ ಇಂದಿನ ಮತ್ತು ಹಿಂದಿನ ಅಧಿಕಾರಿಗಳು “ಕನಿಷ್ಠ ವರಮಾನ ಯೋಜನೆ”ಯನ್ನು ಅತಿ ಉತ್ಸಾಹದಿಂದ ಬೆಂಬಲಿಸುವ ಸಂಗತಿ ಗಮನಾರ್ಹವಾಗಿದೆ. ಈಗಿರುವ ಸಬ್ಸಿಡಿ ಮತ್ತು ಕಲ್ಯಾಣ ಕಾರ್ಯಕ್ರಮಗಳ ಜೊತೆಯಲ್ಲಿ ಮತ್ತೊಂದು ಹೆಚ್ಚಿನ ಯೋಜನೆಯಾಗಿ ಈ ವರಮಾನ ಬೆಂಬಲ ಯೋಜನೆ ಬರುತ್ತಿಲ್ಲ, ಬದಲಾಗಿ ಅವುಗಳ ಸ್ಥಾನದಲ್ಲಿ ಈ ಯೋಜನೆ ಬರುತ್ತಿದೆ ಎಂಬುದನ್ನೇ ಇದು ಸೂಚಿಸುತ್ತದೆ. ಅಂದರೆ ಬಡತನ ನಿರ್ಮೂಲನೆಯ ಕಾರ್ಯವನ್ನು ಬುಡಮೇಲು ಮಾಡುವುದೇ ಅಲ್ಲದೆ ಪ್ರಭುತ್ವವು ಜನತೆಗೆ ಅಗತ್ಯ ಸರಕು ಸೇವೆಗಳನ್ನು ಒದಗಿಸುವ ಹೊಣೆಯಿಂದ ತಪ್ಪಿಸಿಕೊಳ್ಳಲು ಅವಕಾಶವಾಗುವ ಒಂದು ಯೋಜನೆಯಷ್ಟೇ. ಅಂದರೆ, ಬಡವರಿಗೆ ಸಿಗುವ ಈ ಸಹಾಯ ಇನ್ನಷ್ಟು ಬಡತನದಲ್ಲಿರುವವರ ಲೆಕ್ಕದಲ್ಲಿ ಬರುತ್ತದೆ,ಶ್ರೀಮಂತರ ಲೆಕ್ಕದಲ್ಲಿ ಅಲ್ಲ.....

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಬಡ ಜನರಿಗೆ ಒಂದು ವರಮಾನ ಖಾತ್ರಿ ಯೋಜನೆಯನ್ನು ಜಾರಿಗೆ ತರುವ “ಚಾರಿತ್ರಿಕ ನಿರ್ಧಾರ”ವನ್ನು ತಮ್ಮ ಪಕ್ಷ ತೆಗೆದುಕೊಂಡಿದೆ ಎಂದು ರಾಹುಲ್ ಗಾಂಧಿ ಇತ್ತೀಚೆಗೆ ಹೇಳಿದ್ದಾರೆ. ಮೋದಿ ಸರ್ಕಾರವು ತನ್ನ ಕೊನೆಯ ಬಜೆಟ್‌ನಲ್ಲಿ ಬಡ ರೈತರಿಗೆ ವರಮಾನ ಬೆಂಬಲ ಯೋಜನೆಯನ್ನು ಪ್ರಕಟಿಸಬಹುದು ಎಂಬ ನಿರೀಕ್ಷೆ ಬಹಳ ಮಂದಿಯಲ್ಲಿತ್ತು. ಹಾಗಾಗಿ, “ಸಾರ್ವತ್ರಿಕ ಕನಿಷ್ಠ ವರಮಾನ” ಯೋಜನೆಯ ವಿಚಾರ ಈಗ ಮತ್ತೊಮ್ಮೆ ಗರಿಗೆದರಿದೆ. ಇದೇ ವಿಚಾರವನ್ನು ಎರಡು ವರ್ಷಗಳ ಹಿಂದೆ, ಬಜೆಟ್‌ಗೆ ಮೊದಲು ಪಾರ್ಲಿಮೆಂಟಿನಲ್ಲಿ ಮಂಡಿಸಿದ ಭಾರತ ಸರ್ಕಾರದ ಆರ್ಥಿಕ ಸಮೀಕ್ಷೆಯಲ್ಲಿ ಪ್ರಸ್ತಾಪಿಸಲಾಗಿತ್ತು. ಇದು ವಿಶ್ವ ಬ್ಯಾಂಕಿನ ಹಳೆಯ ಸಲಹೆ. ಆದಾಗ್ಯೂ, ಇದು ಸರ್ಕಾರದ ಅಭಿಪ್ರಾಯವಲ್ಲ, ಕೇವಲ ಚರ್ಚೆಗಾಗಿ ಈ ವಿಷಯವನ್ನು ಪ್ರಸ್ತಾಪಿಸಲಾಗಿದೆ ಎಂದು ಸರ್ಕಾರದ ಪ್ರಧಾನ ಆರ್ಥಿಕ ಸಲಹೆಗಾರರು ಆಗ ಸಮಜಾಯಷಿ ಕೊಟ್ಟಿದ್ದರು.

ನಾವು ಒಂದು ಭಿನ್ನತೆಯೊಂದಿಗೆ ಈ ವಿಷಯವನ್ನು ಆರಂಭಿಸೋಣ. “ಸಾರ್ವತ್ರಿಕ ಕನಿಷ್ಠ ವರಮಾನ” ಎಂಬುದನ್ನು ಬಹಳ ಸಡಿಲವಾದ ಅರ್ಥದಲ್ಲಿ ಪ್ರಚುರಪಡಿಸಲಾಗಿದೆ. ಆ ಪ್ರಸ್ತಾಪ ಸಾಮಾನ್ಯವಾಗಿ ಹೇಳುವುದು, ಅತಿ ಕಡಿಮೆ ವರಮಾನ ಇರುವವರೆಂದು ಗುರುತಿಸಿದ ಜನರಿಗೆ ಅವರ ವರಮಾನದ ಜೊತೆಗೆ ಮತ್ತೊಂದಿಷ್ಟು ಹಣವನ್ನು ಸೇರಿಸುವ ಮೂಲಕ ಅವರನ್ನು ಒಂದು ಕನಿಷ್ಠ ವರಮಾನದ ಮಟ್ಟಕ್ಕೆ ತರುವ ಕ್ರಮ ಎಂಬ ಅರ್ಥದಲ್ಲಿ. ಅದನ್ನು ‘ಗುರಿಪ್ರೇರಿತ ಟಾಪ್–ಅಪ್ ಸ್ಕೀಮ್’ ಎನ್ನುವುದೇ ಸರಿಯಾದೀತು. ಆರ್ಥಿಕ ಸಮೀಕ್ಷೆಯ ಉದ್ದೇಶಿತ ಚರ್ಚೆ ಮತ್ತು ರಾಹುಲ್ ಗಾಂಧಿಯವರ ಇತ್ತೀಚಿನ ಪ್ರಸ್ತಾಪ, ಈ ಎರಡರಲ್ಲಿಯೂ ಇದೇ ಅರ್ಥವ್ಯಾಪ್ತಿ ಇದೆ. ಎಲ್ಲರಿಗೂ ಒಂದು ಮೂಲ ವರಮಾನ ಲಭ್ಯಗೊಳಿಸಬೇಕು ಎಂದೇನಲ್ಲ.

ಆದರೂ, ಮೇಲ್ನೋಟದಲ್ಲಿ ಇದೂ ಒಂದು ಸ್ವಾಗತಾರ್ಹ ಕ್ರಮ ಎನಿಸಿದರೂ ಸಹ ಈ ಪ್ರಸ್ತಾಪವು ಅಪಾಯಗಳಿಂದ ಕೂಡಿದೆ. ಹಾಗಾಗಿ, ಈ ಸಂದರ್ಭದಲ್ಲಿ ಕೇಳಲೇ ಬೇಕಾದ ಪ್ರಶ್ನೆ ಎಂದರೆ, ಜಾರಿಯಲ್ಲಿರುವ ಸಬ್ಸಿಡಿ ಮತ್ತು ಕಲ್ಯಾಣ ಕಾರ್ಯಕ್ರಮಗಳ ಜೊತೆಗೆ ಈ ಯೋಜನೆ ಅಧಿಕವಾಗಿ ಸೇರ್ಪಡೆಯಾಗುತ್ತದೆಯೇ ಅಥವಾ ಹಾಲಿ ಸಬ್ಸಿಡಿ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗೆ ಬದಲಾಗಿ ಈ ಯೋಜನೆ ಬರುತ್ತಿದೆಯೇ ಎಂಬುದು. ಈ ಬಗ್ಗೆ ಬಂದಿರುವ ಹೆಚ್ಚಿನ ಸಲಹೆ ಸೂಚನೆಗಳಲ್ಲಿ ಇಂಗಿತವಾಗಿರುವ ನಿರೀಕ್ಷೆ ಎಂದರೆ, ಹಾಲಿ ಸಬ್ಸಿಡಿ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗೆ ಬದಲಾಗಿ ಈ ಯೋಜನೆ ಬರುತ್ತಿದೆ ಎಂಬುದು. ಬದಲಿಯಾಗಿ ಬಂದ ಪಕ್ಷದಲ್ಲಿ, ಮೇಲ್ನೋಟದಲ್ಲಿ ಖಾತ್ರಿಯಾಗಿ ಕಂಡ ವರಮಾನ, ವಾಸ್ತವವಾಗಿ, ಖಾತ್ರಿಯಾಗಿ ಉಳಿಯುವುದಿಲ್ಲ. ಈಗಿರುವ ಬೆಲೆಗಳ ಮಟ್ಟದಲ್ಲಿ ಮತ್ತು ಸಬ್ಸಿಡಿ ಬೆಲೆಗಳನ್ನು ಆಧರಿಸಿ ಲೆಕ್ಕ ಹಾಕಿ ಕೊಡುವ ಬೆಂಬಲ ವರಮಾನವು ಅದೇ ಸಬ್ಸಿಡಿಗಳನ್ನು ಹಿಂಪಡೆದ ನಂತರ ಸಾಕಾಗುವುದಿಲ್ಲ. ಒಂದು ವೇಳೆ, ಹಿಂಪಡೆದ ಸಬ್ಸಿಡಿಗಳ ಮೌಲ್ಯವನ್ನು ಸೇರಿಸಿಕೊಂಡು ಲೆಕ್ಕ ಹಾಕಿದ ಬೆಂಬಲ ವರಮಾನವೂ ಸಹ, ಸರಕುಗಳು ಮತ್ತು ಸೇವೆಗಳ ಪೂರೈಕೆ ಖಾತ್ರಿ ಇಲ್ಲದ ಪರಿಸ್ಥಿತಿಯಲ್ಲಿ ಸಾಕಾಗುವುದಿಲ್ಲ.

ಉದಾಹರಣೆಗಾಗಿ ಮತ್ತೊಂದು ಚಿತ್ರಣವನ್ನು ನೋಡೋಣ. ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ನಿಲ್ಲಿಸಲಾಗಿದೆ ಮತ್ತು ಪ್ರತಿಯೊಬ್ಬರೂ ಮಾರುಕಟ್ಟೆ ದರದಲ್ಲಿ ದವಸ ಧಾನ್ಯಗಳನ್ನು ಕೊಳ್ಳುತ್ತಾರೆ ಎಂದೆಣಿಸಿಕೊಂಡು ಲೆಕ್ಕ ಹಾಕಿದ ಬೆಂಬಲ ವರಮಾನವೂ ಸಾಕಾಗುವುದಿಲ್ಲ, ಆಹಾರ ಧಾನ್ಯಗಳು ಜನರಿಗೆ ವಾಸ್ತವವಾಗಿ ತಲುಪದಿದ್ದ ಪಕ್ಷದಲ್ಲಿ. ಅಂದರೆ, ಸಾರ್ವಜನಿಕ ಪಡಿತರ ವ್ಯವಸ್ಥೆಯು ಕೆಲವೇ ಮಂದಿಗೆ ಕಡಿಮೆ ದರದಲ್ಲಿ ಆಹಾರ ಧಾನ್ಯಗಳನ್ನು ಒದಗಿಸುವುದಷ್ಟೇ ಅಲ್ಲ, ವಾಸ್ತವವಾಗಿ ಅನೇಕ ಮಂದಿಗೆ ಆಹಾರ ಧಾನ್ಯಗಳು ಲಭ್ಯವಾಗುವಂತೆ ನೋಡಿಕೊಳ್ಳುತ್ತದೆ. ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ಹಿಂತೆಗೆದುಕೊಂಡಾಗ ಜನರಿಗೆ ಆಹಾರದ ಭದ್ರತೆ ಇಲ್ಲವಾಗುತ್ತದೆ. ಆಗ, ನಗದು ರೂಪದಲ್ಲಿ ಬರುವ ಬೆಂಬಲ ವರಮಾನದಿಂದ ಸಾಕಾಗುವಷ್ಟು ಆಹಾರ ಧಾನ್ಯಗಳನ್ನು ಕೊಳ್ಳಲಾಗುವುದಿಲ್ಲ.

ವಸ್ತು ರೂಪದಲ್ಲಿ ನೆರವು ಒದಗಿಸುವುದರ ಬದಲು ಅದನ್ನೇ ನಗದು ರೂಪದಲ್ಲಿ ಕೊಡಬಹುದೆಂದು ಸಮರ್ಥಿಸುವ ಕ್ರಮವು, ಉದಾಹರಣೆಗೆ, ಒಂದು ಮಗುವಿಗೆ ಮಧ್ಯಾಹ್ನದ ಬಿಸಿ ಊಟ ಕೊಡುವ ಬದಲು ಅದಕ್ಕೆ ತಗಲುವ ಖರ್ಚನ್ನು ಆ ಮಗುವಿನ ತಂದೆ–ತಾಯಿಗೆ ನಗದು ರೂಪದಲ್ಲಿ ಕೊಡುವ ಕ್ರಮವು, ಬಹುಮಟ್ಟಿಗೆ ತಪ್ಪಾಗುತ್ತದೆ. ಏಕೆಂದರೆ, ಮಧ್ಯಾಹ್ನದ ಬಿಸಿ ಊಟ ಯೋಜನೆಯು ಕೇವಲ ಹಸಿವನ್ನು ನೀಗಿಸುವುದಷ್ಟೇ ಅಲ್ಲ, ಅದರ ಜೊತೆಯಲ್ಲಿ ಅಗತ್ಯವಾದ ಪೌಷ್ಠಿಕತೆ ಒದಗಿಸುತ್ತದೆ ಮತ್ತು ಮಕ್ಕಳ ನಡುವೆ ಸಾಮಾಜಿಕ ವಿಂಗಡಣೆಯನ್ನು ಮೀರುವಂತಹ ಅನೇಕ ಉದ್ದೇಶಗಳನ್ನು ಈಡೇರಿಸುತ್ತದೆ. ಆದ್ದರಿಂದ, ಮಧ್ಯಾಹ್ನದ ಬಿಸಿ ಊಟದ ಖರ್ಚನ್ನು ಮಗುವಿನ ತಂದೆ–ತಾಯಿಗೆ ನಗದು ರೂಪದಲ್ಲಿ ಕೊಟ್ಟಾಗ ಇಂತಹ ಅನೇಕ ಉದ್ದೇಶಗಳನ್ನು ಈಡೇರಿಸಲಾಗದು. ಹಾಗಾಗಿ, ಹಾಲಿ ಸಬ್ಸಿಡಿ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗೆ ಬದಲಾಗಿ ವರಮಾನ ಬೆಂಬಲ ಯೋಜನೆ ಜಾರಿಗೆ ಬರುವುದಾದರೆ, ಅದು ಸಂಪೂರ್ಣವಾಗಿ ಅನಪೇಕ್ಷಣೀಯ. (ಸಂಪನ್ಮೂಲ ಕೊರತೆಯ ನೆಪದಲ್ಲಿ ಇದು ಘಟಿಸುವ ಅಪಾಯವೇ ಹೆಚ್ಚು). ವರಮಾನ ಬೆಂಬಲ ಯೋಜನೆಯು ಅರ್ಥಪೂರ್ಣವಾಗಿರಬೇಕು ಎಂದಾದರೆ, ಹಾಲಿ ಸಬ್ಸಿಡಿ ಮತ್ತು ಕಲ್ಯಾಣ ಕಾರ್ಯಕ್ರಮಗಳ ಜೊತೆಯಲ್ಲಿ ವರಮಾನ ಬೆಂಬಲ ಯೋಜನೆಯನ್ನು ಅಧಿಕವಾಗಿ ಸೇರಿಸಬೇಕು.

ಅದೇ ರೀತಿಯಲ್ಲಿ ರೈತರ ಬೆಳೆಗಳಿಗೆ ಕೊಡುವ ಕನಿಷ್ಠ ಬೆಂಬಲ ಬೆಲೆಗಳ ಬದಲಾಗಿ ವರಮಾನ ಬೆಂಬಲ ಒದಗಿಸುವ ಪ್ರಸ್ತಾಪವು ಆಗಾಗ ಚರ್ಚೆಯಾಗುತ್ತದೆ. ಇದೇನಾದರೂ ಜಾರಿಯಾದ ಪಕ್ಷದಲ್ಲಿ, ರೈತರಿಗೆ ವರಮಾನ ಬೆಂಬಲ ಸಿಗುವ ಬದಲು, ಈಗ ಕೊಡುತ್ತಿರುವ ಚೂರು ಪಾರು ಬೆಂಬಲವನ್ನೂ ಹಿಂಪಡೆದಂತಾಗುತ್ತದೆ. ಅಂದರೆ, ರೈತರಿಗೆ ಒಂದಿಷ್ಟು ಹಣ ಕೊಟ್ಟು ಸರ್ಕಾರ ಕೈತೊಳೆದುಕೊಳ್ಳುತ್ತದೆ ಮತ್ತು ರೈತರು ಮಾರುಕಟ್ಟೆಯ ಬೆಲೆ ಏರಿಳಿತಗಳಿಗೆ ಶರಣಾಗುತ್ತಾರೆ.

ಆಗಿಂದಾಗ್ಯೆ ಸಬ್ಸಿಡಿಗಳ ನಡುವೆ “ಅರ್ಹ” ಮತ್ತು “ಅನರ್ಹ” ಎಂಬ ವ್ಯತ್ಯಾಸವನ್ನು ಗುರುತಿಸಿ, “ಅನರ್ಹ” ಸಬ್ಸಿಡಿಗಳನ್ನು ನಿಲ್ಲಿಸುವ ಮೂಲಕ ವರವಾನ ಬೆಂಬಲ ಯೋಜನೆಗಳಿಗೆ ಹಣ ಹೊಂದಿಸಿಕೊಳ್ಳಬಹುದು ಎನ್ನುವ ಸೂಚನೆಗಳು ಹರಿದಾಡುತ್ತವೆ. ಆದರೆ, “ಅನರ್ಹ” ಎಂದು ಭಾವಿಸಿದ ಸಬ್ಸಿಡಿಗಳು ಮತ್ತೆ ಕಡಿತಗೊಳಿಸಲಾಗದಷ್ಟು ಮಟ್ಟದಲ್ಲಿ ಕಡಿತಗೊಂಡಿರುವುದರಿಂದ ಈ ಮೂಲಕವಾಗಿ ವರಮಾನ ಬೆಂಬಲ ಯೋಜನೆಗೆ ಸಾಕಾಗುವ ಹಣ ಹೊಂದಿಸಿಕೊಳ್ಳುವುದು ಸಾಧ್ಯವಿಲ್ಲ ಎಂದು ಅನೇಕ ಮಂದಿ ಅಭಿಪ್ರಾಯಪಟ್ಟಿದ್ದಾರೆ. ಅದೂ ಅಲ್ಲದೆ, ಬಹಳ ಮುಖ್ಯವಾಗಿ ಸಬ್ಸಿಡಿಗಳಲ್ಲಿ ಇದು “ಅರ್ಹ” ಇದು “ಅನರ್ಹ” ಎಂದು ವರ್ಗೀಕರಿಸುವು ಕೆಲಸವೂ ಸಮಸ್ಯಾತ್ಮಕವಾದದ್ದೇ.

ಉದಾಹರಣೆಗೆ, ರಸ ಗೊಬ್ಬರದ ಮೇಲಿನ ಸಬ್ಸಿಡಿಯನ್ನು ಅನರ್ಹ ಎಂದು ಹಲವು ಬಾರಿ ಹೇಳಲಾಗಿದೆ. ಒಂದು ವೇಳೆ, ರಸ ಗೊಬ್ಬರದ ಮೇಲಿನ ಸಬ್ಸಿಡಿಯನ್ನು ಕಡಿತ ಮಾಡಿದರೆ ಅದರಿಂದಾಗಿ ಬೆಳೆಗಾರರ ಉತ್ಪಾದನಾ ವೆಚ್ಚ ಹೆಚ್ಚುತ್ತದೆ. ಅದರಿಂದಾಗಿ ಪಡಿತರ ಧಾನ್ಯಗಳ ಕೊಳ್ಳುವ ಬೆಲೆಗಳನ್ನು ಹೆಚ್ಚಿಸಬೇಕಾಗುತ್ತದೆ. ಅದರಿಂದಾಗಿ ಪಡಿತರ ಧಾನ್ಯಗಳ ನೀಡಿಕೆ ಬೆಲೆಗಳನ್ನು ಹೆಚ್ಚಿಸಬೇಕಾಗುತ್ತದೆ. ಹಾಗಾಗಿ, ಗೊಬ್ಬರದ ಸಬ್ಸಿಡಿಯನ್ನು ಅನರ್ಹ ಎಂದು ಪರಿಗಣಿಸಿ ಅದನ್ನು ಕಡಿತ ಮಾಡಿದಾಗ ಅದರ ಪರಿಣಾಮ ಬಡವರನ್ನು ತಟ್ಟುತ್ತದೆ. ಇನ್ನೊಂದು ಕಡೆಯಲ್ಲಿ, ಪಡಿತರ ಧಾನ್ಯಗಳ ನೀಡಿಕೆ ಬೆಲೆಗಳನ್ನು ಏರಿಸುವ ಬದಲು ಆಹಾರ ಸಬ್ಸಿಡಿಯನ್ನು ಹೆಚ್ಚಿಸಿದರೆ, ಒಂದು ಸಬ್ಸಿಡಿಯನ್ನು ಕಡಿತ ಮಾಡಿ ಇನ್ನೊಂದು ಸಬ್ಸಿಡಿಯನ್ನು ಹೆಚ್ಚಿಸಿದಂತಾಗುತ್ತದೆ. ಹಾಗಾಗಿ, ಸಬ್ಸಿಡಿಗಳ ನಡುವೆ “ಅರ್ಹ” ಮತ್ತು “ಅನರ್ಹ” ಎಂದು ಗುರುತಿಸುವುದು ಮತ್ತು ಅದರಲ್ಲಿ “ಅನರ್ಹ” ಎಂದು ಭಾವಿಸಿದ ಸಬ್ಸಿಡಿಗಳನ್ನು ನಿರ್ಭೀತಿಯಿಂದ ಕಡಿತ ಮಾಡುವುದು ಮೇಲ್ನೋಟದಲ್ಲಿ ಕಾಣುವಷ್ಟು ಸುಲಭವೂ ಅಲ್ಲ, ಸಾಧುವೂ ಅಲ್ಲ.

ಬಡವರಿಗೆ ಪ್ರಯೋಜನವಾಗುವ ಸಬ್ಸಿಡಿಗಳು ಮತ್ತು ಕಲ್ಯಾಣ ಕಾರ್ಯಕ್ರಮಗಳನ್ನು ಕಡಿತ ಮಾಡದೆ ಅವರಿಗೆ ವರಮಾನ ಬೆಂಬಲ ಕೊಡುವುದಾದರೆ, ಅಧಿಕ ತೆರಿಗೆಗಳನ್ನು ವಿಧಿಸಬೇಕಾಗುತ್ತದೆ. (ಕಲ್ಯಾಣ ಕಾರ್ಯಕ್ರಮಗಳಲ್ಲದ ರಕ್ಷಣೆ ಮುಂತಾದ ಖರ್ಚುಗಳನ್ನು ಕಡಿತಗೊಳಿಸದ ಹೊರತು). ಬಡವರಿಗೆ ವರಮಾನ ಬೆಂಬಲವಾಗಿ ಒಂದು ಕೈಯಲ್ಲಿ ಕೊಟ್ಟದ್ದನ್ನು ಬಡವರನ್ನೇ ಹೆಚ್ಚಾಗಿ ತಟ್ಟುವ ಜಿಎಸ್‌ಟಿಯಂತಹ ಪರೋಕ್ಷ ತೆರಿಗೆಗಳ ಮೂಲಕ ಇನ್ನೊಂದು ಕೈಯಲ್ಲಿ ಕಿತ್ತುಕೊಳ್ಳಬಾರದು ಎಂದಾದರೆ, ವರಮಾನ ಬೆಂಬಲ ಕೊಡುವ ಉದ್ದೇಶಕ್ಕಾಗಿ ವರಮಾನ ತೆರಿಗೆ, ಸಂಪತ್ತು ತೆರಿಗೆ ಮತ್ತು ಷೇರು ಗಳಿಕೆಯ ಮೇಲಿನ ತೆರಿಗೆ ಮುಂತಾದ ನೇರ ತೆರಿಗೆಗಳ ಮೂಲಕ ಹಣ ಹೊಂದಿಸಿಕೊಳ್ಳಬೇಕಾಗುತ್ತದೆ. ಯಾವುದೇ ನೇರ ತೆರಿಗೆ ಹೆಚ್ಚಿಸುವ ಕ್ರಮವನ್ನು ಜಾಗತೀಕರಣಗೊಂಡ ಹಣಕಾಸು ಬಂಡವಾಳ ಮತ್ತು ದೇಶದ ದೊಡ್ಡ ಬಂಡವಾಳಿಗರು ವಿರೋಧಿಸುತ್ತಾರೆ. ಹಾಗಾಗಿ, ಇಂತಹ ಬಲಶಾಲಿಗಳ ನಿಲುವನ್ನು ಧಿಕ್ಕರಿಸುವ ಧೈರ್ಯವಿಲ್ಲದ ಯಾವುದೇ ಸರ್ಕಾರವು ಒಂದು ಅಪ್ಪಟ ವರಮಾನ ಬೆಂಬಲ ಕೊಡಲಾರದು.

ಈ ಸಂದರ್ಭದಲ್ಲಿ, ಹಣಕಾಸು ವಿಷಯಗಳಿಗೆ ಮೀಸಲಾದ, ದೊಡ್ಡ ಬಂಡವಳಿಗರ ಹಿತ ಕಾಯುವ ಪತ್ರಿಕೆಗಳು ಮತ್ತು ವಿಶ್ವ ಬ್ಯಾಂಕಿನ ಇಂದಿನ ಮತ್ತು ಹಿಂದಿನ ಅಧಿಕಾರಿಗಳು “ಕನಿಷ್ಠ ವರವಾನ ಯೋಜನೆ”ಯನ್ನು ಅತಿ ಉತ್ಸಾಹದಿಂದ ಬೆಂಬಲಿಸುವ ಸಂಗತಿ ಗಮನಾರ್ಹವಾಗಿದೆ. ಇದು ಏನನ್ನು ಸೂಚಿಸುತ್ತದೆ? ಈಗಿರುವ ಸಬ್ಸಿಡಿ ಮತ್ತು ಕಲ್ಯಾಣ ಕಾರ್ಯಕ್ರಮಗಳ ಜೊತೆಯಲ್ಲಿ ಮತ್ತೊಂದು ಹೆಚ್ಚಿನ ಯೋಜನೆಯಾಗಿ ವರಮಾನ ಬೆಂಬಲ ಯೋಜನೆ ಬರುತ್ತಿಲ್ಲ, ಅವುಗಳ ಸ್ಥಾನದಲ್ಲಿ ಈ ಯೋಜನೆ ಬರುತ್ತಿದೆ ಎಂಬುದನ್ನೇ ಇದು ಸೂಚಿಸುತ್ತದೆ. ಈಗಿರುವ ಸಬ್ಸಿಡಿ ಮತ್ತು ಕಲ್ಯಾಣ ಕಾರ್ಯಕ್ರಮಗಳ ಸ್ಥಾನದಲ್ಲಿ ಬರುವ ವರಮಾನ ಬೆಂಬಲ ಯೋಜನೆಯು ಬಡತನ ನಿರ್ಮೂಲನೆಯ ಕಾರ್ಯವನ್ನು ಬುಡಮೇಲು ಮಾಡುವುದೇ ಅಲ್ಲದೆ ಪ್ರಭುತ್ವವು ಜನತೆಗೆ ಅಗತ್ಯ ಸರಕು ಸೇವೆಗಳನ್ನು ಒದಗಿಸುವ ಕಾರ್ಯದಿಂದ ತಪ್ಪಿಸಿಕೊಂಡಂತಾಗುತ್ತದೆ. ಹೆಚ್ಚೆಂದರೆ, ಬಡವರಿಗೆ ಸಿಗುವ ಈ ಸಹಾಯ ಶ್ರೀಮಂತರ ಲೆಕ್ಕದಲ್ಲಿ ಬರುವುದಿಲ್ಲ; ಇನ್ನಷ್ಟು ಬಡತನದಲ್ಲಿರುವವರ ಲೆಕ್ಕದಲ್ಲಿ ಬರುತ್ತದೆ. ಆದ್ದರಿಂದ, ವರಮಾನ ಬೆಂಬಲ ಯೋಜನೆಯು, ತೋರಿಕೆಗೆ ವ್ಯತಿರಿಕ್ತವಾಗಿ, ನವ ಉದಾರವಾದದ ದಿಕ್ಕಿನಲ್ಲಿ ಸಾಗುತ್ತದೆ. ಒಂದಿಷ್ಟು ಹಣವನ್ನು ಬಡವರಿಗೆ ಕೊಟ್ಟು ಪ್ರಭುತ್ವವು ಕೈ ತೊಳೆದುಕೊಳ್ಳುತ್ತದೆ, ಸ್ವಲ್ಪ ಸಮಯದ ಬಳಿಕ ಆ ಹಣದ ನಿಜ ಮೌಲ್ಯ ಕುಗ್ಗುತ್ತದೆ.

ವರಮಾನ ಬೆಂಬಲದ ಪರವಾಗಿ ಮಂಡಿಸುವ ಸೈದ್ಧಾಂತಿಕ ವಾದಗಳು, ಸಧ್ಯದ ಸನ್ನಿವೇಶದಲ್ಲಿ ಎಲ್ಲರಿಗೂ ಉದ್ಯೋಗ ಒದಗಿಸುವ ಸಂಭವವಿಲ್ಲ ಎನ್ನುವ ಪ್ರತಿಪಾದನೆಯ ಮೇಲೆ ನಿಂತಿವೆ. ಉತ್ಪಾದನಾ ವಿಧಾನ ಯಾವ ರೀತಿಯದು ಎಂಬುದನ್ನು ಗಣನೆಗೆ ತೆಗೆದುಕೊಳ್ಳದೆ, ವರಮಾನ ಬೆಂಬಲದ ಪ್ರಸ್ತಾಪವು ಒಂದು ಸಾರ್ವತ್ರಿಕ ಸಮಂಜಸತೆ ಹೊಂದಿದೆ ಎಂದು ಪ್ರತಿಪಾದಿಸಲಾಗುತ್ತಿದೆ. ನವ ಉದಾರ ಬಂಡವಾಳಶಾಹಿಯ ಮಟ್ಟಿಗಂತೂ ಅದು ನಿಜ. ಎಲ್ಲರಿಗೂ ಉದ್ಯೋಗ ಒದಗುವ ಸಂಭವವಿಲ್ಲ ಎಂಬ ಪ್ರತಿಪಾದನೆಯನ್ನು ಈಗ ನಿಜವೆಂದೇ ಒಪ್ಪಿಕೊಳ್ಳೋಣ. ಆಗ, ಪ್ರಭುತ್ವವು ಶ್ರಮಿಕ–ಪಡೆಗೆ ಅವರು ಉದ್ಯೋಗದಲ್ಲಿ ತೊಡಗಿದ್ದರೆ ಸಂಪಾದಿಸುತ್ತಿದ್ದ ಕೂಲಿಯ ಪ್ರತಿಯಾಗಿ ಒಂದು ವರಮಾನ ಪಾವತಿಸಬೇಕು. ಉದ್ಯೋಗದ ಹಕ್ಕು ಅವರ ಕೆಲವು ಆರ್ಥಿಕ ಹಕ್ಕುಗಳಲ್ಲಿ ಒಂದು ಮಾತ್ರ. ಆದ್ದರಿಂದ, ಅವರ ಉದ್ಯೋಗದ ಹಕ್ಕಿನ ಜೊತೆಯಲ್ಲಿ ಅವರ ಉಳಿದ ಆರ್ಥಿಕ ಹಕ್ಕುಗಳನ್ನೂ ಮಾನ್ಯ ಮಾಡಬೇಕು. ಅಂದರೆ. ಪ್ರಭುತ್ವವು ವರಮಾನ ಬೆಂಬಲದ ಜೊತೆಯಲ್ಲಿ ಉಚಿತ, ಗುಣಮಟ್ಟದ, ಸಾರ್ವತ್ರಿಕ, ಸಾರ್ವಜನಿಕ ಶಿಕ್ಷಣ; ಉಚಿತ, ಗುಣಮಟ್ಟದ, ಸಾರ್ವತ್ರಿಕ, ಸಾರ್ವಜನಿಕ ಆರೋಗ್ಯ ರಕ್ಷಣೆ; ಸಾರ್ವತ್ರಿಕ ಸಾರ್ವಜನಿಕ ಪಡಿತರ ವ್ಯವಸ್ಥೆಯ ಮೂಲಕ ಸಬ್ಸಿಡಿ ದರದಲ್ಲಿ ದವಸ ಧಾನ್ಯಗಳು; ಸರಿಯಾದ ಪ್ರಮಾಣದ ವೃದ್ಧಾಪ್ಯ ವೇತನ ಮತ್ತು ಅಂಗ ವಿಕಲರಿಗೆ ವಿಶೇಷ ಸವಲತ್ತುಗಳು; ಮತ್ತಿತರ ಅನುಕೂಲಗಳನ್ನು ಜನರಿಗೆ ಒದಗಿಸಬೇಕು.

ಇದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ, ಪ್ರಭುತ್ವವು ಬಡತನ ನಿವಾರಣೆಯ ಕಾರ್ಯಕ್ರಮವನ್ನು ತಾನು ಕೊಡುವ ಬಕ್ಷೀಸಿನ ಮಟ್ಟಕ್ಕೆ ಇಳಿಸಬಾರದು ಎಂದಾದರೆ, ಪ್ರತಿಯೊಬ್ಬ ನಾಗರಿಕನಿಗೆ ಕೆಲವು ಸಾರ್ವತ್ರಿಕ ಆರ್ಥಿಕ ಹಕ್ಕುಗಳು ಲಭ್ಯವಾಗಬೇಕು. ಆಗ, ಕೈಗೆಟುಕಲಾರದು ಎಂದು ಭಾವಿಸಿದ ಉದ್ಯೋಗದ ಹಕ್ಕನ್ನು ಕೈಗೂಡಿಸಿಕೊಳ್ಳಲು ವರಮಾನ ಬೆಂಬಲವು ಒಂದು ಸಾಧನವಾಗಬಲ್ಲದು. ಅದರಿಂದಾಗಿ, ಉಚಿತ ಆರೋಗ್ಯ ರಕ್ಷಣೆಯ ಹಕ್ಕು ಮತ್ತು ಉಚಿತ ಶಿಕ್ಷಣದ ಹಕ್ಕು ಮುಂತಾದ ಹಕ್ಕುಗಳನ್ನು ಕೊಡಮಾಡುವ ಭರವಸೆಯನ್ನು ನಿರಾಕರಿಸಲಾಗದು. ಉದ್ಯೋಗದ ಹಕ್ಕಿನ ಜೊತೆಯಲ್ಲಿ ಈ ಎಲ್ಲ ಹಕ್ಕುಗಳನ್ನೂ ಕೂಡಿಸಬೇಕಾಗುತ್ತದೆ.

ಬಡವರಿಗೆ ವರಮಾನ ಬೆಂಬಲವಾಗಿ ಒಂದು ಕೈಯಲ್ಲಿ ಕೊಟ್ಟದ್ದನ್ನು ಬಡವರನ್ನೇ ಹೆಚ್ಚಾಗಿ ತಟ್ಟುವ ಪರೋಕ್ಷ ತೆರಿಗೆಗಳ ಮೂಲಕ ಇನ್ನೊಂದು ಕೈಯಲ್ಲಿ ಕಿತ್ತುಕೊಳ್ಳಬಾರದು ಎಂದಾದರೆ, ಜಾಗತೀಕರಣಗೊಂಡ ಹಣಕಾಸು ಬಂಡವಾಳದ, ದೇಶದ ದೊಡ್ಡ ಬಂಡವಾಳಿಗರ ನೇರತೆರಿಗೆ–ವಿರೋಧಿ ನಿಲುವನ್ನು ಧಿಕ್ಕರಿಸ ಬೇಕಾಗುತ್ತದೆ. ಆ ಧೈರ್ಯವಿಲ್ಲದ ಯಾವುದೇ ಸರ್ಕಾರವು ಒಂದು ಅಪ್ಪಟ ವರಮಾನ ಬೆಂಬಲ ಕೊಡಲಾರದು.

ಪೌರತ್ವ ತಿದ್ದುಪಡಿ ಮಸೂದೆಯ ವಿರುದ್ಧ ದೇಶಾದ್ಯಂತ ಪ್ರತಿಭಟನೆ



ಮೋದಿ ಸರಕಾರ ಲೋಕಸಭೆಯಲ್ಲಿ ಪಾಸು ಮಾಡಿಸಿಕೊಂಡಿರುವ, ಆದರೆ ರಾಜ್ಯಸಭೆಯಲ್ಲಿ ತೀವ್ರ ವಿರೋಧವನ್ನು ಎದುರಿಸುತ್ತಿರುವ ಪೌರತ್ವ ತಿದ್ದುಪಡಿ ಮಸೂದೆಯ ವಿರುದ್ಧ ಸಮಸ್ತ ಈಶಾನ್ಯ ಭಾರತ ಸಿಡಿದೆದ್ದಿದೆ. ಬಿಜೆಪಿ ಇತ್ತೀಚೆಗೆ ತನ್ನತ್ತ ಸೆಳೆಯುವಲ್ಲಿ ಯಶಸ್ವಿಯಾಗಿದ್ದ ಅದರ ಮಿತ್ರಪಕ್ಷಗಳವರೂ ಈಗ ಅದರ ವಿರುದ್ಧ ಸೆಟೆದು ನಿಂತಿದ್ದಾರೆ. ಕೆಲವು ಪಕ್ಷಗಳು ಅದರೊಂದಿಗೆ ಸಂಬಂಧವನ್ನೂ ಕಡಿದುಕೊಂಡಿವೆ. ಕೆಲವೆಡೆಗಳಲ್ಲಿ ಬಿಜೆಪಿ ಘಟಕಗಳೂ ಈ ಬಗ್ಗೆ ತೀವ್ರ ಅಸಮಾಧಾನ ತಳೆದಿವೆ ಎಂದು ವರದಿಯಾಗಿದೆ. ಆದರೂ ಮೋದಿ ಸರಕಾರ ಇದನ್ನು ರಾಜ್ಯಸಭೆಯಲ್ಲೂ ಪಾಸು ಮಾಡಿಸಿಕೊಳ್ಳಲು ಕಂಕಣಬದ್ಧವಾಗಿರುವಂತೆ ಕಾಣುತದೆ. ಈ ಹಿನ್ನೆಲೆಯಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿ ನಮ್ಮ ಸಂವಿಧಾನದ ಮೂಲ ಆಶಯವನ್ನೇ ಬುಡಮೇಲು ಮಾಡುವ ಈ ಪೌರತ್ವ ತಿದ್ದುಪಡಿ ಮಸೂದೆಯ ವಿರುದ್ಧ ದೇಶವ್ಯಾಪಿ ಪ್ರತಿಭಟನೆಯನ್ನು ನಡೆಸಬೇಕು ಎಂದು ನೀಡಿದ ಕರೆಗೆ ಫೆಬ್ರುವರಿ 4 ರಂದು ವ್ಯಾಪಕ ಸ್ಪಂದನೆ ವ್ಯಕ್ತವಾಗಿದೆ.

ಅಸ್ಸಾಂನಲ್ಲಿ ರಾಜಧಾನಿ ಗುವಾಹಾಟಿಯಲ್ಲಿ ಮಾತ್ರವಲ್ಲ, ಸಿಲ್ಚಾರ್, ಕರೀಂಗಂಜ್, ಹೈಲಕಂಡಿ, ನಲ್ಬಾರಿ, ತೇಝ್‌ಪುರ್, ದಿಬ್ರುಗಡ್, ಕೋಕ್ರಾಜಾರ್, ಜೊರ್ಹಾಟ್, ಗೋಲ್‌ಪಾರ, ದುಬ್ರಿ, ಮಂಗಲ್‌ದೋಯ್ ಮುಂತಾದ ಹಲವೆಡೆಗಳಲ್ಲೂ ಪ್ರತಿಭಟನೆಗಳು ನಡೆದವು.

ತ್ರಿಪುರಾದಲ್ಲಿ ಆಳುವ ಬಿಜೆಪಿಯ ಬೆದರಿಕೆಗಳನ್ನೂ ಲೆಕ್ಕಿಸದೆ ಪ್ರತಿಭಟನೆಗಳು ನಡೆದವು. ರಾಜಧಾನಿ ತ್ರಿಪುರಾದಲ್ಲಿ ನಡೆದ ಪ್ರತಿಭಟನೆಯಲ್ಲಿ ಮಾಜಿ ಮುಖ್ಯಮಂತ್ರಿ ಮತ್ತು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಮಾಣಿಕ್ ಸರ್ಕಾರ್ ಮತ್ತು ಕೇಂದ್ರ ಸಮಿತಿ ಸದಸ್ಯ ಅಗೋರ್ ದೇಬ್‌ಬರ್ಮ ಮಾತಾಡಿದರು. ಮೋದಿ ಸರಕಾರ ಧರ್ಮದ ಆಧಾರದಲ್ಲಿ ಪೌರತ್ವ ಕೊಡಲು ಹೊರಟಿದೆ. ಇದು ಜನತೆಯ ಐಕ್ಯತೆಯನ್ನು ಮುರಿಯುವ ಒಂದು ಸಂಚು. ಈ ಮೂಲಕ ದೇಶಾದ್ಯಂತ ತಮ್ಮ ವಿರುದ್ಧ ಹೋರಾಟಕ್ಕೆ ಇಳಿದಿರುವ ಜನಗಳ ಗಮನವನ್ನು ತಮ್ಮ ಬದುಕಿನ ಜ್ವಲಂತ ಪ್ರಶ್ನೆಗಳಿಂದ ಬೇರೆಡೆಗೆ ತಿರುಗಿಸುವ ಪ್ರಯತ್ನಕ್ಕೆ ಅದು ಇಳಿದಿದೆ. ಆದರೆ ದೇಶಾದ್ಯಂತ ಪ್ರಜಾಪ್ರಭುತ್ವ ವಾದಿಗಳು ಇದನ್ನು ವಿರೋಧಿಸುತ್ತಿದ್ದಾರೆ, ವಿಶೇಷ ವಾಗಿ ಈಶಾನ್ಯ ಭಾರತ ಸಿಡಿದೆದ್ದಿದೆ, ಈ ಮಸೂದೆಯನ್ನು ಹಿಂತೆಗೆದುಕೊಳ್ಳುವ ವರೆಗೂ ಹೋರಾಟ ಮುಂದುವರೆಯುತ್ತದೆ ಎಂದು ಮಾಣಿಕ್ ಸರ್ಕಾರ್ ಹೇಳಿದರು.

ಅಗರ್ತಲಾ ಅಲ್ಲದೆ, ಉದಯಪುರ, ತೆಲಿಯಮುರ್ರ, ಸೋನಾಮುರ್ರ, ಕಮ್ಲಾಪುರ್, ಅಂಪಿ, ಸಬ್ರೂಂ, ಬೆಲೋನಿಯ, ಅಂಬಸ್ಸ, ಕುಮಾರ್‌ಘಾಟ್, ಅಮರ್‌ಪುರ್ ಮತ್ತು ಪನಿಸಾಗರ್ ನಲ್ಲೂ ಪ್ರತಿಭಟನೆಗಳು ನಡೆದವು.

ಮಣಿಪುರದ ರಾಜಧಾನಿ ಇಂಫಾಲ್‌ನಲ್ಲಿ ಸಿಪಿಐ(ಎಂ) ಸಂಘಟಿಸಿದ್ದ ಪ್ರತಿಭಟನಾ ಸಭೆಯಲ್ಲಿ ಸಿಪಿಐ, ಆರ್‌ಎಸ್‌ಪಿ, ಫಾರ್ವರ್ಡ್ ಬ್ಲಾಕ್, ಬಿಎಸ್‌ಪಿ, ಎನ್‌ಸಿಪಿ, ಜೆಡಿ(ಎಸ್), ಎಎಪಿ ಮತ್ತು ಪಿಆರ್‌ಜೆಎ ಮುಖಂಡರೂ ಭಾಗವಹಿಸಿದರು.

ದಿಲ್ಲಿಯಲ್ಲಿ ಪೊಲಿಟ್‌ಬ್ಯುರೊ ಸದಸ್ಯ ತಪನ್ ಸೆನ್ ಮತ್ತು ದಿಲ್ಲಿ ರಾಜ್ಯ ಕಾರ್ಯದರ್ಶಿ ಕೆ.ಎಂ. ತಿವಾರಿ ಹಾಗೂ ಸಿಪಿಐ(ಎಂ)ನ ಮಣಿಪುರ ಕಾರ್ಯದರ್ಶಿ ಮಂಡಳಿ ಸದಸ್ಯ ಯುಮ್ನಮ್ ರತನ್ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು.



ಸಂಸದ್ ಭವನದ ಮುಂದೆ ಈಶಾನ್ಯ ಭಾರತದ ಸದಸ್ಯರು ಪಕ್ಷಭೇದವಿಲ್ಲದೆ ಮಹಾತ್ಮ ಗಾಂಧಿ ಪ್ರತಿಮೆಯ ಎದುರು ಮತಪ್ರದರ್ಶನ ನಡೆಸಿದರು. ಈ ಮಸೂದೆ ನಮ್ಮ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿದ್ದು ಈಶಾನ್ಯ ಭಾರತದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ರಚನೆಗೆ ಭಾರೀ ದಕ್ಕೆ ಉಂಟುಮಾಡಲಿದೆ ಎಂದು ಅವರು ಹೇಳಿದ್ದಾರೆ.

ಅಸ್ಸಾಂ; ಎರಡು ವರ್ಷಗಳಲ್ಲಿ 251 ರಾಜದ್ರೋಹದ ಕೇಸುಗಳು

ಅಸ್ಸಾಂ ನಲ್ಲಿ 2016ರಲ್ಲಿ ಬಿಜೆಪಿ ನೇತೃತ್ವದ ಸರಕಾರ ಅಧಿಕಾರ ವಹಿಸಿಕೊಂಡ ಮೇಲೆ 251 ರಾಜದ್ರೋಹದ ಕೇಸುಗಳನ್ನು ಹಾಕಲಾಗಿದೆ ಎಂದು ಫೆಬ್ರುವರಿ 4ರಂದು ರಾಜ್ಯ ವಿಧಾನ ಸಭೆಯಲ್ಲಿ ಕೇಳಿದ ಪ್ರಶ್ನೆಯೊಂದಕ್ಕೆ ನೀಡಿದ ಲಿಖಿತ ಉತ್ತರದಿಂದ ತಿಳಿದು ಬಂದಿದೆ. ಇದರಲ್ಲಿ ನಿಷೇಧಿತ ಉಗ್ರರ ಸಂಘಟನೆಗಳ ಸದಸ್ಯರಲ್ಲದೆ ಮಹಿತಿ ಹಕ್ಕು ಕಾರ್ಯಕರ್ತ ಮತ್ತು ರೈತ ಮುಖಂಡರೂ ಆಗಿರುವ ಅಖಿಲ್ ಗೊಗೊಯ್ ಮೇಲೆ ಎರಡು ಕೇಸುಗಳನ್ನು ಹಾಕಲಾಗಿದೆ. ಇತ್ತೀಚೆಗೆ ಪೌರತ್ವ ತಿದ್ದುಪಡಿ ಮಸೂದೆಯ ವಿರುದ್ಧ ಈಶಾನ್ಯ ಭಾರತದಲ್ಲಿ ಎದ್ದು ಬಂದಿರುವ ತೀವ್ರ ಪ್ರತಿಭಟನೆಯ ಸಂದರ್ಭದಲ್ಲಿ ರಾಜ್ಯದ ಹಿರಿಯ ಚಿಂತಕ ಮತ್ತು ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ ಸಾಹಿತಿ ಹಿರೇನ್ ಗೊಹೇನ್ ಹಾಗೂ ಪತ್ರಕರ್ತ ಮಂಜಿತ್ ಮಹಂತ ಮೇಲೂ ರಾಜದ್ರೋಹದ ಕೇಸು ಹಾಕಲಾಗಿದೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಕೇಂದ್ರ ಸರಕಾರದ ದುರಾಡಳಿತದ ವಿರುದ್ಧ 2'ಕೇರಳ ಸಂರಕ್ಷಣಾ ಯಾತ್ರಾ'ಗಳು

ಕೇರಳದ ಎಡ ಪ್ರಜಾಪ್ರಭುತ್ವ ರಂಗ (ಎಲ್‌ಡಿಎಫ್) ಬಿಜೆಪಿ ನೇತೃತ್ವದ ಕೇಂದ್ರ ಸರಕಾರದ ದುರಾಡಳಿತದ ವಿರುದ್ಧ ಎರಡು ರಾಜ್ಯವ್ಯಾಪಿ ಜಾಥಾಗಳನ್ನು ನಡೆಸಲು ನಿರ್ಧರಿಸಿದೆ. 'ಕೇರಳ ಸಂರಕ್ಷಣಾ ಯಾತ್ರಾ' ಎಂದು ಹೆಸರಿಸಿರುವ ಈ ಜಾಥಾಗಳಲ್ಲಿ ಒಂದು ರಾಜ್ಯದ ದಕ್ಷಿಣದಿಂದ, ತಿರುವನಂತಪುರದಿಂದ ಫೆಬ್ರುವರಿ 16ರಂದು ಆರಂಭವಾಗಲಿದೆ, ಮತ್ತು ಎರಡನೆಯದು ಫೆಬ್ರುವರಿ 16ರಂದು ರಾಜ್ಯದ ಉತ್ತರ ಭಾಗದಿಂದ, ಕಾಸರಗೋಡಿನಿಂದ ಫೆಬ್ರುವರಿ 16ರಂದು ಆರಂಭವಾಗಲಿದೆ. ಇವೆರಡೂ ಜಾಥಾಗಳು ಮಾರ್ಚ್ 2 ರಂದು ತ್ರಿಶೂರಿನಲ್ಲಿ ಒಟ್ಟುಗೂಡುತ್ತವೆ.

"ಬಿಜೆಪಿ ಸರಕಾರವನ್ನು ಒದ್ದೋಡಿಸಿ; ದೇಶವನ್ನು ರಕ್ಷಿಸಿ; ಅಭಿವೃದ್ಧಿ, ಶಾಂತಿ, ಸಾಮಾಜಿಕ ಪ್ರಗತಿ, ಎಡರಂಗ, ಜನತೆಯ ರಂಗ" ಇದು ಈ ಜಾಥಾಗಳ ಘೋಷಣೆಯಾಗಲಿದೆ ಎಂದು ಎಲ್‌ಡಿಎಫ್ ಹೇಳಿದೆ. ಇದು ಕೇಂದ್ರ ಸರಕಾರದ ಜನ-ವಿರೋಧಿ, ಕಾರ್ಮಿಕ-ವಿರೋಧಿ ಧೋರಣೆಗಳ ವಿರುದ್ಧದ ಪ್ರಚಾರಾಂದೋಲನವಾಗಿದ್ದು ನಿರುದ್ಯೋಗ, ಕೃಷಿ ವಲಯದ ಬಿಕ್ಕಟ್ಟು ಮತ್ತು ವಿಧ್ವಂಸಕಾರಿ ಆರ್ಥಿಕ ಧೋರಣೆಗಳನ್ನು ಎತ್ತಿ ತೋರಲಿದೆ.

ಎಲ್ಲ ಚುನಾವಣಾ ಕ್ಷೇತ್ರಗಳಲ್ಲಿ ಸಂಚರಿಸಲಿರುವ ಈ ಜಾಥಾಗಳು ಪ್ರತಿಯೊಂದು ಕ್ಷೇತ್ರದಲ್ಲೂ ಸಾರ್ವಜನಿಕ ಸಭೆಗಳನ್ನು ನಡೆಸುತ್ತವೆ ಎಂದು ಎಲ್‌ಡಿಎಫ್ ಸಂಯೋಜಕರಾಗಿರುವ ಎ. ವಿಜಯರಾಘವನ್ ಹೇಳಿದ್ದಾರೆ.

ದಕ್ಷಿಣದ ಜಾಥಾದ ನೇತೃತ್ವವನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕೊಡಿಯೇರಿ ಬಾಲಕೃಷ್ಣನ್ ವಹಿಸಲಿದ್ದಾರೆ. ಈ ಜಾಥಾ ದಕ್ಷಿಣ ಮತ್ತು ಮಧ್ಯಕೇರಳದ ಜಿಲ್ಲೆಗಳಲ್ಲಿ ಸಂಚರಿಸಲಿದೆ. ಕಾಸರಗೋಡಿನಿಂದ ಆರಂಭವಾಗುವ ಉತ್ತರದ ಜಾಥಾದ ನೇತೃತ್ವವನ್ನು ಸಿಪಿಐ ರಾಜ್ಯ ಕಾರ್ಯದರ್ಶಿ ಕಣಂ ರಾಜೇಂದ್ರನ್ ವಹಿಸಲಿದ್ದಾರೆ. ಇದು ಉತ್ತರ ಕೇರಳದ ಕಾಸರಗೋಡು, ಕಣ್ಣೂರು, ಕೋಳಿಕ್ಕೋಡ್, ವೈನಾಡು ಮತ್ತು ಮಲಪ್ಪುರಂ ಜಿಲ್ಲೆಗಳಲ್ಲೂ, ಜತೆಗೆ ಪಾಲಕ್ಕಾಡ್ ಮತ್ತು ತ್ರಿಶೂರ್ ಜಿಲ್ಲೆಗಳಲ್ಲೂ ಸಂಚರಿಸಲಿದೆ.

ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮತ್ತು ಇತರ ಮಂತ್ರಿಗಳು ಮತ್ತು ಎಲ್‌ಡಿಎಫ್‌ನ ಎಲ್ಲ ಪಕ್ಷಗಳ ಮುಖಂಡರುಗಳು ಇದರಲ್ಲಿ ಭಾಗವಹಿಸಲಿದ್ದಾರೆ.

ಬಿಜೆಪಿ ಮತ್ತು ಆರೆಸ್ಸೆಸ್ ಒಂದು ರಾಜಕೀಯ ಉಪಕರಣವಾಗಿ ಬಳಸುತ್ತಿರುವ ಶಬರಿಮಲೆ ಪ್ರಶ್ನೆಯನ್ನೂ ಈ ಪ್ರಚಾರಾಂದೋಲನದಲ್ಲಿ ಎತ್ತಲಾಗುವುದು ಎಂದು ಅವರು ಹೇಳಿದರು. ಇತ್ತೀಚೆಗೆ ಸ್ವತಃ ಪ್ರಧಾನ ಮಂತ್ರಿಗಳೇ ಕಮ್ಯುನಿಸ್ಟರು ರಾಜ್ಯದ, ದೇಶದ ಸಂಸ್ಕೃತಿಯನ್ನು ಮತ್ತು ಹಾಳುಗೆಡವುತ್ತಿದ್ದಾರೆ ಎಂದು ಕೇರಳದಲ್ಲಿ ಹೇಳಿರುವುದನ್ನು ನೆನಪಿಸಿಕೊಳ್ಳಬಹುದು. ವಾಸ್ತವವಾಗಿ ಕೇರಳದ ಸಂಸ್ಕೃತಿಯನ್ನು ಧ್ವಂಸ ಮಾಡುತ್ತಿರುವವರು ಹಿಂಸಾಚಾರವನ್ನು ಹರಿಯ ಬಿಟ್ಟಿರುವ ಆರೆಸ್ಸೆಸ್-ಬಿಜೆಪಿಯವರೇ ವಿನಃ ಕಮ್ಯುನಿಸ್ಟ್ ಸರಕಾರವಲ್ಲ ಎಂದು ಕೇರಳ ಮುಖ್ಯಮಂತ್ರಿಗಳು ಇದಕ್ಕೆ ಪ್ರತ್ಯುತ್ತರ ನೀಡಿದ್ದಾರೆ. ಸಂಘ ಪರಿವಾರ ಇಡೀ ದೇಶದ ಬಹುತ್ವದ ಮತ್ತು ಜಾತ್ಯತೀತತೆಯ ಹಂದರವನ್ನು ಧ್ವಂಸ ಮಾಡಲು ಪ್ರಯತ್ನಿಸುತ್ತಿದೆ ಎಂದು ಅವರು ಹೇಳಿದರು.

"ಕೇರಳದಲ್ಲಿ ಕೆಲವೊಮ್ಮೆ ವಲಸೆ ಹಕ್ಕಿಗಳು ಬರುತ್ತವೆ ಎಂದು ನಿಮಗೆ ಗೊತ್ತಿದೆ. ಈ ದಿನಗಳಲ್ಲಿ ಅಂತಹ ಒಂದು ಹಕ್ಕಿ ನಮ್ಮ ನೆಲದ ಮೇಲ ಕಣ್ಣು ಹಾಕಿದೆ. ಇಂತಹ ಹಕ್ಕಿಗಳು ಸಾಮಾನ್ಯವಾಗಿ ಮರುಭೂಮಿಗಳಲ್ಲಿ ಕಾಣ ಸಿಗುವಂತವು. ಇವೀಗ ನಮ್ಮ ರಾಜ್ಯದ ಬಗ್ಗೆ ವಿಶೇಷ ಆಸಕ್ತಿ ಬೆಳೆಸಿಕೊಂಡಂತೆ ಕಾಣುತ್ತದೆ. ಆದ್ದರಿಂದ ನಮ್ಮ ರಾಜ್ಯಕ್ಕೆ ಎಂತಹ ಅಪಾಯ ಕಾದಿದೆಯೋ ಎಂಬ ಆತಂಕ ಉಂಟಾಗಿದೆ" ಎಂದು ಇನ್ನೊಂದು ಸಂದರ್ಭದಲ್ಲಿ ಮುಖ್ಯಮಂತ್ರಿಗಳು ವ್ಯಂಗ್ಯವಾಡಿದ್ದಾರೆ.

ಮಧ್ಯಪ್ರದೇಶ: ಕಾಂಗ್ರೆಸ್ ಆಳ್ವಿಕೆಯಲ್ಲೂ 'ಗೋವಧೆ'ಗಾಗಿ ಮೂವರ ಮೇಲೆ ಎನ್‌ಎಸ್‌ಎ ಪ್ರಯೋಗ

ಮಧ್ಯಪ್ರದೇಶದ ಖಂಡ್ವ ಜಿಲ್ಲೆಯ ಖರ್ಕಲಿ ಗ್ರಾಮದ ನಿವಾಸಿಗಳಾದ ನದೀಮ್, ಶಕೀಲ್ ಮತ್ತು ಆಝಂ ಎಂಬವರ ಮೇಲೆ ಕರಾಳ ರಾಷ್ಟ್ರೀಯ ಭದ್ರತಾ ಕಾಯ್ದೆ(ಎನ್‌ಎಸ್‌ಎ)ಯನ್ನು ಪ್ರಯೋಗಿಸಲಾಗಿದೆ. ನದೀಮ್ ಮತ್ತು ಶಕೀಲ್ ಕಸಾಯಿ ಕೆಲಸ ಮಾಡುವವರು, ಆಜಂ ಒಬ್ಬ ರೈತರಲ್ಲದೆ ಸಣ್ಣಪುಟ್ಟ ಬೇರೆ ಕೆಲಸಗಳನ್ನು ಮಾಡಿಕೊಂಡು ಹೊಟ್ಟೆ ಹೊರೆಯುವಾತ. ಈಗ ಈ ಮೂವರನ್ನು 'ಗೋವಧೆ'ಯ ಅಪರಾಧದ ಮೇಲೆ ಎನ್‌ಎಸ್‌ಎ ಅಡಿಯಲ್ಲಿ ಜೈಲಿಗೆ ಕಳಿಸಲಾಗಿದೆ.

ಇಲ್ಲಿ 'ಗೋವಧೆ' ಇನ್ನೂ ಸಾಬೀತಾಗಿಲ್ಲ, ಏಕೆಂದರೆ ಇಡಿ ರಾಜ್ಯದಲ್ಲಿ ವಧೆ ಮಾಡಿದ ಪ್ರಾಣಿಯ ಮಾಂಸ ದನದ್ದೇ ಎಂದು ಪರೀಕ್ಷಿಸಲು ಫೊರೆನ್ಸಿಕ್ ಪ್ರಯೋಗಾಲಯವಿಲ್ಲ. ಎರಡನೇಯದಾಗಿ ಇದು ನಿಜವಾಗಿದ್ದರೂ ಎನ್‌ಎಸ್‌ಎ ಯಂತಹ ಕರಾಳ ಶಾಸನವನ್ನು ಪ್ರಯೋಗಿಸುವ ಅಗತ್ಯವಿರಲಿಲ್ಲ ಎಂದು ಹೇಳಲಾಗಿದೆ.

ಒಟ್ಟಿನಲ್ಲಿ ಮುಖ್ಯಮಂತ್ರಿಯಾಗಿರುವ ಕಮಲ್‌ನಾಥ್ ಅಡಿಯಲ್ಲಿ ಕಾಂಗ್ರೆಸ್ ಸರಕಾರ ಚುನಾವಣಾ ಲಾಭಕ್ಕಾಗಿ 'ಮೃದು ಹಿಂದುತ್ವ'ಕ್ಕಿಂತಲೂ ಮುಂದೆ ಹೋಗಿ ಪಕ್ಕಾ ಹಿಂದುತ್ವವನ್ನೇ ಅನುಸರಿಸುವಂತೆ ಕಾಣುತ್ತಿದೆ ಎಂದು ರಾಜ್ಯದ ಹಿರಿಯ ಸಿಪಿಐ(ಎಂ) ಮುಖಂಡ ಬಾದಲ್ ಸರೋಜ್ ಹೇಳಿದ್ದಾರೆ.

ಮಧ್ಯಪ್ರದೇಶದಲ್ಲಿ ಈ ಹಿಂದೆ ಗೋವಧೆ ಕೇಸಿನಲ್ಲಿ ಎನ್‌ಎಸ್‌ಎ ಪ್ರಯೋಗಿಸಿದ್ದು 2016ರಲ್ಲಿ ಬಿಜೆಪಿ ಆಳ್ವಿಕೆಯಲ್ಲಿ. ಆಗ ಅದಕ್ಕೆ ಬಲಿಯಾದವರು ಸ್ವತಃ ಬಿಜೆಪಿಯ ಅಲ್ಪಸಂಖ್ಯಾತ ಸೆಲ್‌ನ ಉಪಾಧ್ಯಕ್ಷ ಅನ್ವರ್ ಮೇ ಮತ್ತು ಇತರ 9 ಮಂದಿ. ಅನ್ವರ್‌ರನ್ನು ನಂತರ ಬಿಜೆಪಿಯಿಂದ ಉಚ್ಚಾಟಿಸಲಾಯಿತು ಎಂದು ತಿಳಿದು ಬಂದಿದೆ.

ಕಾಂಗ್ರೆಸ್ ಸರಕಾರ ಸರಕಾರೀ ಮತ್ತು ಪೋಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯಲ್ಲಿ ಅಲ್ಪಸಂಖ್ಯಾತರನ್ನು ಪೀಡಿಸುವ ಮನೋಭಾವವನ್ನು ಬದಲಿಸಲು ಪ್ರಯತ್ನಿಸುವ ಬದಲು ಬಿಜೆಪಿ ದಾರಿಯಲ್ಲೆ ಸಾಗಿದೆ ಎಂದು ಸಿಪಿಐ(ಎಂ) ಮಧ್ಯಪ್ರದೇಶ ರಾಜ್ಯ ಸಮಿತಿ ಖೇದ ವ್ಯಕ್ತಪಡಿಸಿದೆ. 2018ರ ಜನಾದೇಶ ಬದಲಾವಣೆಗಾಗಿಯೋ ಅಥವ ಹಳೆಯ ದಾರಿಯ ಮುಂದುವರಿಕೆಗಾಗಿಯೋ ಎಂದು ಅದು ಪ್ರಶ್ನಿಸಿದೆ. ಕಳೆದ 15 ವರ್ಷಗಳಲ್ಲಿ ಗೋವಧೆ ಮತ್ತು ಗೋಮಾಂಸ ವ್ಯಾಪಾರಕ್ಕಾಗಿ ಹಲವು ಕೇಸುಗಳನ್ನು ಹಾಕಲಾಗಿದೆ. ಅವುಗಳಲ್ಲಿ ಒಂದಾದರೂ ಕೇಸಿನಲ್ಲಿ ಆರೋಪಿಗಳಿಗೆ ಶಿಕ್ಷೆಯಾಗಿದೆಯೇ ಎಂದೂ ಅದು ಪ್ರಶ್ನಿಸಿದೆ. ಇದು ಅಲ್ಪಸಂಖ್ಯಾತರನ್ನು ಪೀಡಿಸುವ ಸಾಧನವಲ್ಲದೇ ಬೇರೇನೂ ಅಲ್ಲ ಎಂಬುದನ್ನು ಇದೇ ತೋರಿಸುತ್ತದೆ.


ಕಾಂಗ್ರೆಸ್ ಸರಕಾರ ಗೋಶಾಲೆಗಳ ಹೆಸರಲ್ಲಿ 450 ಕೋಟಿ ರೂ. ಖರ್ಚುಮಾಡಿ ಹಣ ಮಾಡುವ ಮತ್ತು ಭ್ರಷ್ಟಾಚಾರದ ಇನ್ನೊಂದು ದಾರಿಯನ್ನು ತೆರೆದು ಕೊಡುವ ಬದಲು ರೈತರನ್ನು ಬಿಡಾಡಿ ಜಾನುವಾರುಗಳ ಕಾಟದಿಂದ ಮುಕ್ತಗೊಳಿಸುವ ಬೇರೆ ಕ್ರಮಗಳ ಬಗ್ಗೆ ಯೋಚಿಸಬೇಕು. ಕಳೆದ ಎರಡು ವರ್ಷಗಳಲ್ಲಿ ಪಶುಮೇಳಗಳಲ್ಲಿ ದನಗಳ ಖರೀದಿ ಮಾರಾಟಕ್ಕೆ ನಿಷೇಧ ಹಾಕಿದ ಮೇಲೆ ಬಿಡಾಡಿ ಜಾನುವಾರುಗಳ ಕಾಟದಿಂದ ರೈತರ ಮೂರನೇ ಒಂದರಷ್ಟು ಫಸಲು ನಷ್ಟವಾಗಿದೆ, ನೂರಕ್ಕೂ ಹೆಚ್ಚು ಜನಗಳ ಪ್ರಾಣಹಾನಿಯೂ ಆಗಿದೆ ಎನ್ನಲಾಗಿದೆ. ಆದ್ದರಿಂದ ಗೋಶಾಲೆಗಳ ಹೆಸರಲ್ಲಿ ಹಣ ಪೋಲು ಮಾಡುವ ಬದಲು ಪಥುಪಾಲನೆಗೆ ಪ್ರೋತ್ಸಾಹ ನೀಡುವ, ಹಾಲು ಖರೀದಿ ಮೂಲಕ ರೈತರಿಗೆ ನೆರವಾಗುವ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಿಪಿಐ(ಎಂ) ಮಧ್ಯಪ್ರದೇಶ ರಾಜ್ಯ ಸಮಿತಿ ಕಾಂಗ್ರೆಸ್ ಸರಕಾರವನ್ನು ಆಗ್ರಹಿಸಿದೆ.

ಐ.ಎನ್.ಎಫ್ ಒಪ್ಪಂದದಿಂದ ಅಮೆರಿಕ ಹೊರಕ್ಕೆ, ವಿಶ್ವ ಶಾಂತಿಗೆ ಆಪತ್ತು

ಮಧ್ಯಾಂತರ ಅಣ್ವಸ್ತ್ರ ಪಡೆ (ಐ.ಎನ್.ಎಫ್) ಒಪ್ಪಂದ ದಿಂದ 180 ದಿನಗಳೊಳಗೆ ಅಮೆರಿಕ ಹೊರನಡೆಯುವ ಕುರಿತು ಫೆಬ್ರವರಿ 1ರ ಟ್ರಂಪ್ ಪ್ರಕಟಣೆಯು, ಅವರ "ಅಣ್ವಸ್ತ್ರ ಸಿದ್ಧಾಂತ"ವನ್ನು ಸ್ಪಷ್ಟವಾಗಿ ಬಯಲುಗೊಳಿಸುತ್ತದೆ. ಇದು ಅಮೆರಿಕದ ಹೊಸ 'ಕಡಿಮೆ-ಇಳುವರಿ ಪರಮಾಣು ಸಿಡಿ ತಲೆ' (low-yield nuclear warheads) ಗಳನ್ನು ಉತ್ಪಾದಿಸಿ ಅನಂತರ ಅವುಗಳನ್ನು ಬಳಸುವ ಯೋಜನೆಯ ಭಾಗವಾಗಿದೆ. ಇವು ಐ.ಎನ್. ಎಫ್ ಒಪ್ಪಂದವನ್ನು ಉಲ್ಲಂಘಿಸುವುದರಿಂದ ಆ ಒಪ್ಪಂದವನ್ನು ಟ್ರಂಪ್ ರದ್ದು ಮಾಡಹೊರಟಿದ್ದಾರೆ.

ಕಳೆದ ತಿಂಗಳು ಯು.ಎಸ್ ತನ್ನ 'ಕ್ಷಿಪಣಿ ರಕ್ಷಣಾ ಪರಾಮರ್ಶಾ' ವರದಿಯಲ್ಲಿ, ಇದರ ಸಂಪೂರ್ಣ ಚಿತ್ರಣವಿದೆ. ಈ ವರದಿಯು ಮೂಲಭೂತ ವಾಗಿ ಪೆಂಟಗನ್ ನಲ್ಲಿ ಡೊನಾಲ್ಡ್ ಟ್ರಂಪ್ ನೀಡಿದ ಭಾಷಣವನ್ನು ಪುನರಾವರ್ತಿಸುತ್ತದೆ. ಸರಳವಾಗಿ ಹೇಳುವುದಾದರೆ, ಯಾವುದೇ ಕ್ಷಿಪಣಿ ಗಳನ್ನು ಎಲ್ಲೆಡೆ, ಎಲ್ಲಿಯಾದರೂ, ಯಾವುದೇ ಸ್ಥಳದಲ್ಲಿ ಇದ್ದರು ಸಹಾ, ಅದನ್ನು ಪತ್ತೆ ಹಚ್ಚಿ ನಾಶ ಮಾಡುವ ಸಾಮಾರ್ಥ್ಯಗಳನ್ನು ಅಮೆರಿಕಾ ಅಭಿವೃದ್ಧಿ ಪಡಿಸುತ್ತಿದೆ ಎಂದರ್ಥ. ಟ್ರಂಪ್ ನ ಹೇಳಿಕೆಯಂತೆ "ಬಾಹ್ಯಾಕಾಶ ಆಧಾರಿತ ಕ್ಷಿಪಣಿ ರಕ್ಷಣಾ ಪದರವು...ನಮ್ಮ ರಕ್ಷಣೆ ಗಾಗಿ ಬಳಸುವ ಅತಿ ದೊಡ್ಡದಾದ ನಿಯೋಜನೆಯಾಗಿದೆ" ಹಾಗೆಯೇ, 'ನಮ್ಮ ಶತ್ರು ಕ್ಷಿಪಣಿಗಳು ಭೂಮಿಯ ಮೇಲೆ ಯಾವುದೇ ಅಭಯಾರಣ್ಯದಲ್ಲಿ ಅಥವಾ ಮೇಲಿನ ಆಕಾಶದಲ್ಲಿ ಇನ್ನು ಮುಂದೆ ನಿಸ್ಸಂಶಯವಾಗಿ ಕಾಣಿಸಿಕೊಳ್ಳಲಾರವು, ಏಕೆಂದರೆ, ನಮ್ಮ ರಕ್ಷಣೆಗಾಗಿ ಇದು ನಮ್ಮ ಆಕ್ರಮಣವಾಗಿದೆ ಎಂದು ಅಮೆರಿಕಾ ವಿಶ್ವಕ್ಕೆ ಖಚಿತ ಪಡಿಸುತ್ತದೆ" ಎನ್ನುತ್ತದೆ ಆ "ಅಣ್ವಸ್ತ್ರ ಸಿದ್ದಾಂತ".

ಇದರಿಂದ ಅಮೆರಿಕಾವು ಅಣ್ವಸ್ತ್ರ ತಯಾರಿ ಕ್ರಮಗಳನ್ನು ತಡೆಹಿಡಿಯುವಲ್ಲಿ ಆಸಕ್ತಿ ಹೊಂದಿಲ್ಲ. ಸಂಪೂರ್ಣ ಜಾಗತಿಕ ಪ್ರಾಬಲ್ಯ ಮತ್ತು ಗೆಲುವು ಸಾಧಿಸುವ ಪರಮಾಣು ಯುದ್ಧಗಳನ್ನು ಮರು ಹುಟ್ಟು ಹಾಕಲು ತಯಾರಿ ನಡೆಸುತ್ತಿದೆ ಎಂಬುದು ಮತ್ತಷ್ಟು ಸ್ಪಷ್ಟಗೊಳ್ಳುತ್ತದೆ. ಅಮೆರಿಕದ ಈ ಕ್ರಮ ವಿಶ್ವಕ್ಕೆ ಅಪಾಯದ ಸೂಚನೆಯಾಗಿದೆ. ಇದನ್ನು ತಡೆಹಿಡಿಯಲು ಜಗತ್ತಿನ ಶಾಂತಿಪ್ರಿಯ ರಾಷ್ಟ್ರಗಳು ತಕ್ಷಣ ಮುಂದಾಗಬೇಕಾಗಿದೆ. ವಿಶ್ವಶಾಂತಿ ಚಳುವಳಿ ಮತ್ತೆ ತನ್ನ ದನಿಯೆತ್ತಬೇಕಾಗಿದೆ.



ಐ ಎನ್ ಎಫ್ ಒಪ್ಪಂದ ಹಿಂಪಡೆಯಲು 'ಸಮರ್ಥನೆ'

ಐ ಎನ್ ಎಫ್ ಒಪ್ಪಂದ ಅಂದಿನ ಯುಎಸ್ ಅಧ್ಯಕ್ಷ ರೇಗನ್ ಮತ್ತು ಸೋವಿಯತ್ ಒಕ್ಕೂಟದ ಅಧ್ಯಕ್ಷ ಗೋರ್ಬಚೆವ್ ರ ನಡುವೆ 1984 ರಲ್ಲಿ ಆಗಿದ್ದ ಒಪ್ಪಂದವಾಗಿತ್ತು. ಫ್ರಾನ್ಸ್, ಬ್ರಿಟನ್ ಮತ್ತು ಚೀನಾ ಈ ಒಪ್ಪಂದದ ಭಾಗವಾಗಿರಲಿಲ್ಲ. ಇದು 500–5,500 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಅಣ್ವಸ್ತ್ರ ಸಾಮರ್ಥ್ಯದ ಕ್ಷಿಪಣಿಗಳನ್ನು ಸೀಮಿತಗೊಳಿಸುತ್ತದೆ. ಇದು ಯುರೋಪಿನಲ್ಲಿ ಪರಮಾಣು ಯುದ್ಧವನ್ನು ತಡೆಯುವ ಮೂಲ ಉದ್ದೇಶದಿಂದ ವಿನ್ಯಾಸಗೊಳಿಸಿದ ಒಪ್ಪಂದವಾಗಿತ್ತು. ಮತ್ತೆ ಹಿರೋಷಿಮಾ–ನಾಗಸಾಕಿಗಳು ಮರುಕಳಿಸಬಾರದು ಎಂಬುದೆ ಈ ಒಪ್ಪಂದದ ಪ್ರಮುಖ ಉದ್ದೇಶ ವಾಗಿತ್ತು ಎಂಬುದನ್ನು ಮರೆಯಬಾರದು.

ಟ್ರಂಪ್ ನ ಪ್ರಕಾರ, ತಕ್ಷಣದ "ಪ್ರಚೋದನೆ" ಎಂದರೆ, ಇಂದಿನ ರಷ್ಯಾವು ಹೆಸರಿಸದ ಅಣ್ವಸ್ತ್ರ– ಸಾಮರ್ಥ್ಯದ, ಭೂ– ಆಧಾರಿತ ಕ್ಷಿಪಣಿ' ಗಳನ್ನು ಅಭಿವೃದ್ಧಿಪಡಿಸುತ್ತಿದೆ. (ಇದಕ್ಕೆ ಟ್ರಂಪ್ ಯಾವುದೇ ಪುರಾವೆಗಳನ್ನು ಒದಗಿಸುತ್ತಿಲ್ಲ ಎಂಬುದನ್ನು ಇಲ್ಲಿ ಗಮನಿಸಬೇಕಾಗಿದೆ.) ಇದು ಐ.ಎನ್.ಎಫ್ ಪ್ರಕಾರ ನಿಷೇಧಿತ ಎಂಬುದು ಅಮೆರಿಕಾದ ವಾದ. ಈ ವಾದವನ್ನು ಪುತಿನ್ ಆಡಳಿತ ಸರಾಸಗಟಾಗಿ ನಿರಾಕರಿಸಿದೆ. ಅವರ ಪ್ರಕಾರ, ಐ.ಎನ್.ಎಫ್ ನಲ್ಲಿ ನಿಷೇಧಿಸಲ್ಪಟ್ಟ' ಪರಮಾಣು–ಸಾಮರ್ಥ್ಯದ ಕ್ಷಿಪಣಿ ಬ್ಯಾಟರಿಗಳನ್ನು, ರಷ್ಯಾದ ಗಡಿಗಳ ಬಳಿ (ಅಂದರೆ ಪೋಲ್ಯಾಂಡ್ ಮತ್ತು ರೊಮೇನಿಯಾ ದ ಅದರ ಗಡಿಗಳಲ್ಲಿ) ಯುಎಸ್ ಸ್ಥಾಪಿಸಿದೆ. ಇದರ ಕುರಿತಂತೆ ಚರ್ಚಿಸಲು ರಷ್ಯಾವು ಅಮೆರಿಕಾ ವನ್ನು ಒತ್ತಾಯಿಸಿದೆ. ಇದರೊಂದಿಗೆ, ಚೀನಾ ಮತ್ತು ಇನ್ನಿತರೆ ಪರಮಾಣು ಹೊಂದಿರುವ ರಾಷ್ಟಗಳನ್ನು ಐ.ಎನ್.ಎಫ್.ಗೆ ಸೇರಿಸಿ ಕೊಂಡು ವಿಸ್ತರಿಸಬೇಕೆಂಬ ರಷ್ಯಾದ ಸಲಹೆಯನ್ನು ಕೂಡಾ ಅಮೆರಿಕಾ ಒಪ್ಪುತ್ತಿಲ್ಲ. ಇದರ ಕುರಿತಂತೆ ಅಮೆರಿಕಾ ಯಾವುದೇ ಮಾತುಕತೆಗೆ ಸಿದ್ದರಿಲ್ಲ. ಈ ಕಾರಣಗಳಿಂದಾಗಿ, ರಷ್ಯಾವು ಕೂಡಾ ಜಗ್ಗುತ್ತಿಲ್ಲ ಎಂಬುದು ಪರಮಾಣು ತಜ್ಞರ ಅಭಿಪ್ರಾಯವಾಗಿದೆ.

ಪ್ರಳಯಾಂತಕ ಅಣ್ವಸ್ತ್ರ ಯುದ್ಧದತ್ತ

ಈಗ ಉಳಿದಿರುವ ಏಕೈಕ ಅಣ್ವಸ್ತ್ರ ಒಪ್ಪಂದವೆಂದರೆ ಹೊಸ ಸ್ಟಾರ್ಟ್ (START) ಮಾತ್ರ. ಇದು ಎರಡು ರಾಷ್ಟಗಳ ನಡುವೆ ಪರಮಾಣು ಸಿಡಿತಲೆಗಳ ಸಂಖ್ಯೆಯನ್ನು ಪೂರ್ಣ ನಾಶಪಡಿಸುವುದರ ಬಗೆಗಿನ ಒಪ್ಪಂದ. 2021 ರಲ್ಲಿ ಈ ಒಪ್ಪಂದ ಕೊನೆಗೊಳ್ಳುತ್ತದೆ. ಇದನ್ನು ಮತ್ತೆ ನವೀಕರಿಸಬೇಕು. ಆದರೆ ಟ್ರಂಪ್ ಆಡಳಿತದಲ್ಲಿ ಇದರ ನವೀಕರಣದ ಸಾಧ್ಯತೆ ಬಹಳ ಕಡಿಮೆ. ಏಕೆಂದರೆ, ಅವರ ನಿಜವಾದ ಗುರಿ ಯುಎಸ್ ನ ಜಾಗತಿಕ ಪರಮಾಣು ಪ್ರಾಬಲ್ಯವನ್ನು ಪುನರುಜ್ಜೀವನ ಗೊಳಿಸುವುದಾಗಿದೆ. ಹಿರೋಷಿಮಾ ಮತ್ತು ನಾಗಸಾಕಿಯ ನಂತರ ತನ್ನ ಪ್ರಾಬಲ್ಯವನ್ನು ಮತ್ತೆ ಜಗತ್ತಿಗೆ ತೋರಿಸುವುದು ಇದರ ಮೂಲ ಉದ್ದೇಶವಾಗಿದೆ. ಅದರ ಮೂಲಕ ಯುಎಸ್ ಆರ್ಥಿಕ ಮತ್ತು ರಾಜಕೀಯ ನಿರ್ದೇಶನಗಳನ್ನು ಜಗತ್ತಿನ ಎಲ್ಲಾ ದೇಶಗಳಿಗೂ ನೀಡುವ ಗುರಿ ಇವರದಾಗಿದೆ ಎಂಬುದು ಸ್ಪಷ್ಟ.



ನಾಗರಾಜ ನಂಜುಂಡಯ್ಯ

ಬಾಂಗ್ಲಾದೇಶದ ಗಾರ್ಮೆಂಟ್ ಮುಷ್ಕರ

ಅಗ್ರ ಜಾಗತಿಕ ಬ್ರಾಂಡ್ ಗಳ ಉಡುಪುಗಳನ್ನು ತಯಾರಿಸುವ ಗಾರ್ಮೆಂಟ್ ಫ್ಯಾಕ್ಟರಿಗಳಲ್ಲಿ ದುಡಿಯುವ ಸಾವಿರಾರು ಬಾಂಗ್ಲಾದೇಶದ ಕಾರ್ಮಿಕರು ಜನವರಿ ಎರಡನೇ ವಾರದಲ್ಲಿ ಮುಷ್ಕರ ಹೂಡಿದ್ದರು. ವೇತನವನ್ನು ಹೆಚ್ಚಿಸ ಬೇಕೆಂಬುದು ಇವರ ಪ್ರಮುಖ ಬೇಡಿಕೆಯಾಗಿದೆ. ಈ ಹೋರಾಟವು ಒಂದು ವಾರದ ಕಾಲ ನಡೆದು, ಪೋಲಿಸರೊಂದಿಗೆ ಘರ್ಷಣೆ ಉಂಟಾಗಿ ಒಬ್ಬ ಕಾರ್ಮಿಕನನ್ನು ಬಲಿ ತೆಗೆದುಕೊಂಡು ಐವತ್ತಕ್ಕೂ ಹೆಚ್ಚು ಕಾರ್ಮಿಕರು ಗಾಯಗೊಂಡು ಪರಿಸ್ಥಿತಿ ವಿಪರೀತ ಹದಗೆಟ್ಟಿತ್ತು. ರಾಜಧಾನಿ ಡಾಕಾ ಹೊರ ವಲಯದಲ್ಲಿರುವ ಸವರ್ ಎಂಬ ಉಡುಪು ತಯಾರಿಕಾ ಬೃಹತ್ ಪ್ರಮಾಣದ ಕಾರ್ಖಾನೆಯ ಕಾರ್ಮಿಕರನ್ನು ಚದುರಿಸಲು ಪೋಲಿಸರು ಜಲ ಫಿರಂಗಿಗಳನ್ನು ಹಾಗೂ ಅಶ್ರು ವಾಯು ದಾಳಿಯನ್ನು ನಡೆಸಿದ್ದಾರೆ. ಸುಮಾರು 52 ದೊಡ್ಡ ಕಾರ್ಖಾನೆಗಳ ಕಾರ್ಮಿಕರು ಪ್ರತಿಭಟನೆಯಲ್ಲಿ ಸೇರಿಕೊಂಡಿರುವ ಕಾರಣ ಈ ಎಲ್ಲಾ ಕಾರ್ಖಾನೆಗಳು ಸ್ಥಗಿತಗೊಂಡಿದ್ದವು. ಸುಮಾರು 50 ಸಾವಿರಕ್ಕೂ ಹೆಚ್ಚು ಕಾರ್ಮಿಕರು ಪ್ರತಿಭಟನೆಯಲ್ಲಿ ಭಾಗಿಗಳಾಗಿ ಹೋರಾಟದಲ್ಲಿ ತೊಡಗಿದ್ದರು.

ದೇಶದ ಪ್ರಧಾನ ರಫ್ತು, ನಿಕೃಷ್ಟ ವೇತನ

ಅತಿ ಕಡಿಮೆ ವೇತನ ಪಡೆಯುವ ಲಕ್ಷಾಂತರ ಟೈಲರ್ ಗಳಿಂದ ಹೊಲಿದ ಉಡುಪುಗಳ ಮಾರಾಟದ ಮೇಲೆ ಈ ದೇಶದ ಆರ್ಥಿಕತೆ ಹೆಚ್ಚು ಅವಲಂಬಿತವಾಗಿದೆ. ಸುಮಾರು 16.5 ಕೋಟಿ ಜನಸಂಖ್ಯೆ ಹೊಂದಿರುವ ಜಗತ್ತಿನ 8 ನೇ ಅತಿ ದೊಡ್ಡ ರಾಷ್ಟವಾದ ಬಾಂಗ್ಲಾದೇಶವು, ದಕ್ಷಿಣ ಏಷಿಯಾದಲ್ಲಿ ಉದಯೋನ್ಮುಖ ರಾಷ್ಟವಾಗಿದೆ. ಈ ನೆಲದಲ್ಲಿ ಸುಮಾರು 4,500 ಹೆಚ್ಚು ಜವಳಿ ಮತ್ತು ಬಟ್ಟೆ ಗಾರ್ಮೆಂಟ್ ಕಾರ್ಖಾನೆಗಳಲ್ಲಿ ಸುಮಾರು 40 ಲಕ್ಷ ಕಾರ್ಮಿಕರು (ಹೆಚ್ಚಾಗಿ ಮಹಿಳೆಯರು) ದುಡಿಯುತ್ತಾರೆ. ಬಾಂಗ್ಲಾದೇಶದ ಶೇ.80 ರಷ್ಟು ರಫ್ತು ಆದಾಯವು ಈ ಕಾರ್ಖಾನೆಗಳು ಸಿದ್ದಪಡಿಸಿ ರಫ್ತು ಮಾಡುವುದರ ಮೇಲೆಯೇ ಅವಲಂಬಿತವಾಗಿದೆ. ಕಳೆದ ವರ್ಷ ಒಂದರಲ್ಲೇ, 30 ಶತ ಕೋಟಿ ಡಾಲರ್ ನಷ್ಟು ಉಡುಪನ್ನು ಮಾರಾಟ ಮಾಡಿದ್ದಾರೆ. ಆದರೆ, ಈ ಕಾರ್ಖಾನೆಗಳಲ್ಲಿ ದುಡಿಯುವ ಕಾರ್ಮಿಕರಿಗೆ ಮಾತ್ರ ಕಡಿಮೆ ವೇತನದ ನೀತಿಯನ್ನು ಈ ಕಾರ್ಖಾನೆಗಳ ಮಾಲಿಕರು ಅನುಸರಿಸುತ್ತಿದ್ದಾರೆ. ಇದರಿಂದಲೇ ಕಾರ್ಮಿಕರು ಪ್ರತಿಭಟನೆಗೆ ಇಳಿದಿದ್ದಾರೆ. ಸಿದ್ದ ಉಡುಪುಗಳ ಪ್ರಮುಖ ಖರೀದಿದಾರರೆಂದರೆ, ದೈತ್ಯ ಜಾಗತಿಕ ವ್ಯಾಪಾರಿಗಳಾದ ಎಚ್ ಅಂಡ್ ಎಮ್, ಪ್ರೀಮಾರ್ಕ್, ವಾಲ್ ಮಾರ್ಟ್, ಟೆಸ್ಕೊ, ಅಲ್ಡಿ ಹಾಗೂ ಇನ್ನಿತರರು.

ಐದು ವರ್ಷಗಳ ನಂತರ ವೇತನವನ್ನು ತಿಂಗಳಿಗೆ ಕನಿಷ್ಟ 8,000 ಟಕಾ, (129 ಡಾಲರ್ ನಷ್ಟು) ಹೆಚ್ಚಿಸಲಾಗಿದೆ. ಇದು ತುಂಬಾ ಕಡಿಮೆ ಹೆಚ್ಚಳವಾಗಿದೆ. ಜೀವನಾಧಾರ ವಸ್ತುಗಳ ಬೆಲೆಗಳು ಹಾಗೂ ವಸತಿ, ಭೂಮಿ ಇನ್ನಿತರ ಅಗತ್ಯವಿರುವ ಬೆಲೆಗಳು ಹೆಚ್ಚಿರುವುದೇ ಇದಕ್ಕೆ ಕಾರಣ, ಜಾಗತಿಕವಾಗಿ, ಚೀನಾ, ಮತ್ತು ಬಾಂಗ್ಲಾ ದೇಶಗಳು ಉಡುಪು ರಫ್ತಿನಲ್ಲಿ ಮೊದಲೆರಡು ಸ್ಥಾನದಲ್ಲಿವೆ. ಮುಂದಿನ 2023 ರೊಳಗೆ, ಬಾಂಗ್ಲಾದೇಶದ ಈ ಉದ್ಯಮಗಳು, 50 ಶತಕೋಟಿ ಡಾಲರ್‌ಗಳಷ್ಟು ವಿಸ್ತರಿಸುವ ಮಹತ್ವಾಕಾಂಕ್ಷೆಯ ಯೋಜನೆಯನ್ನು ಹೊಂದಿವೆ.

ಬಾಂಗ್ಲಾದೇಶವು ಒಂದು ಬಡ ದೇಶವಾಗಿದ್ದರೂ ಸಹಾ, ಉಡುಪು ಕಾರ್ಖಾನೆಗಳ ಕಾರ್ಮಿಕರ ಶ್ರಮದಿಂದ ಪ್ರಮುಖ ಉತ್ಪಾದನಾ ಕೇಂದ್ರವಾಗಿ ಪರಿವರ್ತನೆಗೊಂಡಿದೆ. ಆದಾಗ್ಯೂ, ಈ ಕಾರ್ಮಿಕರು ಮಾತ್ರ ವಿಶ್ವದಲ್ಲಿಯೇ ಅತ್ಯಂತ ಕಡಿಮೆ ವೇತನ ಪಡಿಯುತ್ತಿದ್ದಾರೆ ಮತ್ತು ಕೆಲಸದ ಪರಿಸ್ಥಿತಿಗಳೂ ಅಪಾಯಕಾರಿಯಾಗಿವೆ ಎಂದು ಗಾರ್ಮೆಂಟ್ ಮತ್ತು ಕೈಗಾರಿಕೆ ವರ್ಕರ್ಸ್ ಫೆಡರೇಷನ್ ಮುಖ್ಯಸ್ಥ



ಬಾಬುಲ್ ಅಖ್ತರ್ ಹೇಳುತ್ತಾರೆ. 2013 ರಲ್ಲಿ, ರಾಣಾ ಪ್ಲಾಜಾ ಉಡುಪು ಕಾರ್ಖಾನೆಯ ಕುಸಿತವು ಜಗತ್ತಿನ ಅತಿ ಕೆಟ್ಟ ಅಪಘಾತವಾಗಿತ್ತು ಈ ಘಟನೆ ಸುಮಾರು 1130 ಕ್ಕಿಂತ ಹೆಚ್ಚು ಜನರನ್ನು ಬಲಿ ತೆಗೆದು ಕೊಂಡಿತ್ತು. ಅದೆ ರೀತಿಯಾಗಿ, ಕಳೆದ ಜನವರಿ 9 ರಂದು ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಸುಮಾರು 10 ಸಾವಿರ ಜನರನ್ನು ಚದುರಿಸಲು ಪೋಲಿಸರು ನೀರಿನ ಪಿರಂಗಿ ಬಳಸಿದ್ದಾರೆ. ಕಾರ್ಮಿಕರು ಹೆದ್ದಾರಿಯಲ್ಲಿ ಧರಣಿ ಮುಷ್ಕರ ಹೂಡಿ ರಸ್ತೆ ತಡೆದಿದ್ದಾರೆ. ಅನೇಕರಿಗೆ ಗಾಯಗಳಾಗಿವೆ. ಒಬ್ಬ ಕಾರ್ಮಿಕ ಸತ್ತಿದ್ದಾನೆ.

ಡಿಸೆಂಬರ್ 30 ರಂದು ನಡೆದ ಚುನಾವಣೆಯಲ್ಲಿ ಹಿಂಸೆ, ಬೆದರಿಕೆ, ಮತಗಟ್ಟೆ ಮೇಲೆ ದಾಳಿ, ರಿಗಿಂಗ್ ಆರೋಪಗಳನ್ನು ಹೊತ್ತು, ಆ ಮೂಲಕ ಮೂರನೇ ಅವಧಿಗೆ ಪ್ರಧಾನಿಯಾದ ಶೇಖ್ ಹಸೀನಾ ಅವರ ಆಡಳಿತದ ವಿರುದ್ದದ, ಮೊದಲ ಪ್ರಮುಖ ಪ್ರತಿಭಟನೆ ಇದಾಗಿದೆ. ನಮ್ಮ ಬೇಡಿಕೆಗಳನ್ನು ಈಡೇರಿಸುವ ತನಕ ರಸ್ತೆಗಳಿಂದ ಕದಲುವುದಿಲ್ಲ ಎಂಬ ಇವರ ಹೋರಾಟದ ಗಟ್ಟಿತನ ಪ್ರಧಾನಿ ಹಸೀನಾ ಆಡಳಿತಕ್ಕೆ ಗಂಭೀರವಾದ ತಲೆ ನೋವಿನ ವಿಷಯವಾಗಿತ್ತು.

ಮುಷ್ಕರದ ಎರಡನೇ ವಾರದ ಸರಕಾರ ನಡೆಸಿದ ದಮನ ಮತ್ತು ವೇತನ ಹೆಚ್ಚಳದ ಆಶ್ವಾಸನೆ ಮೇಲೆ ಮುಷ್ಕರ ನಿಂತಿತು. ಆದರೆ ಮುಷ್ಕರ ನಿಂತ ಮೇಲೆ, ಮುಷ್ಕರದ ಸಮಯದಲ್ಲಿ ಫ್ಯಾಕ್ಟರಿಯ ಆಸ್ತಿಪಾಸ್ತಿ ನಷ್ಟ ಮಾಡಿದ ಆಪಾದನೆ ಮೇಲೆ 750 ಕಾರ್ಮಿಕರನ್ನು ವಜಾ ಮಾಡಲಾಗಿದೆ. ಈ ಫ್ಯಾಕ್ಟರಿಗಳ ಆಡಳಿತ ವರ್ಗ ಮತ್ತು ಸರಕಾರ ವರ್ತಿಸಿದ ರೀತಿ ನೋಡಿದರೆ ಮುಷ್ಕರಗಳು ಮತ್ತೆ ಭುಗಿಲೆದ್ದರೆ ಅಚ್ಚರಿ ಪಡಬೇಕಾಗಿಲ್ಲ.

ಅಮೆರಿಕ ಹಿಂದಿನ 'ತಾರಾ ಸಮರ'ದ ಮಾದರಿಯ ಕ್ಷಿಪಣಿ–ನಿರೋಧಕ ಗುರಾಣಿಗಳನ್ನು ಅಭಿವೃದ್ಧಿಪಡಿಸಿ ತನ್ನ ಅಣ್ವಸ್ತ್ರ ಯಜಮಾನಿಕೆ ಸ್ಥಾಪಿಸಲು ಹವಣಿಸುತ್ತಿದೆ. ರಷ್ಯಾ ಅಭಿವೃದ್ಧಿಪಡಿಸುತ್ತಿರುವ ಹೈಪರ್–ಸೋನಿಕ್ ಕ್ಷಿಪಣಿಗಳು ಅಮೆರಿಕಾ ಯೋಜಿಸಿರುವ ಯಾವುದೇ ಕ್ಷಿಪಣಿ–ನಿರೋಧಕ ಗುರಾಣಿಗಳನ್ನು ಸೋಲಿಸುವ ಸಾಮರ್ಥ್ಯ ಹೊಂದಿವೆ. ಈ ನವೀಕೃತ ಶಸ್ತ್ರಾಸ್ತ್ರಗಳ ಸ್ಪರ್ಧೆಯ ಬಗ್ಗೆ ಟ್ರಂಪ್ ರಷ್ಯಾದೊಂದಿಗೆ ಯಾವುದೇ ಮಾತುಕತೆಗೆ ಸಿದ್ದರಿಲ್ಲ. ಅದು ತನ್ನ ಪರಮಾಣು ಪ್ರಾಬಲ್ಯದ ಎದುರು ರಷ್ಯಾದ ಮತ್ತು ಇಡೀ ಜಗತ್ತಿನ ಪರಮಾಣು ಶರಣಾಗತಿಯನ್ನು ಬಯಸುತ್ತಿದೆ. ಆದರೆ ರಷ್ಯಾ ಅದನ್ನು ಒಪ್ಪಿಕೊಳ್ಳುತ್ತಿಲ್ಲ. ಇದು ಪ್ರಳಯಾಂತಕ ಅಣ್ವಸ್ತ್ರ ಯುದ್ಧದತ್ತ ಜಗತ್ತನ್ನು ತಳ್ಳುತ್ತಿದೆ. ಇವು ಕೇವಲ ರಷ್ಯಾ ಮತ್ತು ಚೀನಾಗಳಿಗೆ ಮಾತ್ರ ಅಪಾಯಕಾರಿಯಾಗಿ ಉಳಿಯುವುದಿಲ್ಲ, ಆದರೆ, ಇಡೀ ಮಾನವ ಜಗತ್ತಿನ್ನು ಸರ್ವ ನಾಶ ಮಾಡುವಷ್ಟು ಅಪಾಯಕಾರಿಯಾಗಿವೆ. ಆದ್ದರಿಂದ, ಜಾಗತಿಕವಾಗಿ ಶಾಂತಿ ಪ್ರಕ್ರಿಯೆಗಾಗಿ ಹೋರಾಡಲು, ತುರ್ತಾಗಿ ವಿಶಾಲವಾದ ಚಳುವಳಿಯನ್ನು ಪುನರುಜ್ಜೀವನಗಳಿಸಬೇಕಾದ ಅಗತ್ಯವಿದೆ. ಟ್ರಂಪ್ ನ ಹೊಸ 'ಅಣ್ವಸ್ತ್ರ ಸಿದ್ದಾಂತ' ವನ್ನು ಹಿಮ್ಮೆಟ್ಟಿಸ ಬೇಕಾಗಿದೆ.



JANASHAKTHI KANNADA VARA PATRIKE FEBRUARY 11-17, 2019 Price: Rs. 10/- Date of Publication: 8 FEBRUARY 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

‘9 ವರ್ಷಗಳಿಂದ ಒಂದು ಪೈಸೆಯನ್ನು ಕೇಂದ್ರ ಸರ್ಕಾರ ಹೆಚ್ಚಿಸಿಲ್ಲ’
ಸರಕಾರಕ್ಕೆ ಬಿಸಿ ಮುಟ್ಟಿಸಿದ ಬಿಸಿಯೂಟ ತಾಯಂದಿರು



ರಾಜ್ಯದಲ್ಲಿ 54,389 ಶಾಲೆಗಳಲ್ಲಿ ಸುಮಾರು 54 ಲಕ್ಷ ಮಕ್ಕಳಿಗೆ 1.18 ಲಕ್ಷ ಮಹಿಳೆಯರು ಅಡುಗೆ ಮಾಡಿ ಬಡಿಸುವುದು ಹಾಗೂ ಸ್ವಚ್ಛತಾ ಕೆಲಸ ಮಾಡುತ್ತಿದ್ದಾರೆ. ಮಕ್ಕಳ ಕಲಿಕೆಗೆ ಪೂರವಾಗಿ ಕೆಲಸ ನಿರ್ವಹಿಸುವ ಈ ಮಹಿಳೆಯರ ಸಂಬಳ ತಿಂಗಳಿಗೆ ಕೇವಲ 2600, 2700 ಮಾತ್ರ. ಕೇಂದ್ರ ಸರ್ಕಾರ ಈ ಯೋಜನೆಯ ಜವಾಬ್ದಾರಿಯನ್ನು ರಾಜ್ಯ ಸರ್ಕಾರಗಳ ಹೆಗಲ ಮೇಲೆ ಹಾಕಿ ತನ್ನ ಮೂಲಭೂತ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುತ್ತಿದೆ. ಈಗಿರುವ ಸಂಬಳದಲ್ಲಿ ಕೇಂದ್ರ ಸರ್ಕಾರದ ಪಾಲು ಕೇವಲ 600 ರೂ ಮಾತ್ರ. ಕಳೆದ 9 ವರ್ಷಗಳಿಂದ ಕೇಂದ್ರ ಸರ್ಕಾರ ತನ್ನ ಬಜೆಟ್‌ನಲ್ಲಿ ಬಿಸಿಯೂಟ ನೌಕರರಿಗೆ ಒಂದು ಪೈಸೆಯನ್ನು ಹೆಚ್ಚಳ ಮಾಡಿಲ್ಲ. ಈ ಬಾರಿಯೂ ಯಾವ ಹೆಚ್ಚಳವನ್ನೂ ಮಾಡಿಲ್ಲ. ಇದರ ಪರಿಣಾಮವಾಗಿ ಬಿಸಿಯೂಟದ ತಾಯಂದಿರಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳ ವಿರುದ್ಧ ತೀವ್ರ ಆಕ್ರೋಶ ಉಂಟಾಗಿದೆ. ಈ ಕೇಂದ್ರ ಬಜೆಟಿನಿಂದ ಆಕ್ರೋಶಗೊಂಡ ಅವರು ಅಲಲ್ಲಿ ಸ್ವಯಂಸ್ಫೂರ್ತವಾಗಿ ಪ್ರತಿಭಟನೆ ನಡೆಸಿದ್ದರು. ಕೇಂದ್ರೀಯ ಕಾರ್ಮಿಕ ಸಂಘಟನೆಗಳಿಗೆ



ಸಂಯೋಜಿತವಾದ ಎಲ್ಲಾ ಬಿಸಿಯೂಟ ನೌಕರರ ಸಂಘಟಗಳು ಸೇರಿ ಕೇಂದ್ರ ಬಜೆಟಿನ ವಿರುದ್ಧ ಫೆಬ್ರುವರಿ 8ರಂದು ದೆಹಲಿಯಲ್ಲಿ ಮತ್ತು ದೇಶದಾದ್ಯಂತ ಪ್ರತಿಭಟನೆಗೆ ಕರೆ ಕೊಟ್ಟಿದ್ದವು.

ರಾಜ್ಯ ಸರಕಾರ ಫೆಬ್ರುವರಿ 8ರಂದು ಬಜೆಟ್ ಮಂಡಿಸಲಿರುವುದರಿಂದ ಬೆಂಗಳೂರಲ್ಲಿ ಫೆ.7ರಂದೇ ಬಿಸಿಯೂಟ ತಾಯಂದಿರು ಪ್ರತಿಭಟನೆ ನಡೆಸಿದರು.. ಅಂದು ಸಾವಿರಾರು ಬಿಸಿಯೂಟ ತಾಯಂದಿರು ಬೆಂಗಳೂರಿಗೆ ಹರಿದು ಬಂದು ರಾಜಭವನ ಚಲೋ ನಡೆಸುವ ಕೇಂದ್ರ ಮತ್ತು ರಾಜ್ಯ ಸರಕಾರಗಳೆರಡಕ್ಕೂ ಬಿಸಿ ಮುಟ್ಟಿಸಿದ್ದಾರೆ. ಫೆ.7ರಂದು ಬೆಳಿಗ್ಗೆ ರಾಜಭವನ ದತ್ತ ಸಾವಿರಾರು ಬಿಸಿಯೂಟ ತಾಯಂದಿರು ಹೊರಟಾಗ ಅವರನ್ನು ಪೋಲಿಸರು ತಡೆದರು. ಸ್ವಲ್ಪ ಚಕಮಕಿಯೂ ನಡೆಯಿತು. ಅಲ್ಲೇ ಧರಣಿ ಆರಂಭಿಸಿದರು. ಬಿಸಿಯೂಟ ನೌಕರರ ಸಂಘ ಮತ್ತು ಸೋದರ ಸಂಘಟನೆಗಳ ನಾಯಕರು ಅವರನ್ನು ಉದ್ದೇಶಿಸಿ ಮಾತನಾಡಿದರು. ಆಕ್ರೋಶ ವ್ಯಕ್ತ ಪಡಿಸಲು ಕೇಂದ್ರ ಸರಕಾರದ ಪ್ರತಿಕೃತಿಯನ್ನು ಸುಡಲಾಯಿತು.

ಬಿಸಿಯೂಟ ತಾಯಂದಿರ ಆಕ್ರೋಶ ಕಂಡು ಶಿಕ್ಷಣ ಇಲಾಖೆಯ ಮುಖ್ಯ ಕಾರ್ಯದರ್ಶಿ ಉಮಾಶಂಕರ್ ಸೇರಿದಂತೆ ಹಿರಿಯ ಅಧಿಕಾರಿಗಳು ಬಂದು ನಾಯಕರೊಂದಿಗೆ ಮಾತುಕತೆ ನಡೆಸಿದರು. ಅವರಿಗೆ ಬಿಸಿಯೂಟ ತಾಯಂದಿರ ಆಕ್ರೋಶ ಮತ್ತು ಹಕ್ಕೊತ್ತಾಯಗಳ ಬಗ್ಗೆ ಮನವರಿಕೆ ಮಾಡಿಕೊಡಲಾಯಿತು. ಅವರ ಮೂಲಕ ರಾಜ್ಯ ಮತ್ತು ಕೇಂದ್ರ ಸರಕಾರಗಳಿಗೆ ಬಿಸಿಯೂಟ ತಾಯಂದಿರ ಹಕ್ಕೊತ್ತಾಯಗಳನ್ನು ಒಳಗೊಂಡ ಮನವಿಯನ್ನು ಅರ್ಪಿಸಲಾಯಿತು. ಬಿಸಿಯೂಟ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಮಾಲಿನಿ ಮೇಸ್ತಾ ಮನವಿಯನ್ನು ನೆರೆದವರಿಗೆ ಓದಿ ಹೇಳಿದರು. ಸಿಐಟಿಯು ಪ್ರಧಾನ ಕಾರ್ಯದರ್ಶಿ ಎಸ್. ವರಲಕ್ಷ್ಮಿ ಮತ್ತು ಶಿಕ್ಷಣ ಇಲಾಖೆಯ ಮುಖ್ಯ ಕಾರ್ಯದರ್ಶಿ ಉಮಾಶಂಕರ್ ಅವರೂ ಮಾತನಾಡಿದರು.

ಕೇಂದ್ರ ಸರ್ಕಾರ ಬಜೆಟನ್ನು ಅಂತಿಮಗೊಳಿಸುವಾಗ ಕನಿಷ್ಠ 5000 ರೂ. ಸಂಭಾವನೆ ಹೆಚ್ಚಿಸಬೇಕು. ಅದಕ್ಕೆ ಕೇವಲ 15 ಸಾವಿರ ಕೋಟಿ ರೂ. ಮಾತ್ರ ಖರ್ಚು ಆಗುತ್ತದೆ ಎಂಬುದು ಅವರ ಪ್ರಮುಖ ಒತ್ತಾಯ. ಬಿಸಿಯೂಟ ಯೋಜನೆಯ ಖಾಸಗೀಕರಣ ಮಾಡಬಾರದು, ಬಿಸಿಯೂಟ ಯೋಜನೆಗೆ ಕಡಿತ ಮಾಡಿರುವ ಅನುದಾನ ವಾಪಾಸ್ ನೀಡಬೇಕು, 2013 ರಲ್ಲಿ ಭಾರತೀಯ ಕಾರ್ಮಿಕ ಸಮ್ಮೇಳನದ ಇವರನ್ನು ಕೆಲಸಗಾರರು ಎಂದು ಪರಿಗಣಿಸಿ ಕಾನೂನಾತ್ಮಕ ಸೌಲಭ್ಯಗಳನ್ನು ನೀಡಬೇಕೆಂಬ ನಿರ್ಣಯ ಜಾರಿ ಮಾಡಬೇಕು, ಎಂಬಿತ್ಯಾದಿ ಮನವಿಯಲ್ಲಿ ಕೇಂದ್ರ ಸರಕಾರಕ್ಕೆ ಸಲ್ಲಿಸಿದ ಪ್ರಮುಖ ಹಕ್ಕೊತ್ತಾಯಗಳು.



ಬಿಸಿಯೂಟ ನೌಕರರನ್ನು “ಡಿ”ಗ್ರೂಪ್ ನೌಕರರೆಂದು ಪರಿಗಣಿಸಬೇಕು. 4/10/2018 ರಂದು ಶಿಕ್ಷಣ ಸಚಿವರಾದ ಮಹೇಶ್ ಮತ್ತು 26/10/2018 ರಂದು ಪ್ರಧಾನ ಕಾರ್ಯದರ್ಶಿ ಶಾಲಿನಿ ರಜನಿಶ್ ರವರ ಜೊತೆ ನಡೆದ ಸಭೆಯಲ್ಲಿ ಕೊಡಲಾದ ಆಶ್ವಾಸನೆಗಳನ್ನು ಜಾರಿ ಮಾಡಬೇಕು. ಬಿಸಿಯೂಟ ಯೋಜನೆಯನ್ನು 12ನೇ ತರಗತಿಯ ವರೆಗೆ ವಿಸ್ತರಣೆ ಮಾಡಬೇಕು. ಪ್ರತಿ ಶಾಲೆಯಲ್ಲಿ ಕನಿಷ್ಠ 2 ಅಡುಗೆಯವರು ಇರಲೇಬೇಕು. ಅಡುಗೆ ಸಂಪೂರ್ಣ ಜವಾಬ್ದಾರಿಯನ್ನು ಶಿಕ್ಷಕರಿಂದ ಬಿಡಿಸಿ ಮುಖ್ಯ ಅಡುಗೆಯವರಿಗೆ ಕೊಡಬೇಕು. ಹೆರಿಗೆ ರಜಾ, ಹೇರಿಗೆ ಭತ್ಯೆ ನಿಡಬೇಕು. ರಾಷ್ಟ್ರೀಯ ಸ್ವಾಸ್ಥ ಭೀಮಾಯೋಜನೆ ಜಾರಿ ಮಾಡಬೇಕು. ಆರೋಪ ಹೊರಿಸಿ ಕೆಲಸದಿಂದ ತೆಗೆಯುವುದನ್ನು ನಿಲ್ಲಿಸಬೇಕು. ಅಪಘಾತ ಪರಿಹಾರ ಮೊತ್ತ ತಕ್ಷಣ ನೀಡಬೇಕು, ಎಂಬಿತ್ಯಾದಿ ಮನವಿಯಲ್ಲಿ ರಾಜ್ಯ ಸರಕಾರಕ್ಕೆ ಸಲ್ಲಿಸಿದ ಪ್ರಮುಖ ಹಕ್ಕೊತ್ತಾಯಗಳು.



ನಿವೃತ್ತಿವರೆಗೂ ಸೇವಾ ಭದ್ರತೆಗೆ – ಹಾಸ್ಟೆಲ್ ಹೊರಗುತ್ತಿಗೆ ನೌಕರರ 3 ದಿನಗಳ ಸತತ ಹೋರಾಟ

ಸರ್ಕಾರಿ ವಿದ್ಯಾರ್ಥಿನಿಲಯ ಮತ್ತು ವಸತಿ ಶಾಲೆಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಅಡುಗೆ ತಯಾರಕರು ಮತ್ತು ಸಹಾಯಕರಿಗೆ ನಿವೃತ್ತಿವರೆಗೂ ಸೇವಾ ಭದ್ರತೆ ಒದಗಿಸುವಂತೆ ಆಗ್ರಹಿಸಿ ‘ಹೊರಗುತ್ತಿಗೆ ನೌಕರರು’ ಸ್ವಾತಂತ್ರ್ಯ ಉದ್ಯಾನದಲ್ಲಿ ಫೆಬ್ರುವರಿ 6 ರಂದು ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದರು.

‘ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿಶಾಲಾ ಹೊರಗುತ್ತಿಗೆ ನೌಕರರ ಸಂಘ’ದ ನೇತೃತ್ವದಲ್ಲಿ ಹೊರಗುತ್ತಿಗೆ ಸಿಬ್ಬಂದಿ ರೈಲ್ವೆ ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೂ ಪ್ರತಿಭಟನಾ ಮೆರವಣಿಗೆ ನಡೆಸಿದರು. ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

‘ಹಿಂದುಳಿದ ವರ್ಗಗಳ ಕಲ್ಯಾಣ, ಅಲ್ಪಸಂಖ್ಯಾತ ಮತ್ತು ಸಮಾಜ ಕಲ್ಯಾಣ ಇಲಾಖೆಗಳಡಿ ಅಡುಗೆ ತಯಾರಕರು, ಸಹಾಯಕರು ಮತ್ತು ಕಾವಲುಗಾರರ ಹುದ್ದೆಗೆ 5 ಸಾವಿರ ನೌಕರರನ್ನು ಕಾಯಂ ಮಾಡಿಕೊಂಡು ಹೊರಗುತ್ತಿಗೆ ನೌಕರರನ್ನು ಕೈಬಿಡಲಾಗಿದೆ. ಇದೇ ಉದ್ಯೋಗ ನಂಬಿ ಜೀವನ ಸಾಗಿಸುತ್ತಿದ್ದ ನಮ್ಮನ್ನು ಬೀದಿಗೆ ತಳ್ಳಿದೆ’ ಎಂದು ಪ್ರತಿಭಟನಾಕಾರರು ದೂರಿದರು.

ಸಂಘದ ಅಧ್ಯಕ್ಷ ನಿತ್ಯಾನಂದ ಸ್ವಾಮಿ, ‘ಆರು ತಿಂಗಳಲ್ಲಿ ಹೊರಗುತ್ತಿಗೆ ಸಿಬ್ಬಂದಿ ಸಮಸ್ಯೆಗಳನ್ನು ಇತ್ಯರ್ಥಪಡಿಸಲಾಗುವುದು ಎಂದು ಸರ್ಕಾರ ನೀಡಿದ್ದ ಭರವಸೆ ಸುಳ್ಳಾಗಿದೆ’ ಎಂದು ಕಿಡಿಕಾರಿದರು.

‘ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರು ಹೊರಗುತ್ತಿಗೆ ನೌಕರರನ್ನು ಮರಳಿ ಕೆಲಸಕ್ಕೆ ಸೇರಿಸಿಕೊಳ್ಳುವಂತೆ ಹೊರಡಿಸಿದ ಆದೇಶವನ್ನು ಪರಿಗಣಿಸದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಮರು ಕೆಲಸಕ್ಕೆ ಸೇರಿಸಿಕೊಂಡು ನಿವೃತ್ತಿ ವಯಸ್ಸಿನ ವರೆಗೂ ಸೇವೆಯಲ್ಲಿ ಮುಂದುವರಿಸಬೇಕು. ವೇತನದಲ್ಲಿ ಕಡಿತ ಮಾಡಿರುವ ಭವಿಷ್ಯ ನಿಧಿ, ಇಎಸ್.ಐ ಖಾತೆಗಳಿಗೆ ಜಮಾ ಮಾಡದ ಹಣ ಹಿಂದಿರುಗಿಸಬೇಕು. ಬಾಕಿ ಉಳಿಸಿಕೊಂಡಿರುವ ವೇತನವನ್ನು ನೀಡಬೇಕು. ವಾರಕ್ಕೊಂದು ರಜೆ ಕೊಡುವುದನ್ನು ಕೂಡಲೇ ಜಾರಿಗೊಳಿಸಬೇಕು’ ಎಂದು ಆಗ್ರಹಿಸಿದರು.

ಮುಖ್ಯಮಂತ್ರಿಯ ಆಶ್ವಾಸನೆ ಸಿಗದೆ ಧರಣಿ ಮುಷ್ಕರ ಹಿಂತೆಗೆಯುವುದಿಲ್ಲ. ಸ್ಥಳದಿಂದ ಕದಲುವುದಿಲ್ಲ ಎಂದು ಬೆಂಗಳೂರಿನ ಹೊರಗಿನಿಂದ ಬಂದಿದ್ದ ಮಹಿಳೆಯರೇ ಹೆಚ್ಚಾಗಿ ಇದ್ದ ಸಾವಿರಕ್ಕೂ ಹೆಚ್ಚು ಹೊರಗುತ್ತಿಗೆ ಕಾರ್ಮಿಕರು ಪಣ ತೊಟ್ಟಿದ್ದರು. ಆದ್ದರಿಂದ ಸರಕಾರದ ಪರವಾಗಿ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರು ಹಾಗೂ ಜಂಟಿ ನಿರ್ದೇಶಕರು ಬಂದು ಮನವಿ ಸ್ವಿಕರಿಸಿದರೂ ಧರಣಿ ಹಿಂತೆಗೆಯಲಿಲ್ಲ. ಎರಡು ರಾತ್ರಿ ಟೆಂಟಿನಲ್ಲೇ ಕಳೆದರೂ ಧರಣಿ ನಿರತ ನೌಕರರ ಸ್ಥೈರ್ಯ ಕುಗ್ಗಲಿಲ್ಲ. ಮೂರನೇ ದಿನ ಮುಖ್ಯಮಂತ್ರಿಯ ಕಾರ್ಯದರ್ಶಿ ಸೆಲ್ವ ಕುಮಾರ್ ಮತ್ತು ಎರಡು ಸಂಬಂಧ ಪಟ್ಟ ಇಲಾಖೆಗಳ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ) ಆಯುಕ್ತರು ಬಂದು ಮುಖ್ಯಮಂತ್ರಿಯ ಪರವಾಗಿ ನಾಯಕರನ್ನು ಭೇಟಿ ಮಾಡಿದರು. ವಿಷಯಗಳನ್ನು ಮುಖ್ಯಮಂತ್ರಿಯವರಿಗೆ ತಿಳಿಸಲಾಗಿದೆ. ಮಾರ್ಚ್ ಮೊದಲ ವಾರದೊಳಗೆ ಮುಖ್ಯಮಂತ್ರಿಯವರು ಭೇಟಿ ವ್ಯವಸ್ಥೆ ಮಾಡಿ ಈ ವಿಷಯವನ್ನು ಇತ್ಯರ್ಥ ಮಾಡುವುದಾಗಿ ಭರವಸೆ ನೀಡಿದ ಮೇಲೆ ಧರಣಿ ಮುಷ್ಕರ ಹಿಂತೆಗೆದುಕೊಳ್ಳಲಾಯಿತು ಎಂದು ಸಂಘದ ನಾಯಕರಿಂದ ತಿಳಿದು ಬಂದಿದೆ.







JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**